ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

**(Karnataka Agriculture Price Commission)**

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

# ರಾಜ್ಯದ ಬೀಳು ಭೂಮಿ ಸದ್ಬಳಕೆ ಹಾಗೂ ಭೂ ಹಿಡುವಳಿ ಕ್ರೋಢೀಕರಣ

## ಅಧ್ಯಯನ, ಚರ್ಚೆ, ಸಂವಾದ ಹಾಗೂ ಅಭಿಪ್ರಾಯ ಆಧರಿತ ಶಿಫಾರಸ್ಸುಗಳು

ಮಾರ್ಚ್ 2017



ಕೃಷಿ ಆಯುಕ್ತರ ಕಾರ್ಯಾಲಯ ಆವರಣ

ಶೇಷಾದ್ರಿ ರಸ್ತೆ, ಬೆಂಗಳೂರು – 560 001

# ಕರ್ನಾಟಕ ಕೃಷಿ ಬೆಲೆ ಆಯೋಗದ ತಂಡ

| | | |
|---|---|---|
| 1. | **ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ** | **ಅಧ್ಯಕ್ಷರು** |
| 2. | ಶ್ರೀ. ಹನುಮನಗೌಡ ಬೆಳಗುರ್ಕಿ, ರೈತ ಪ್ರತಿನಿಧಿ | ಸದಸ್ಯರು |
| 3. | ಶ್ರೀ. ಎಂ.ಮಹೇಶ್ವರ್ ರಾವ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 4. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 5. | ಶ್ರೀ. ಬಿ. ಸತೀಶ್, ಭಾ.ಅ.ಸೇ., ಆಯುಕ್ತರು, ಕೃಷಿ ಇಲಾಖೆ | ಖಾಯಂ ಆಹ್ವಾನಿತರು |
| 6. | ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಖಾಯಂ ಆಹ್ವಾನಿತರು |
| 7. | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಖಾಯಂ ಆಹ್ವಾನಿತರು |
| 8. | ಆಯುಕ್ತರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ | ಖಾಯಂ ಆಹ್ವಾನಿತರು |
| 9. | ಶ್ರೀ. ಬಿ.ವೈ. ಶ್ರೀನಿವಾಸ್, ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 10. | ಡಾ. ಎನ್. ವಿ. ಕಮಲ, ಉಪ ಕೃಷಿ ನಿರ್ದೇಶಕರು | ತಾಂತ್ರಿಕ ಅಧಿಕಾರಿಗಳು |

## ತಾಂತ್ರಿಕ ಸಿಬ್ಬಂದಿ

### ತಾಂತ್ರಿಕ ಸಲಹೆಗಾರರು

ಡಾ. ಕೆ. ಜೆ. ಪರಮೇಶ್ವರಪ್ಪ
ಡಾ. ಕೆ.ಎಸ್. ಜನಾರ್ಧನ

### ತಾಂತ್ರಿಕ ಸಹಾಯಕರು

ಶ್ರೀ. ಗಿರೀಶ್ ಪಿ. ಎಸ್.
ಕು. ಶಿಲ್ಪಶ್ರೀ ಜಿ.ಎಸ್.
ಕು. ವಾಣಿ ಎನ್.
ಶ್ರೀ. ಚಿರಂತನ್ ಜಿ.
ಕು. ಷಗುಪ್ತಾ ಅ. ಶೇಖ

### ಸಹಾಯಕರು

ಶ್ರೀ. ಅಭಿನಂದನ್ ಟಿ.ಜಿ. (ಪ್ರದಸ)
ಶ್ರೀ. ಬಿ.ಸಿ. ಪ್ರಸಾದ್ (ಬೆ.ಗಾ.)
ಕು. ನೀರಜಾ ನಾಯಕ್ (ಆಪ್ತ ಕಾರ್ಯದರ್ಶಿ)
ಕು. ಲಾವಣ್ಯ ಆರ್. ಮತ್ತು ಶ್ರೀ. ಸಂದೀಪ ಆರ್. (ಸಹಾಯಕರು)
ಶ್ರೀ. ಎನ್.ಎಸ್. ಶ್ರೀಕಾಂತ್ (ವಾಹನ ಚಾಲಕರು)
ಶ್ರೀ. ಅರಬ್ ಜಾನ್ ಮತ್ತು ಶ್ರೀ. ಡಿ. ಜಿ. ಶಂಕರ್ ('ಡಿ' ಗ್ರೂಪ್ ನೌಕರರು)

Design by dataworx (www.dataworx.co.in)

ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

**(Karnataka Agriculture Price Commission)**

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

# ರಾಜ್ಯದ ಬೀಳು ಭೂಮಿ ಸದ್ಬಳಕೆ ಹಾಗೂ ಭೂ ಹಿಡುವಳಿ ಕ್ರೋಢೀಕರಣ

## ಅಧ್ಯಯನ, ಚರ್ಚೆ, ಸಂವಾದ ಹಾಗೂ ಅಭಿಪ್ರಾಯ ಆಧರಿತ ಶಿಫಾರಸ್ಸುಗಳು

ಮಾರ್ಚ್ 2017

ಕೃಷಿ ಆಯುಕ್ತರ ಕಾರ್ಯಾಲಯ ಆವರಣ
ಶೇಷಾದ್ರಿ ರಸ್ತೆ, ಬೆಂಗಳೂರು – 560 001

# ಮುನ್ನುಡಿ

ಕರ್ನಾಟಕವು **ಪ್ರಗತಿಪರ ಭೂ ಸುಧಾರಣಾ** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವ ಮುಂಚೂಣಿ ರಾಜ್ಯವಾಗಿದ್ದರೂ, ಕೃಷಿ ಭೂಮಿಯನ್ನು ಬೀಳು ಬಿಡುವುದು, ಭೂ ವಿಚ್ಛಿದ್ರೀಕರಣ, ಅನಧಿಕೃತ ಗುತ್ತಿಗೆ ಇತ್ಯಾದಿಗಳು ಅಧಿಕವಾಗುತ್ತಿವೆ. ಈ ನಿಟ್ಟಿನಲ್ಲಿ ಸಮಗ್ರ ಅಧ್ಯಯನವನ್ನು ಕೈಗೊಂಡು ರೈತರು, ತಜ್ಞರು ಮತ್ತಿತರರೊಡನೆ ಚರ್ಚೆ, ಸಂವಾದಗಳನ್ನು ನಡೆಸಿ, **ರಾಜ್ಯದ ಕೃಷಿ ಬೀಳು ಭೂಮಿಯ ಸದ್ಬಳಕೆ ಹಾಗೂ ಭೂ ಹಿಡುವಳಿ ಕ್ರೋಢೀಕರಣಕ್ಕಾಗಿ** ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಅನುವು ಮಾಡಿಕೊಡಲು ಈ ವರದಿ ತಯಾರಿಸಲಾಗಿದೆ.

ಕೃಷಿ ಬೀಳು ಭೂಮಿಯ ಸದ್ಬಳಕೆಗಾಗಿ ಕೇಂದ್ರದ ನೀತಿ ಆಯೋಗವು ಹೊರತಂದಿರುವ **"ಮಾದರಿ ಭೂ ಗುತ್ತಿಗೆ ಕಾಯ್ದೆ -2016"** ಅನ್ನು ಈ ವರದಿಯಲ್ಲಿ ಪ್ರಸ್ತಾಪಿಸಿದ್ದು, ಈ ವಿಚಾರದಲ್ಲಿ ವಿಶೇಷವಾಗಿ **ಮಹಿಳೆಯರಿಗೆ ಪ್ರಾಧಾನ್ಯತೆ ನೀಡುವ ಗುಂಪು ಕೃಷಿ**ಯನ್ನು ಪರಿಗಣಿಸುವಂತೆ ಪ್ರಸ್ತಾಪಿಸಲಾಗಿದೆ.

ಕೃಷಿಯ ಬಗ್ಗೆ ಭಾವನಾತ್ಮಕ ಪ್ರೀತಿ ಹೊಂದಿದ್ದು, ಬೇಸಾಯದತ್ತ ಹಲವು ಯುವಕರು, ಮಹಿಳೆಯರು ಹಾಗೂ ದಲಿತರು ಇತ್ತೀಚಿನ ದಿನಗಳಲ್ಲಿ ಉತ್ಸಾಹ ತೋರುತ್ತಿರುವರು. ಸದ್ಯದ ಭೂ ಸುಧಾರಣಾ ಕಾನೂನಿನಲ್ಲಿ ಇವರಿಗೆ ಒಡೆತನ ಅಸಾಧ್ಯವಾದರೂ, ಭೂಮಿಯ ಸಹಯೋಗವನ್ನಾದರೂ ಒದಗಿಸುವತ್ತ ತೆರೆದ ಮನಸ್ಸಿನಿಂದ ಆಲೋಚಿಸುವುದು ಇಂದಿನ ಅಗತ್ಯವಾಗಿದೆ.

ಖ್ಯಾತ ಸಾಹಿತಿ ಡಾ. ಶಿವರಾಮ ಕಾರಂತರ **'ಚೋಮನ ದುಡಿ'** ಕೃತಿಯಲ್ಲಿ ಬಡ ಚೋಮನ ಗೇಣಿ ಪಡೆದಾದರೂ ಕೃಷಿ ಮಾಡುವ ತೀವ್ರ ಆಸೆ, ಅದೂ ದೊರಕದಿದ್ದಾಗ ಆದ ಹತಾಶೆಗಳನ್ನು ಇಲ್ಲಿ ನೆನೆಯುವುದು ಅಪ್ರಸ್ತುತವಾಗಲಿಕ್ಕಿಲ್ಲ. ಹಾಗಾಗಿ, ಈ ವಿಚಾರದಲ್ಲಿ ಭಾವಾವೇಶಕ್ಕೆ ಒಳಗಾಗದೇ ವಸ್ತುನಿಷ್ಠ ಚರ್ಚೆ ಮತ್ತು ಸಂವಾದಗಳನ್ನು ಮಾಡಿ ರಾಜ್ಯದ ಕೃಷಿ ಭೂಮಿ ಸದ್ಬಳಕೆಗೆ ಸೂಕ್ತವಾಗುವ ನೀತಿ, ಕಾಯ್ದೆ, ಕ್ರಮಗಳನ್ನು ರೂಪಿಸಲು ಸರ್ಕಾರಕ್ಕೆ ಈ ವರದಿ ಸಹಾಯಕವಾಗಲಿದೆ ಎಂದು ಆಶಿಸುವೆನು.

ರಾಜ್ಯದ ಕೃಷಿ ಭೂಮಿಯು ವಾಣಿಜ್ಯ ಬೆಳೆಗಳು ಹಾಗೂ ಕೃಷಿಯೇತರ ಕಾರ್ಯಗಳಿಗೆ ಅತಿಯಾಗಿ ಪರಿವರ್ತನೆಯಾಗುತ್ತಿದ್ದು, **ಯೋಗ್ಯ ಬೆಳೆ ಪದ್ಧತಿ** ಹಾಗೂ ರಾಜ್ಯದ ಅಗತ್ಯಕ್ಕೆ ಸೂಕ್ತವಾದ **ಕೃಷಿ ಉತ್ಪಾದನಾ ನೀತಿ**ಯನ್ನು ರೂಪಿಸುವುದೂ ಅಷ್ಟೇ ಮುಖ್ಯವಾಗಿದೆ.

ಗುತ್ತಿಗೆ ಕೃಷಿಯನ್ನು ಬೆಂಬಲಿಸಿ ರಾಜ್ಯದ ಎರಡು ಪ್ರಮುಖ ಕನ್ನಡ ದಿನಪತ್ರಿಕೆಗಳು ಸಂಪಾದಕೀಯ ಲೇಖನಗಳನ್ನು ಪ್ರಕಟಿಸಿದ್ದು. ಇದರ ಸಾಧ್ಯಾಸಾಧ್ಯತೆಗಳ ವಿಮರ್ಶಾತ್ಮಕ ಲೇಖನಗಳು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇಂತಹ ಗಹನ ವಿಚಾರದ ಬಗ್ಗೆ ನಡೆಯುತ್ತಿರುವ ಈ ರೀತಿಯ ಚರ್ಚೆ ಮತ್ತು ವಿಚಾರ ಮಂಥನಗಳು ಆರೋಗ್ಯಕರ ಲಕ್ಷಣಗಳಾಗಿವೆ.

ಈ ವರದಿಗೆ ಪೂರಕವಾಗಿ, ತ್ವರಿತ ಅಧ್ಯಯನ ಕೈಗೊಳ್ಳಲು ನೆರವಾದ ವಿವಿಧ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳ **'ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ'**ಗಳಿಗೂ, ಸಂಬಂಧಿತ ಕಾಯ್ದೆ, ನೀತಿಗಳನ್ನು ವಿವರವಾಗಿ ಅಭ್ಯಾಸ ಮಾಡಿ ಟಿಪ್ಪಣಿ ರೂಪಿಸಲು ನೆರವಾಗಿರುವ **'ಆಶಾ'** (ASHA) ಸಂಸ್ಥೆಯ ತಜ್ಞೆ **ಶ್ರೀಮತಿ ಕವಿತಾ ಕುರುಗಂಟಿ**ಯವರಿಗೂ, ಅಗತ್ಯ ನೆರವು ನೀಡಿದ ಹಿರಿಯ ಅಧಿಕಾರಿಗಳು, ಕೃಷಿ ಇಲಾಖಾಧಿಕಾರಿಗಳಿಗೂ, ಎಲ್ಲಕ್ಕಿಂತ ಮುಖ್ಯವಾಗಿ ಈ ಮಹತ್ವದ ಅಧ್ಯಯನ ವರದಿ ಕೈಗೊಳ್ಳಲು ಬೆಲೆ ಆಯೋಗವನ್ನು ಪ್ರೋತ್ಸಾಹಿಸಿದ **ಸನ್ಮಾನ್ಯ ಕೃಷಿ ಸಚಿವರಿಗೂ,** ಮತ್ತೆಲ್ಲರಿಗೂ ಬೆಲೆ ಆಯೋಗವು ಆಭಾರಿಯಾಗಿದೆ.

ಮಾರ್ಚ್ 2017
ಬೆಂಗಳೂರು

**ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ

# ಪರಿವಿಡಿ


| ವಿವರ | ಪುಟ ಸಂಖ್ಯೆ |
|---|---|
| ಮುನ್ನುಡಿ | i |
| ಕಾರ್ಯಕಾರಿ ಸಾರಾಂಶ ಮತ್ತು ಶಿಫಾರಸ್ಸುಗಳು | iv |
| I. ಹಿನ್ನೆಲೆ | 1 |
| II. ಕೃಷಿ ಬೀಳು ಭೂಮಿ ಅಧ್ಯಯನ | 3 |
| ಅ) ಭೂಮಿ ಬೀಳು ಬಿಟ್ಟಿರುವ ರೈತರ ಸಾಮಾಜಿಕ ಹಿನ್ನೆಲೆ | 3 |
| ಆ) ಭೂಮಿ ಬೀಳು ಬಿಟ್ಟಿರುವ ರೈತರ ವರ್ಗ ಹಾಗೂ ಸಾಮಾಜಿಕ ವರ್ಗೀಕರಣ | 4 |
| ಇ) ಬೀಳು ಬಿಟ್ಟಿರುವ ಅವಧಿ | 5 |
| ಈ) ಕೃಷಿ ಭೂಮಿಯನ್ನು ಬೀಳು ಬಿಡುವ ಕಾರಣಗಳು | 5 |
| ಉ) ರೈತರು ಸೂಚಿಸಿರುವ ಪರಿಹಾರ ಕ್ರಮಗಳು | 6 |
| III. ಚಿಕ್ಕ ಮತ್ತು ಚದುರಿದ ಹಿಡುವಳಿಗಳು | 7 |
| IV. ರಾಜ್ಯದ ಬೀಳು ಭೂಮಿ ಸದ್ಬಳಕೆ ಕಾರ್ಯಾಗಾರ | 9 |
| V. ತಜ್ಞರ ಅಭಿಪ್ರಾಯ | 17 |
| ಅನುಬಂಧಗಳು | 19 |


# ಪಟ್ಟಿಗಳು


| ವಿವರ | | ಪುಟ ಸಂಖ್ಯೆ |
|---|---|---|
| ಪಟ್ಟಿ 1 | ರಾಜ್ಯದ ಕೃಷಿಯ ಒಟ್ಟು ಆದಾಯಕ್ಕೆ ಭೂಮಿ ಬೀಳು ಬಿಡುವಿಕೆಯಿಂದ ಆಗಿರುವ ನಷ್ಟ (2013–14 ಸಾಲಿನಲ್ಲಿ) | 2 |
| ಪಟ್ಟಿ 2 | ಕೃಷಿ ಭೂಮಿ ಬೀಳು ಬಿಡುವ ಕಾರಣಗಳು | 5 |
| ಪಟ್ಟಿ 3 | ಭೂಮಿ ಬೀಳು ಬಿಡುವುದನ್ನು ತಡೆಯಲು ರೈತರು ವ್ಯಕ್ತ ಪಡಿಸಿದ ಪರಿಹಾರ ಕ್ರಮಗಳು (ಶೇ.) | 6 |
| ಪಟ್ಟಿ 4 | ವಿವಿಧ ವರ್ಗದ ರೈತರ ಹಿಡುವಳ ತುಂಡು (Fragmentation) ಪ್ರಮಾಣ (ಹಳೇ ಮೈಸೂರು ವಲಯ) (ಶೇ.) | 8 |

# ಚಿತ್ರಗಳು


| ವಿವರ | | ಪುಟ ಸಂಖ್ಯೆ |
|---|---|---|
| ಚಿತ್ರ 1 ಅ | ಕರ್ನಾಟಕದಲ್ಲಿ ಭೂಮಿಯನ್ನು ಬೀಳು ಬಿಟ್ಟಿರುವ ವಿವಿಧ ವರ್ಗಗಳ ರೈತರ ಪಾಲು (ಶೇ.) | 4 |
| ಚಿತ್ರ 1 ಆ | ಕರ್ನಾಟಕದಲ್ಲಿ ಭೂಮಿಯನ್ನು ಬೀಳು ಬಿಟ್ಟಿರುವ ವಿವಿಧ ಸಾಮಾಜಿಕ ಗುಂಪುಗಳ ರೈತರ ಪ್ರಮಾಣ (ಶೇ.) | 4 |
| ಚಿತ್ರ 2 ಅ | ಕರ್ನಾಟಕದಲ್ಲಿ ವಿವಿಧ ವರ್ಗದ ರೈತರು ಕೃಷಿ ಭೂಮಿ ಬೀಳು ಬಿಟ್ಟಿರುವ ಪ್ರಮಾಣ (ಶೇ.) | 4 |
| ಚಿತ್ರ 2 ಆ | ಕರ್ನಾಟಕದಲ್ಲಿ ವಿವಿಧ ಸಾಮಾಜಿಕ ಗುಂಪುಗಳ ರೈತರು ಕೃಷಿ ಭೂಮಿ ಬೀಳು ಬಿಟ್ಟಿರುವ ಪ್ರಮಾಣ(ಶೇ.) | 4 |
| ಚಿತ್ರ 3 | ಕರ್ನಾಟಕದಲ್ಲಿ ರೈತರು ಕೃಷಿ ಭೂಮಿ ಬೀಳು ಬಿಟ್ಟಿರುವ ಅವಧಿ (ಶೇ.) | 5 |
| ಚಿತ್ರ 4 | ಕರ್ನಾಟಕದಲ್ಲಿ ಐದು ದಶಕಗಳಲ್ಲಿ (1970-71 ರಿಂದ 2010-11) ಕೃಷಿ ಹಿಡುವಳಿ ಗಾತ್ರದಲ್ಲಾದ ಕಡಿತ | 7 |
| ಚಿತ್ರ 5 | ಕರ್ನಾಟಕದಲ್ಲಿ ವಿವಿದ ಗಾತ್ರದ ಕೃಷಿ ಹಿಡುವಳಿಗಳ ಸಂಖ್ಯೆಯಲ್ಲಾದ ಬದಲಾವಣೆ | 7 |
| ಚಿತ್ರ 6 | ಕರ್ನಾಟಕದಲ್ಲಿ ವಿವಿದ ಗಾತ್ರದ ಕೃಷಿ ಹಿಡುವಳಿಗಳ ವಿಸ್ತೀರ್ಣದಲ್ಲಾದ ಬದಲಾವಣೆ | 8 |


# ಅನುಬಂಧಗಳು


| ವಿವರ | | ಪುಟ ಸಂಖ್ಯೆ |
|---|---|---|
| ಅನುಬಂಧ 1 | ಕರ್ನಾಟಕದ ಕೃಷಿ ಪರಿವರ್ತನೆಯ ದಿಕ್ಕು ಮತ್ತು ಮಾರ್ಗೋಪಾಯಗಳು – ಸಂಶೋಧನಾ ವರದಿ ಜುಲೈ 2016 | 19 |
| ಅನುಬಂಧ 2 | ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿ ಕೃಷಿ ಭೂಮಿ ಬೀಳು ಬಿಟ್ಟಿರುವ ರೈತರ ಸಾಮಾನ್ಯ ಚಿತ್ರಣ | 22 |
| ಅನುಬಂಧ 3 | ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿ ಭೂಮಿ ಬೀಳು ಬಿಟ್ಟಿರುವ ರೈತರ ವರ್ಗ ಮತ್ತು ಸಾಮಾಜಿಕ ವಿಂಗಡಣೆ (ಶೇ.) | 22 |
| ಅನುಬಂಧ 4 | ಕರ್ನಾಟಕದಲ್ಲಿ ವಿವಿಧ ವರ್ಗ ಮತ್ತು ಸಾಮಾಜಿಕ ಗುಂಪುಗಳ ರೈತರ ಬೀಳು ಭೂಮಿಯ ಪ್ರಮಾಣ (ಶೇ.) | 23 |
| ಅನುಬಂಧ 5 | ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿ ರೈತರು ಭೂಮಿ ಬೀಳು ಬಿಟ್ಟಿರುವ ಅವಧಿ | 24 |
| ಅನುಬಂಧ 6 | ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ, 2016 – ವರದಿಯ ಸಾರಾಂಶ | 25 |
| ಅನುಬಂಧ 7 | ಪತ್ರಿಕಾ ವರದಿಗಳು | 28 |

# ಕಾರ್ಯಕಾರಿ ಸಾರಾಂಶ ಮತ್ತು ಶಿಫಾರಸ್ಸುಗಳು

## ಕಾರ್ಯಕಾರಿ ಸಾರಾಂಶ

- ಕರ್ನಾಟಕವು **ಪ್ರಗತಿಪರ ಭೂ ಸುಧಾರಣಾ** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವ ಮುಂಚೂಣಿ ರಾಜ್ಯವಾಗಿದ್ದರೂ, ಕೃಷಿ ಭೂಮಿಯನ್ನು ಬೀಳು ಬಿಡುವುದು, ಭೂ ವಿಚ್ಛಿದ್ರೀಕರಣ, ಅನಧಿಕೃತ ಗುತ್ತಿಗೆ, ಭೂ ಪರಿವರ್ತನೆ ಇತ್ಯಾದಿಗಳು ರಾಜ್ಯದಲ್ಲಿ ಅಧಿಕವಾಗುತ್ತಿವೆ.

- ರಾಜ್ಯದ ಒಟ್ಟು ಕೃಷಿ ಯೋಗ್ಯ ಭೂಮಿಯಲ್ಲಿ ಸುಮಾರು 21 ಲಕ್ಷ ಹೆಕ್ಟೇರ್ ಅಥವಾ ಶೇ.16 ರಷ್ಟು ಪ್ರದೇಶವನ್ನು ರೈತರು ನಾನಾ ಕಾರಣಗಳಿಂದ ಬೇಸಾಯ ಕೈಗೊಳ್ಳದೇ ವರ್ಷಾನುಗಟ್ಟಲೆ ಬೀಳು ಬಿಟ್ಟಿರುವುದು ಗಂಭೀರ ಸಮಸ್ಯೆಯಾಗಿದೆ.

- ಅಗಾಧ ಪ್ರಮಾಣದಲ್ಲಿ ಕೃಷಿ ಭೂಮಿಯನ್ನು ಬೀಳು ಬಿಟ್ಟಿರುವ ಪರಿಣಾಮವಾಗಿ ರಾಜ್ಯದ ಆದಾಯಕ್ಕೆ ಪ್ರತಿ ವರ್ಷ ಉಂಟಾಗಿರುವ ನಷ್ಟ ಸದ್ಯದ ಬೆಲೆಯಲ್ಲಿ ಕನಿಷ್ಠ ರೂ.8008 ಕೋಟಿಗಳಾಗಿದ್ದು, ಸ್ಥಿರ ಬೆಲೆಯಲ್ಲಿ ರೂ.5792 ಕೋಟಿಗಳಾಗಿರುತ್ತದೆ.

- **ಕರ್ನಾಟಕದಲ್ಲಿ ಬೀಳು ಬಿಟ್ಟಿರುವ ರೈತರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರು ಸುಮಾರು ಅರ್ಧದಷ್ಟು (ಶೇ.48) ಇರುವರು.**

- ಈ ರೀತಿ ಬೀಳು ಬಿಟ್ಟಿರುವ ಬಹುತೇಕ ರೈತರ ಕುಟುಂಬದ ಸದಸ್ಯರು ಸಾಂದರ್ಭಿಕ ಕೂಲಿಗಾರರಾಗಿದ್ದು, ವರ್ಷದ ಬಹುಪಾಲು ದಿನ ಉದ್ಯೋಗವಿಲ್ಲದೆ ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳ ಸಾಲಿಗೆ ಸೇರಿರುವರು.

- ಬೀಳು ಬಿಡುವ ಈ ಸಮಸ್ಯೆಯ ಜೊತೆಗೆ ನಮ್ಮ ರೈತರ ಹಿಡುವಳಿ ಗಾತ್ರ ವರ್ಷದಿಂದ ವರ್ಷಕ್ಕೆ ಕಿರಿದಾಗಿ, ಯೋಗ್ಯ ರೀತಿಯಲ್ಲಿ ಕೃಷಿ ಕೈಗೊಳ್ಳಲು ಆರ್ಥಿಕದಾಯಕವಾಗಿಲ್ಲದಿರುವುದೂ ಇನ್ನೊಂದು ಸಮಸ್ಯೆಯಾಗಿದೆ. ಇದೂ ಅಲ್ಲದೆ ಬಹುಪಾಲು ಸಣ್ಣ ರೈತರ ಜಮೀನುಗಳು ಒಂದೆಡೆ ಒತ್ತಾಗಿರದೇ, ತುಂಡು ತುಂಡಾಗಿ ಚದುರಿರುವುದೂ ಮತ್ತೊಂದು ಸಮಸ್ಯೆಯಾಗಿದೆ.

- **ರಾಜ್ಯದ ರೈತರ ಸರಾಸರಿ ಹಿಡುವಳಿ ಗಾತ್ರವು 1.55 ಹೆಕ್ಟೇರ್‌ಗೆ ಇಳಿದಿದೆ ಹಾಗೂ ಹಳೇ ಮೈಸೂರಿನಂತಹ ಪ್ರದೇಶಗಳಲ್ಲಿ ಒಟ್ಟು ಹಿಡುವಳಿಗಳಲ್ಲಿ ಅರ್ಧದಷ್ಟು ಎರಡರಿಂದ ನಾಲ್ಕು ತುಂಡಾಗಿ ಚದುರಿರುತ್ತವೆ.**

- ಈ ನಿಟ್ಟಿನಲ್ಲಿ ಸರ್ಕಾರದ ಸೂಚನೆಯ ಮೇರೆಗೆ **ಕರ್ನಾಟಕ ಕೃಷಿ ಬೆಲೆ ಆಯೋಗವು** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಮೀನನ್ನು ಬೀಳು ಬಿಟ್ಟಿರುವ ರೈತರ ಹೊಲಗಳಿಗೆ ಭೇಟಿ ನೀಡಿ ಅಂಕಿ, ಅಂಶ, ಮಾಹಿತಿ ಹಾಗೂ ಅಭಿಪ್ರಾಯ ಸಂಗ್ರಹಿಸಿ, ಸಮಗ್ರ ಅಧ್ಯಯನವನ್ನು ಕೈಗೊಂಡಿರುತ್ತದೆ.

- ರಾಜ್ಯದಲ್ಲಿ ಕೃಷಿ ಬೀಳು ಭೂಮಿ ಸಮಸ್ಯೆಗೆ ಪರಿಹಾರವಾಗಿ ಕೇಂದ್ರ ಸರ್ಕಾರದ ನೀತಿ (NITI) ಆಯೋಗವು ಹೊರತಂದಿರುವ **"ಕೃಷಿ ಭೂಮಿ ಗುತ್ತಿಗೆ ಮಾದರಿ ಕಾಯಿದೆ – 2016"** ರ ಸಾಧ್ಯಾಸಾಧ್ಯತೆಗಳನ್ನು ಸಮಗ್ರವಾಗಿ ಪರಿಶೀಲಿಸಲು ಒಂದು ತಜ್ಞರ ಸಮಿತಿ ರಚಿಸಿ, ಅದರ ಅಭಿಪ್ರಾಯ ಪಡೆಯಲಾಗಿರುತ್ತದೆ.

- **ಮೇಲಿನ ಅಧ್ಯಯನದ ಫಲಿತಾಂಶ ಹಾಗೂ ಕೇಂದ್ರದ ಭೂ ಗುತ್ತಿಗೆ ಮಾದರಿ ಕಾಯ್ದೆಯ ಸಾಧಕ ಬಾಧಕಗಳ ಬಗ್ಗೆ ದಿನಾಂಕ 02 ಮಾರ್ಚ್ 2017 ರಂದು ಬೆಂಗಳೂರಿನ ಕೃಷಿ ಇಲಾಖೆ ಆವರಣದಲ್ಲಿ ಒಂದು ಸಭೆ ನಡೆಸಿ, ರೈತ ಪ್ರತಿನಿಧಿಗಳು, ತಜ್ಞರು, ವಿಜ್ಞಾನಿಗಳು ಹಾಗೂ ಇಲಾಖಾಧಿಕಾರಿಗಳ ಅಭಿಪ್ರಾಯ ಪಡೆಯಲಾಗಿರುತ್ತದೆ.**

- ಈ ಸಭೆಯಲ್ಲಿ ಕೇಂದ್ರದ ನೀತಿ ಆಯೋಗದ ಮಾದರಿ ಭೂ ಗುತ್ತಿಗೆ ಕಾಯ್ದೆ ರೂವಾರಿ **ಡಾ. ಟಿ. ಹಖ್** ರವರು ಭಾಗವಹಿಸಿದ್ದಲ್ಲದೆ, ಕರ್ನಾಟಕ ಸರ್ಕಾರದ ಅಭಿವೃದ್ಧಿ ಆಯುಕ್ತರು ಹಾಗೂ ಇತರ ಹಿರಿಯ ಅಧಿಕಾರಿಗಳೂ ಸಹ ಸಕ್ರಿಯವಾಗಿ ಪಾಲ್ಗೊಂಡಿದ್ದರು.

## ರೈತಾಪಿ ವರ್ಗದ ಅಭಿಪ್ರಾಯ

- **ನಮ್ಮ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಿ ಲಾಭದಾಯಕಗೊಳಿಸಿದಲ್ಲಿ, ಭೂಮಿ ಬೀಳು ಬಿಡುವುದನ್ನು ತಡೆಯಬಹುದು. ಅವಕ್ಕೆ ಮೊದಲು ಆದ್ಯತೆ ನೀಡಬೇಕು.**

- ರಾಜ್ಯದಲ್ಲಿ ಈಗಾಗಲೇ ಗೇಣಿದಾರಿಕೆ ಪದ್ಧತಿ ತೊಡೆದು ಹಾಕಿ, ಭೂ ಸುಧಾರಣೆ ಜಾರಿಗೆ ತಂದಿದ್ದು, ಈಗ ಮತ್ತೆ ಗುತ್ತಿಗೆ ಕೃಷಿ ತರುತ್ತಿರುವುದರ ಬಗ್ಗೆ **ತಾತ್ವಿಕ ಸ್ಪಷ್ಟೀಕರಣ** ಅತ್ಯಗತ್ಯವಾಗಿದೆ.

- ಭೂ ಸುಧಾರಣಾ ನೀತಿಯಲ್ಲಿ ಭೂಮಿಯು ರೈತರ ಕೈತಪ್ಪಿ ಹೋಗದಂತೆ ಕಟ್ಟುನಿಟ್ಟಿನ ನಿಬಂಧನೆಗಳಿವೆ. ಇದನ್ನು ಸಡಿಲಗೊಳಿಸಿದರೆ ಭೂಮಿ ರೈತರ ಕೈತಪ್ಪಿ ಕಂಪನಿಗಳು, ಕೈಗಾರಿಕೋದ್ಯಮಿಗಳ ಕೈಪಾಲಾಗುವ ಆತಂಕವಿದೆ. ಈ ಆತಂಕ ಪರಿಹಾರವಾಗಬೇಕು.

- **ಡಾ. ಟಿ. ಹಖ್ ಒಳ್ಳೆಯ ಆರ್ಥಿಕ ತಜ್ಞರು. ಅವರ ಬಗ್ಗೆ ದೇಶದ ರೈತಾಪಿವರ್ಗಕ್ಕೆ ಭರವಸೆ ಇದೆ. ಅವರು ರೂಪಿಸಿರುವ ಈ ಮಾದರಿ ಗುತ್ತಿಗೆ ಕಾಯ್ದೆ ರೈತರ ಪರವಾಗಿದೆ ಎಂಬ ವಿಶ್ವಾಸವಿದೆ.**

- ಬೀಳು ಭೂಮಿಯನ್ನು ರೈತರಿಗೆ ಮಾತ್ರ, ಅದರಲ್ಲೂ ಬಡ ರೈತರು, ದಲಿತರು, ಮಹಿಳೆಯರಿಗೆ ಗುತ್ತಿಗೆ ಕೊಡುವುದನ್ನು ಪರಿಗಣಿಸಬಹುದು.

- **ರೈತರು ಒಂಟಿಯಾಗಿ ಕೃಷಿ ಮಾಡುವ ಬದಲಿಗೆ ಗುಂಪಾಗಿ ಒಟ್ಟು ಸೇರಿ ಉತ್ಪಾದನೆ ಹಾಗೂ ಮಾರಾಟ ಮಾಡುವ 'ಗುಂಪು ಕೃಷಿ' ಇಂದಿನ ಅಗತ್ಯ. ಇದಕ್ಕೆ ಭೂ ಗುತ್ತಿಗೆ ಕಾಯ್ದೆಯಲ್ಲಿ ಆದ್ಯತೆ ನೀಡಬೇಕು.**

- ರಾಜ್ಯದ ಭೂ ಸುಧಾರಣೆಯ ಮೇಲೆ ಪರಿಣಾಮ ಬೀರುವ ಈ ಗುತ್ತಿಗೆ ಕೃಷಿಯ ಬಗ್ಗೆ ಸದನದ ಒಳಗೆ ಮತ್ತು ಹೊರಗೆ ವಿವರವಾಗಿ ಚರ್ಚೆಯಾಗಬೇಕು. ನಂತರ ಈ ಬಗ್ಗೆ ತೀರ್ಮಾನಕ್ಕೆ ಬರಬಹುದು.

**ಇವೆಲ್ಲವುಗಳನ್ನಾಧರಿಸಿ, ರಾಜ್ಯದ ಬೀಳು ಭೂಮಿ ಸದ್ಬಳಕೆ ಹಾಗೂ ಹಿಡುವಳಿ ಕ್ರೋಢೀಕರಣಕ್ಕಾಗಿ, ಕರ್ನಾಟಕ ಕೃಷಿ ಬೆಲೆ ಆಯೋಗವು ಕೆಳಗಿನ ಶಿಫಾರಸ್ಸುಗಳನ್ನು ಸರ್ಕಾರದ ಮುಂದಿಡುತ್ತಿದೆ.**

## ಶಿಫಾರಸ್ಸುಗಳು

1. ಬೀಳು ಭೂಮಿ ಸದ್ಬಳಕೆಗೆ ಅರಣ್ಯ ಕೃಷಿ, ಬಿದಿರು ಕೃಷಿ, ಸೌರ ಶಕ್ತಿಯಂತಹ **ಪುನರ್ ಉತ್ಪಾದಿಸಲ್ಪಡುವ ಇಂಧನದ ಉತ್ಪಾದನೆ,** ಮೇವು ಅಭಿವೃದ್ಧಿ, ಕುರಿ ಸಾಕಾಣಿಕೆ ಇತ್ಯಾದಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಉದ್ದಿಮೆಗಳನ್ನು ಪರಿಗಣಿಸಿ ತಂತ್ರಜ್ಞಾನ, ಹಣಕಾಸು, ಮಾರುಕಟ್ಟೆ ಇತರೆ ಸೌಲಭ್ಯ ರೈತರಿಗೆ ದೊರಕುವಂತಾಗಬೇಕು.

2. **ಗುತ್ತಿಗೆ ಕೃಷಿಯನ್ನು ಪ್ರೋತ್ಸಾಹಿಸುವುದಾದಲ್ಲಿ, ಅದನ್ನು ರೈತಾಪಿ ವರ್ಗಕ್ಕೆ, ಕೃಷಿ ಹಾಗೂ ಸಂಬಂಧಿಸಿದ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಬೇಕು. ಜೊತೆಗೆ ಗುಂಪು ಕೃಷಿಗೆ ಹಾಗೂ ವಿಶೇಷವಾಗಿ ಕೇರಳದ 'ಕುಡುಂಬಶ್ರೀ' ಮಾದರಿಯಲ್ಲಿ ಮಹಿಳಾ ಗುಂಪುಗಳಿಗೆ ಈ ನಿಟ್ಟಿನಲ್ಲಿ ಆದ್ಯತೆ ನೀಡಿ ಪ್ರೋತ್ಸಾಹಿಸಬೇಕು.**

3. ಭೂ ಗುತ್ತಿಗೆ ಪಡೆದ ರೈತರ ಹಿಡುವಳಿ ಗಾತ್ರವು ಭೂ ಸುಧಾರಣೆ ಕಾಯ್ದೆಯ ಭೂ ಮಿತಿಯನ್ನು ಮೀರಬಾರದು. ಆದರೆ, ಗುಂಪು ಕೃಷಿಗೆ ಈ ಮಿತಿ ಅಳವಡಿಸಬಾರದು.

4. ಭೂ ಗುತ್ತಿಗೆಗೆ ಸಂಬಂಧಿಸಿದಂತೆ ಕಾಯ್ದೆಯನ್ನು ರೂಪಿಸುವಾಗ **ಭೂ ಮಾಲೀಕ ಹಾಗೂ ಗುತ್ತಿಗೆದಾರರಿಬ್ಬರ ಹಿತರಕ್ಷಣೆಯನ್ನೂ** ಮಾಡಬೇಕು. ಗುತ್ತಿಗೆಗೆ ಒಳಪಟ್ಟ ಭೂಮಿಯ ಲಾಭದಾಯಕತೆ ಅಧಿಕವಾಗಲು ಮತ್ತು ಫಲವತ್ತತೆ ಹಾಗೂ ಅಂತರ್ಜಲ ನಾಶವಾಗದಂತೆ ಕೂಡಾ ಮುಂಜಾಗರೂಕತೆ ವಹಿಸಬೇಕು.

5. ಈ ನಿಟ್ಟಿನಲ್ಲಿ **ಜಂಟಿ ಜವಾಬ್ದಾರಿ ರೈತ ಗುಂಪು** (Joint Liability Group) ಗಳನ್ನು ಪ್ರೋತ್ಸಾಹಿಸಿ ಸಾಲ, ವಿಮೆ, ಯಂತ್ರೋಪಕರಣಗಳ ಬಳಕೆ, ಪರಿಕರಗಳ ಸಮರ್ಪಕ ಪೂರೈಕೆ ಹಾಗೂ ಭೂಮಿ ಮತ್ತು ನೀರಿನ ಸಮರ್ಥ ಬಳಕೆ ಮಾಡಬೇಕು.

**6. ಗ್ರಾಮ ಪಂಚಾಯಿತಿಯು ಈ ರೀತಿಯ ಭೂ ಗುತ್ತಿಗೆ ಒಪ್ಪಂದವನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆ ನಡೆಸುವ ಅಧಿಕೃತ ಸಂಸ್ಥೆಯಾಗಿರಬೇಕು ಹಾಗೂ ಭೂ ಗುತ್ತಿಗೆಯಲ್ಲಿ ಉಂಟಾಗುವ ವ್ಯಾಜ್ಯಗಳು ಮತ್ತು ವಿವಾದಗಳನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಪರಿಹರಿಸಿಕೊಳ್ಳಲು ಶೀಘ್ರ ಅವಕಾಶಗಳಿರಬೇಕು.**

7. ಕೃಷಿ ಕೈಗೊಳ್ಳಲು ಅಸಮರ್ಥರಾದ ರೈತರು ತಮ್ಮ ಭೂಮಿಯನ್ನು ಗ್ರಾಮ ಪಂಚಾಯಿತಿಯಲ್ಲಿ **'ಠೇವಣಿ'** ಇಡುವ ಹಾಗೆ ವ್ಯವಸ್ಥೆ ಏರ್ಪಡಿಸಬೇಕು. ಈ ರೀತಿಯ ಏರ್ಪಾಟಿನಿಂದ, ಕ್ರೋಢೀಕರಿಸಿದ ಭೂ ಹಿಡುವಳಿಗಳನ್ನು ನಂತರ ಗುಂಪು ಅಥವಾ ವ್ಯಕ್ತಿಗಳ ಮಟ್ಟದಲ್ಲಿ ಗುತ್ತಿಗೆಗೆ ಕೊಡಲು, ಗ್ರಾಮ ಪಂಚಾಯಿತಿಗೆ ಸಾಧ್ಯವಾಗಲಿದೆ.

8. ಬೀಳು ಭೂಮಿಗೆ ಪರಿಹಾರವಾಗಿ **ಒಪ್ಪಂದ ಕೃಷಿ** (Contract Farming) ಯನ್ನು ಪರಿಗಣಿಸುವುದಾದಲ್ಲಿ, ರೈತರಿಗೆ ಲಾಭದಾಯಕ ಬೆಲೆಗಳನ್ನು ಖಾತ್ರಿಗೊಳಿಸಬೇಕು ಹಾಗೂ ಭೂ ಫಲವತ್ತತೆ, ಅಂತರ್ಜಲ ಹಾಳಾಗದಂತೆ ನಿಗಾ ವಹಿಸಬೇಕು. ಈ ನಿಟ್ಟಿನಲ್ಲಿ ರೈತರು ಹಾಗೂ ಕಂಪನಿಗಳ ಜೊತೆಗೆ **ಕೃಷಿ ಇಲಾಖೆ**ಯನ್ನು ಒಪ್ಪಂದದೊಳಗೆ ತರುವುದು ಅತ್ಯಂತ ಸೂಕ್ತವಾಗಿರುತ್ತದೆ.

9. **ತುಂಡು ಹಿಡುವಳಿ** (Fragmentation) **ಕ್ರೋಢೀಕರಣಕ್ಕೂ ಅಷ್ಟೇ** ಗಮನ ನೀಡಿ, ಕಟ್ಟು ನಿಟ್ಟಿನ **ಕ್ರಮ ಕೈಗೊಳ್ಳುವುದೂ ಈಗ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪಂಜಾಬ್ (1948), ಹಿಮಾಚಲ ಪ್ರದೇಶ (1971), ಒರಿಸ್ಸಾ (1972), ಉತ್ತರ ಪ್ರದೇಶ (2012), ಮಹಾರಾಷ್ಟ್ರ (2016) ರಾಜ್ಯಗಳು ಕಾಯ್ದೆ ಹಾಗೂ ಕಾನೂನುಗಳನ್ನು ರೂಪಿಸಿದ್ದು, ಇವುಗಳನ್ನು ಪರಿಶೀಲಿಸುವುದು ಸೂಕ್ತವಾಗಿದೆ.**

10. ರಾಜ್ಯದಲ್ಲಿ ಗೇಣಿ, ಲಾವಣಿ, ಉತ್ಪನ್ನ ಹಂಚಿಕೆ ಇತ್ಯಾದಿಗಳ ರೂಪದಲ್ಲಿ **ಅನಧಿಕೃತ ಗುತ್ತಿಗೆ ಕೃಷಿ** ಗಮನಾರ್ಹ ಪ್ರಮಾಣದಲ್ಲಿರುತ್ತದೆ. ಈ ನಿಟ್ಟಿನಲ್ಲಿ ಸಮಗ್ರ ಅಧ್ಯಯನ ಮತ್ತು ಸೂಕ್ತ ಕ್ರಮಗಳು ತುರ್ತು ಅಗತ್ಯವಾಗಿವೆ.

**11. ಈ ಮೇಲಿನ ಎಲ್ಲಾ ವಿಚಾರಗಳನ್ನು ಪರಿಗಣಿಸಿ "ಕರ್ನಾಟಕದ ಕೃಷಿ ಬೀಳು ಭೂಮಿಯ ಸದ್ಬಳಕೆ ಹಾಗೂ ಹಿಡುವಳಿ ಕ್ರೋಢೀಕರಣ"ಕ್ಕೆ ಸಮಗ್ರ ಕಾಯ್ದೆ ರೂಪಿಸಲು ರಾಜ್ಯ ಸರ್ಕಾರವು ಮುಂದಾಗಬೇಕಾಗಿದೆ.**


12. ಈ ನಿಟ್ಟಿನಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯಗಳು ಈಗಾಗಲೇ ರೂಪಿಸಿರುವ ಕಾಯ್ದೆ, ಕಾನೂನು ಮತ್ತು ಕಾರ್ಯಕ್ರಮಗಳನ್ನು ಪರಿಗಣಿಸುವುದು ಅತ್ಯಂತ ಸೂಕ್ತವಾಗಿರುತ್ತದೆ.

**13. ಈ ಬಗೆಗಿನ ಸಮಗ್ರ ಕಾಯ್ದೆ ರೂಪಿಸುವುದಕ್ಕಿಂತ ಮೊದಲು, ಸದನದ ಒಳಗೆ ಹಾಗೂ ಹೊರಗೆ ವಿವರವಾದ ಚರ್ಚೆ, ವಿಚಾರ ಮಂಥನ ಹಾಗೂ ಸಂವಾದಗಳು ನಡೆದು, ಈ ನಿಟ್ಟಿನಲ್ಲಿನ ಸಂಶಯಗಳನ್ನು ನಿವಾರಿಸಿಕೊಳ್ಳುವುದೂ ಅಷ್ಟೇ ಮುಖ್ಯವಾಗಿರುತ್ತದೆ.**

14. ಹಾಗೆಯೇ ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ **ಬೆಳೆಗಳ ವಿಸ್ತೀರ್ಣದಲ್ಲಾಗುತ್ತಿರುವ ತೀವ್ರ ಪರಿವರ್ತನೆ,** ಆ ಮೂಲಕ ಉತ್ಪಾದನೆಯ ಮೇಲಾಗುತ್ತಿರುವ ಪರಿಣಾಮಗಳನ್ನು ಅರ್ಥೈಸಿಕೊಂಡು ಸಮರ್ಥವಾಗಿ ಪರಿಹಾರ ರೂಪಿಸಬೇಕಾಗಿದೆ.

15. ಕರ್ನಾಟಕದ ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ **ಸಮಗ್ರ ಉತ್ಪಾದನ ನೀತಿಯನ್ನೂ** ಹಾಗೂ ಅದಕ್ಕೆ ಪೂರಕವಾದ ವಿಕೇಂದ್ರೀಕೃತ ಬೆಳೆ ಯೋಜನೆಯನ್ನೂ ಹೊರ ತರುವ **ಸಾಂಸ್ಥಿಕ ರಚನೆಯೂ** ಅತ್ಯಗತ್ಯವಾಗಿರುತ್ತದೆ.

## ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಭೂಮಿ ಬೀಳು ಬಿಟ್ಟಿರುವ ಶೇಕಡಾವಾರು ಪ್ರಮಾಣ




ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

# I. ಹಿನ್ನೆಲೆ


ಬೊಂಬೇರಹಳ್ಳಿ, ಚಿತ್ರದುರ್ಗ ಜಿಲ್ಲೆ

ಕರ್ನಾಟಕದಲ್ಲಿ ಸುಮಾರು 129 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಭೂಮಿಯು ಕೃಷಿಗೆ ಒಳಪಟ್ಟಿದ್ದು, ಇತ್ತೀಚಿಗಿನ ದಶಕಗಳಲ್ಲಿ ಕೃಷಿ ಭೂಮಿಯನ್ನು ಬೀಳು ಬಿಡುವುದು, ವಿಚ್ಛಿದ್ರೀಕರಣ, ಅನಧಿಕೃತ ಗುತ್ತಿಗೆ ಇತ್ಯಾದಿಗಳು ಅಧಿಕವಾಗುತ್ತಿವೆ.

**ಮಿಗಿಲಾಗಿ, ವಾಣಿಜ್ಯ ಬೆಳೆಗಳು ಹಾಗೂ ಕೃಷಿಯೇತರ ಉದ್ದೇಶಗಳಿಗೆ ಅಧಿಕ ಪ್ರಮಾಣದ ಭೂಮಿಯ ಪರಿವರ್ತನೆ ಕೂಡ ದೊಡ್ಡ ಸಮಸ್ಯೆಯಾಗಿದೆ (ಅನುಬಂಧ 1). ಹೀಗಾಗಿ, ಕೃಷಿ ಭೂಮಿಯ ಸುಸ್ಥಿರ ಸದ್ಬಳಕೆ ಸರ್ಕಾರದ ಮುಂದಿರುವ ದೊಡ್ಡ ಸವಾಲಾಗಿರುತ್ತದೆ.**

ರಾಜ್ಯದಲ್ಲಿ ಗೇಣಿಗಾರಿಕೆ, ಭೂ ಮಾಲಿಕತ್ವ, ಹಿಡುವಳಿ ಮಿತಿ ಇತ್ಯಾದಿ **ಭೂ ಸಂಬಂಧ** (Agrarian Relations) ವಿಚಾರಗಳನ್ನು ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ಹುಡುಕಲು **ಕರ್ನಾಟಕ ಭೂ ಸುಧಾರಣಾ ಕಾಯ್ದೆಯು 1974** ರಲ್ಲಿ ಜಾರಿಗೆ ಬಂದಿರುತ್ತದೆ.

ಈ ಕಾಯ್ದೆಗೆ 1995 ರಲ್ಲಿ ತಿದ್ದುಪಡಿ ತಂದು, ಆ ಮೂಲಕ **ಪುಷ್ಪಕೃಷಿ** (Floriculture) ಇತ್ಯಾದಿಗಳನ್ನು ಪ್ರೋತ್ಸಾಹಿಸಲು ಭೂ ಸುಧಾರಣಾ ಕಾಯ್ದೆಯನ್ನು ಸಡಿಲಗೊಳಿಸಿ, ಇತರರೂ ಭೂ ಸಾಗುವಳಿ ಕೈಗೊಳ್ಳಲು ಅನುವು ಮಾಡಿಕೊಡಲಾಗಿರುತ್ತದೆ.

**ಹಾಗೆಯೇ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮತ್ಸ್ಯಗಾರಿಕೆ (Aquaculture) ಯನ್ನು ಪ್ರೋತ್ಸಾಹಿಸಲು ಅಗತ್ಯವಾದ ಭೂಮಿಯನ್ನು ಗುತ್ತಿಗೆ ರೂಪದಲ್ಲಿ ಪಡೆಯಲೂ ಸಹ ಅವಕಾಶ ಮಾಡಿಕೊಡಲಾಗಿರುತ್ತದೆ.**

ಈ ಹಿನ್ನೆಲೆಯಲ್ಲಿ, **ಬೀಳು ಭೂಮಿ** ಹಾಗೂ **ಭೂ ವಿಚ್ಛಿದ್ರೀಕರಣ**ವನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ನಡೆಸಿ, ರಾಜ್ಯದ ಕೃಷಿ ಭೂಮಿಯ ಸದ್ಬಳಕೆಯ ಬಗ್ಗೆ ವರದಿ ನೀಡುವಂತೆ **ರಾಜ್ಯದ ಸನ್ಮಾನ್ಯ ಕೃಷಿ ಮಂತ್ರಿಗಳು** ಉಲ್ಲೇಖ No.AM/PS/194 2016, ದಿನಾಂಕ 12.12.2016 ರ ಪತ್ರದನ್ವಯ ಬೆಲೆ ಆಯೋಗವನ್ನು ಕೋರಿರುತ್ತಾರೆ.

ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ನೀತಿ ಆಯೋಗವು **'ಕೃಷಿ ಭೂ ಗೇಣಿ ಮಾದರಿ ಅಧಿನಿಯಮ – 2016'** ಅನ್ನು ಹೊರತಂದಿದ್ದು, ರಾಜ್ಯದಲ್ಲಿ ಕೃಷಿ ಭೂಮಿಯನ್ನು ಬೀಳು ಬಿಟ್ಟಿರುವ ಸಮಸ್ಯೆಗೆ ಗುತ್ತಿಗೆ ಕೃಷಿ ಒಂದು ಪರಿಹಾರವಾಗುವ ಸಾಧ್ಯತೆಯ ಬಗ್ಗೆ ರೈತರು, ತಜ್ಞರು, ಅಧಿಕಾರಿಗಳು ಮತ್ತಿತರರೊಡನೆ ಚರ್ಚಿಸಿ ಅಭಿಪ್ರಾಯ ಪಡೆಯುವಂತೆ ಆಯೋಗಕ್ಕೆ ಸೂಚಿಸಲಾಗಿದೆ.

ಈ ನಿಟ್ಟಿನಲ್ಲಿ 2004–05 ರಿಂದ 2013–14ರ ವರೆಗಿನ ಹತ್ತು ವರ್ಷಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೀಳು ಬಿಟ್ಟಿರುವ ಕೃಷಿ ಭೂಮಿಯ ಬಗೆಗಿನ ಅಂಕಿ ಅಂಶಗಳ ವಿವರಗಳನ್ನು **ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ** (Directorate of Economics & Statistics) ದಿಂದ ಪಡೆದು ವಿಶ್ಲೇಷಿಸಲಾಗಿದ್ದು, ಈ ಕೆಳಗಿನ ವಾಸ್ತವಾಂಶಗಳು ಹೊರಹೊಮ್ಮಿರುತ್ತವೆ:

1. ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಸುಮಾರು 20.67 ಲಕ್ಷ ಹೆಕ್ಟೇರ್ ಕೃಷಿ ಯೋಗ್ಯ ಭೂಮಿಯನ್ನು ರೈತರು ಹಲವಾರು ಕಾರಣಗಳಿಂದ ಬೇಸಾಯ ಮಾಡದೇ ಬೀಳು ಬಿಟ್ಟಿರುತ್ತಾರೆ. ಇದು ಒಟ್ಟಾರೆ ಕೃಷಿ ಭೂಮಿಯ ಶೇ.16 ರಷ್ಟಿರುತ್ತದೆ.

2. ಕೃಷಿ ಭೂಮಿಯನ್ನು ಅಧಿಕ ಪ್ರಮಾಣದಲ್ಲಿ ಬೀಳು ಬಿಟ್ಟಿರುವ ಐದು ಜಿಲ್ಲೆಗಳೆಂದರೆ ಬೆಳಗಾವಿ (2.2 ಲಕ್ಷ ಹೆಕ್ಟೇರ್), ರಾಯಚೂರು (2.01 ಲಕ್ಷ ಹೆಕ್ಟೇರ್), ತುಮಕೂರು (1.57 ಲಕ್ಷ ಹೆಕ್ಟೇರ್), ವಿಜಯಪುರ (1.35 ಲಕ್ಷ ಹೆಕ್ಟೇರ್) ಮತ್ತು ಕಲಬುರಗಿ (1.26 ಲಕ್ಷ ಹೆಕ್ಟೇರ್) ಜಿಲ್ಲೆಗಳಾಗಿರುತ್ತವೆ.

3. ರಾಜ್ಯದಲ್ಲಿ ಈ ಅವಧಿಯಲ್ಲಿ ಪ್ರತಿ ಹೆಕ್ಟೇರ್ ಕೃಷಿ ಭೂಮಿಯಿಂದ ದೊರಕಿದ **ಕೃಷಿ ಆದಾಯವು ಸದ್ಯದ ಬೆಲೆ** (Current Price) ಯಲ್ಲಿ ರೂ.36 ಸಾವಿರ ಹಾಗೂ **ಸ್ಥಿರ ಬೆಲೆ** (Constant Price) ಯಲ್ಲಿ ರೂ.26 ಸಾವಿರಗಳಾಗುತ್ತದೆ ಎಂದು ಲೆಕ್ಕ ಹಾಕಲಾಗಿದೆ.

4. **ಈ ಲೆಕ್ಕಾಚಾರದ ಪ್ರಕಾರ ರಾಜ್ಯದಲ್ಲಿ ಅಗಾಧ ಪ್ರಮಾಣದಲ್ಲಿ ಕೃಷಿ ಭೂಮಿಯನ್ನು ಬೀಳು ಬಿಟ್ಟಿರುವ ಪರಿಣಾಮವಾಗಿ, ರಾಜ್ಯದ ಆದಾಯಕ್ಕೆ ಪ್ರತಿ ವರ್ಷ ಉಂಟಾಗಿರುವ ನಷ್ಟ ಸದ್ಯದ ಬೆಲೆಯಲ್ಲಿ ರೂ.8008 ಕೋಟಿಗಳಾಗಿದ್ದು, ಸ್ಥಿರ ಬೆಲೆಯಲ್ಲಿ ರೂ.5792 ಕೋಟಿಗಳಾಗಿರುತ್ತದೆ. (ವಿವರಗಳನ್ನು ಪಟ್ಟಿ 1 ರಲ್ಲಿ ನೀಡಲಾಗಿದೆ).**

5. ಈ ಬೀಳು ಭೂಮಿಯನ್ನು ಸದ್ಬಳಕೆ ಮಾಡಿಕೊಂಡರೆ ರಾಜ್ಯದ ಕೃಷಿ ಆದಾಯವು ಶೇ.14ರಿಂದ ಶೇ.16ರಷ್ಟು ಅಧಿಕವಾಗಲಿದೆ.

### ಪಟ್ಟಿ 1 : ರಾಜ್ಯದ ಕೃಷಿಯ ಒಟ್ಟು ಆದಾಯಕ್ಕೆ ಭೂಮಿ ಬೀಳು ಬಿಡುವಿಕೆಯಿಂದ ಆಗಿರುವ ನಷ್ಟ (2013–14 ಸಾಲಿನಲ್ಲಿ)

| ಕ್ರ. ಸಂ. | ಜಿಲ್ಲೆ | ಕೃಷಿ ವಿಸ್ತೀರ್ಣ (ಲಕ್ಷ ಹೆ.) | ಸರಾಸರಿ ಬೀಳು ಭೂಮಿ (ಕಳೆದ ಹತ್ತು ವರ್ಷಗಳಲ್ಲಿ) ಲಕ್ಷ ಹೆ. | ಬೀಳು ಭೂಮಿ ಶೇಕಡಾವಾರು | ಆಂತರಿಕ ಉತ್ಪನ್ನಕ್ಕೆ ಕೃಷಿಯ ಕೊಡುಗೆ (ರೂ. ಲಕ್ಷ/ಹೆ.) | | ಬೀಳು ಭೂಮಿಯಿಂದ ಆಂತರಿಕ ಉತ್ಪನ್ನಕ್ಕೆ ನಷ್ಟ (ರೂ. ಕೋಟಿಗಳಲ್ಲಿ) | |
|---|---|---|---|---|---|---|---|---|
| | | | | | ಸ್ಥಿರ ಬೆಲೆ 2004–05 | ಚಾಲ್ತಿ ಬೆಲೆ 2013–14 | ಸ್ಥಿರ ಬೆಲೆ 2004–05 | ಚಾಲ್ತಿ ಬೆಲೆ 2013–14 |
| 1 | ಬಾಗಲಕೋಟೆ | 5.63 | 0.54 | 10 | 0.24 | 0.35 | 129 | 187 |
| 2 | ಬೆಂಗಳೂರು ನಗರ | 1.14 | 0.23 | 20 | 0.56 | 0.89 | 130 | 205 |
| 3 | ಬೆಂಗಳೂರು ಗ್ರಾಮಾಂತರ | 0.74 | 0.38 | 51 | 1.23 | 1.69 | 460 | 634 |
| 4 | ಬೆಳಗಾವಿ | 9.67 | 2.20 | 23 | 0.31 | 0.44 | 676 | 960 |
| 5 | ಬಳ್ಳಾರಿ | 5.79 | 1.01 | 17 | 0.20 | 0.29 | 202 | 296 |
| 6 | ಬೀದರ್ | 4.28 | 0.81 | 19 | 0.16 | 0.24 | 128 | 196 |
| 7 | ವಿಜಯಪುರ | 9.55 | 1.35 | 14 | 0.13 | 0.20 | 178 | 273 |
| 8 | ಚಾಮರಾಜನಗರ | 2.29 | 0.31 | 14 | 0.38 | 0.43 | 119 | 133 |
| 9 | ಚಿಕ್ಕಬಳ್ಳಾಪುರ | 2.07 | 0.37 | 18 | 0.47 | 0.66 | 175 | 245 |
| 10 | ಚಿಕ್ಕಮಗಳೂರು | 3.72 | 0.23 | 6 | 0.36 | 0.55 | 81 | 125 |
| 11 | ಚಿತ್ರದುರ್ಗ | 5.22 | 0.92 | 18 | 0.18 | 0.24 | 168 | 224 |
| 12 | ದಕ್ಷಿಣ ಕನ್ನಡ | 1.60 | 0.13 | 8 | 0.59 | 0.76 | 74 | 94 |
| 13 | ದಾವಣಗೆರೆ | 4.79 | 0.26 | 5 | 0.31 | 0.44 | 80 | 112 |
| 14 | ಧಾರವಾಡ | 4.90 | 0.56 | 11 | 0.14 | 0.20 | 78 | 114 |
| 15 | ಗದಗ | 5.25 | 0.32 | 6 | 0.09 | 0.14 | 29 | 45 |
| 16 | ಕಲಬುರಗಿ | 12.42 | 1.26 | 10 | 0.11 | 0.17 | 137 | 218 |
| 17 | ಹಾಸನ | 4.52 | 0.70 | 15 | 0.32 | 0.44 | 226 | 306 |
| 18 | ಹಾವೇರಿ | 4.64 | 0.17 | 4 | 0.22 | 0.30 | 38 | 52 |
| 19 | ಕೊಡಗು | 1.75 | 0.09 | 5 | 0.65 | 1.14 | 58 | 102 |
| 20 | ಕೋಲಾರ | 2.48 | 0.68 | 27 | 0.65 | 0.74 | 436 | 497 |
| 21 | ಕೊಪ್ಪಳ | 4.88 | 0.99 | 20 | 0.19 | 0.27 | 188 | 270 |
| 22 | ಮಂಡ್ಯ | 3.06 | 0.82 | 27 | 0.46 | 0.60 | 379 | 493 |
| 23 | ಮೈಸೂರು | 5.56 | 0.73 | 13 | 0.30 | 0.38 | 218 | 276 |
| 24 | ರಾಯಚೂರು | 6.77 | 2.01 | 30 | 0.13 | 0.21 | 265 | 420 |
| 25 | ರಾಮನಗರ | 1.86 | 0.43 | 23 | 0.54 | 0.66 | 231 | 282 |
| 26 | ಶಿವಮೊಗ್ಗ | 2.78 | 0.38 | 14 | 0.46 | 0.60 | 173 | 225 |
| 27 | ತುಮಕೂರು | 6.20 | 1.57 | 25 | 0.30 | 0.38 | 473 | 593 |
| 28 | ಉಡುಪಿ | 1.20 | 0.11 | 9 | 0.47 | 0.61 | 50 | 64 |
| 29 | ಉತ್ತರಕನ್ನಡ | 1.29 | 0.19 | 15 | 0.44 | 0.54 | 83 | 102 |
| 30 | ಯಾದಗಿರಿ | 3.15 | 0.96 | 30 | 0.14 | 0.28 | 131 | 266 |
| | ಒಟ್ಟು | 129 | 20.67 | 16 | 0.26 | 0.36 | 5792 | 8008 |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

# II. ಕೃಷಿ ಬೀಳು ಭೂಮಿ ಅಧ್ಯಯನ



ಅರೆಗುಜ್ಜನಹಳ್ಳಿ, ತುಮಕೂರು

ರೈತರು ಕೃಷಿ ಭೂಮಿಯನ್ನು ಬೀಳು ಬಿಡುವುದರ ಬಗ್ಗೆ ಸಮಗ್ರ ಅಧ್ಯಯನ ಮಾಡುವ ದೃಷ್ಟಿಯಿಂದ ದಿನಾಂಕ 13.01.2017 ರಂದು ತಜ್ಞರು, ವಿಜ್ಞಾನಿಗಳು, ಇಲಾಖಾಧಿಕಾರಿಗಳು ಮತ್ತಿತರರ **"ಬುದ್ಧಿಮತ್ತೆ ಒಗ್ಗೂಡಿಸುವ ಅಧಿವೇಶನ"** (Brain Storming Session) ಒಂದನ್ನು ಬೆಂಗಳೂರಿನಲ್ಲಿ ಜರುಗಿಸಲಾಗಿದ್ದು, ಸಂಶೋಧನೆಯ ಕಾರ್ಯಪದ್ಧತಿ, ಅಗತ್ಯ ಪರಿಹಾರ ಕ್ರಮಗಳು, ನೀತಿ ನಿಲುವುಗಳ ಬಗ್ಗೆ ಚರ್ಚಿಸಲಾಯಿತು.

ಈ ಸಂಶೋಧನಾ ಅಧ್ಯಯನದ ಭಾಗವಾಗಿ ರಾಜ್ಯದ 10 ಜಿಲ್ಲೆಗಳಲ್ಲಿ ತಮ್ಮ ಜಮೀನನ್ನು ಬೀಳು ಬಿಟ್ಟಿರುವ ಸುಮಾರು 456 ರೈತರನ್ನು ಗುರುತಿಸಿ, ಹೊಲಗಳಿಗೆ ಭೇಟಿ ನೀಡಿ, ಅಗತ್ಯ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕಲೆ ಹಾಕಲಾಯಿತು. ಇದರ ಜವಾಬ್ದಾರಿಯನ್ನು ರಾಜ್ಯದ ಬೆಂಗಳೂರು, ಧಾರವಾಡ, ರಾಯಚೂರು ಕೃಷಿ ವಿಶ್ವವಿದ್ಯಾನಿಲಯಗಳು, ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾನಿಲಯ ಹಾಗೂ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ – ಇವುಗಳ **ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕಗಳಿಗೆ** ವಹಿಸಿದ್ದು, ಆಯಾ ಜಿಲ್ಲೆಗಳ ಜಿಲ್ಲಾಡಳಿತ ಹಾಗೂ ಜಂಟಿ ಕೃಷಿ ನಿರ್ದೇಶಕರ ಸಕ್ರಿಯ ಸಹಕಾರವನ್ನೂ ಈ ಅಧ್ಯಯನಕ್ಕಾಗಿ ಪಡೆಯಲಾಯಿತು.

ವ್ಯಾವಹಾರಿಕ ದೃಷ್ಟಿಯಿಂದ ಕರ್ನಾಟಕವನ್ನು 5 ವಿವಿಧ ವಲಯಗಳಾಗಿ ವಿಂಗಡಿಸಿ ಅಧ್ಯಯನ ನಡೆಸುವುದು ಸಾಮಾನ್ಯ. ಈ ಹಿನ್ನೆಲೆಯಲ್ಲಿ **ಹಳೇ ಮೈಸೂರು** (ಮಂಡ್ಯ ಮತ್ತು ತುಮಕೂರು ಜಿಲ್ಲೆಗಳು), **ಮಲೆನಾಡು ಮತ್ತು ಕರಾವಳಿ** (ಉಡುಪಿ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು), **ಮಧ್ಯ ಕರ್ನಾಟಕ** (ಚಿತ್ರದುರ್ಗ ಜಿಲ್ಲೆ), **ಮುಂಬೈ ಕರ್ನಾಟಕ** (ಬೆಳಗಾವಿ, ವಿಜಯಪುರ ಜಿಲ್ಲೆಗಳು) ಹಾಗೂ **ಹೈದರಾಬಾದ್ ಕರ್ನಾಟಕ** (ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳು). ಈ ರೀತಿಯಾಗಿ ಐದು ವಲಯಗಳಿಂದ 10 ಜಿಲ್ಲೆಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಲಾಗಿದೆ.

ಈ ಐದು ವಲಯಗಳು ಮಣ್ಣು, ಹವಾಮಾನ, ಬೆಳೆ ಪದ್ಧತಿಗಳಲ್ಲಿ ಮಾತ್ರವಲ್ಲದೇ ಭಾಷೆ, ಆಹಾರ ಪದ್ಧತಿಗಳು, ಒಟ್ಟಾರೆ ಸಾಂಸ್ಕೃತಿಕ ವಿಚಾರಗಳಲ್ಲಿ ವೈಶಿಷ್ಟ್ಯತೆ ಹೊಂದಿವೆ. ಹಿಡುವಳಿ ಗಾತ್ರ ಇತ್ಯಾದಿ ವಿಚಾರಗಳಲ್ಲೂ ವೈವಿಧ್ಯ ಹೊಂದಿರುತ್ತವೆ. ಹಾಗಾಗಿ ಅಧ್ಯಯನದ ಫಲಿತಾಂಶವು ಸಮಗ್ರ ಆಯಾಮವನ್ನು ಪಡೆದಿರುತ್ತದೆ. ವಲಯವಾರು ಸಂಶೋಧನಾ ಫಲಿತಾಂಶಗಳನ್ನು ಈ ಮುಂದಿನ ಶೀರ್ಷಿಕೆಗಳಡಿ ಚರ್ಚಿಸಲಾಗಿದೆ:

### ಅ) ಭೂಮಿ ಬೀಳು ಬಿಟ್ಟಿರುವ ರೈತರ ಸಾಮಾಜಿಕ ಹಿನ್ನೆಲೆ

ಭೂಮಿಯನ್ನು ಬೀಳು ಬಿಟ್ಟಿರುವ ರೈತರ ಕುಟುಂಬ ಸದಸ್ಯರ ಸಂಖ್ಯೆ ಸರಾಸರಿ 6 ರಷ್ಟಿದೆ. ಇವರಲ್ಲಿ ಶೇ.43 ರಷ್ಟು ಸದಸ್ಯರು ಮಾತ್ರ ಕೃಷಿ ಕಾರ್ಯ ಕೈಗೊಳ್ಳುತ್ತಿರುವರು. ಶೇ. ಮೂರರಷ್ಟು ಸದಸ್ಯರು ಹೊರಗೆ ಕೆಲಸ ಮಾಡುತ್ತಿದ್ದು, ಶೇ. 6 ರಷ್ಟು ಸದಸ್ಯರು ಕೃಷಿ ಕೂಲಿಗೆ ಹೋಗುತ್ತಿರುವರು.


**ಭೂಮಿಯನ್ನು ಬೀಳು ಬಿಟ್ಟಿರುವ ಕುಟುಂಬಗಳ ಬಹುತೇಕ (ಶೇ.48 ರಷ್ಟು) ಸದಸ್ಯರು ನಿರುದ್ಯೋಗಿಗಳಾಗಿರುವುದು ಹಾಗೂ ಆಗಾಗ ಮಾತ್ರ ಕೂಲಿ ಕಾರ್ಯ ಕೈಗೊಳ್ಳುತ್ತಿರುವುದು ಗಂಭೀರ ವಿಚಾರವಾಗಿದೆ.**

ಕುಟುಂಬದ ಸದಸ್ಯರ ಸಂಖ್ಯೆ ಮುಂಬೈ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕಗಳಲ್ಲಿ ಅತ್ಯಧಿಕ (ಶೇ.8) ವಾಗಿದ್ದು, ಕೃಷಿ ಕಾರ್ಯ ಕೈಗೊಳ್ಳುತ್ತಿರುವ ಕುಟುಂಬ ಸದಸ್ಯರ ಪ್ರಮಾಣ ಮಲೆನಾಡು ಮತ್ತು ಕರಾವಳಿಗಳಲ್ಲಿ ಅಧಿಕ (ಶೇ.57) ವಾಗಿದೆ. ದಿನಗೂಲಿಗೆ ಹೋಗುತ್ತಿರುವ ಪ್ರಮಾಣ ಮಧ್ಯ ಕರ್ನಾಟಕದಲ್ಲಿ ಅಧಿಕ (ಶೇ.19) ವಾಗಿದೆ. ನಿರುದ್ಯೋಗಿಗಳಾಗಿದ್ದು, ಆಗಾಗ ದಿನಗೂಲಿಗೆ ಹೋಗುತ್ತಿರುವ ಕುಟುಂಬ ಸದಸ್ಯರ ಪ್ರಮಾಣ ಹೈದರಾಬಾದ್ ಕರ್ನಾಟಕದಲ್ಲಿ ಅತ್ಯಧಿಕ (ಶೇ.63) ವಾಗಿರುತ್ತದೆ. ವಿವರಗಳನ್ನು **ಅನುಬಂಧ 2**ರಲ್ಲಿ ನೀಡಲಾಗಿದೆ.


### ಆ) ಭೂಮಿ ಬೀಳು ಬಿಟ್ಟಿರುವ ರೈತರ ವರ್ಗ ಹಾಗೂ ಸಾಮಾಜಿಕ ವರ್ಗೀಕರಣ

ರಾಜ್ಯದಲ್ಲಿ ಕೃಷಿ ಭೂಮಿ ಬೀಳು ಬಿಟ್ಟಿರುವ ರೈತರಲ್ಲಿ ಬಹುಪಾಲು (ಶೇ.61 ರಷ್ಟು) ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದರೆ, ಶೇ.20 ರಷ್ಟು ರೈತರು ಮಧ್ಯಮ ವರ್ಗದ ರೈತರು ಹಾಗೂ ಇನ್ನುಳಿದ ಶೇ.19 ರಷ್ಟು ದೊಡ್ಡ ರೈತರಾಗಿರುವರು. ಹಾಗೆಯೇ ಸಾಮಾಜಿಕ ಗುಂಪಿನ ಹಿನ್ನೆಲೆಯಲ್ಲಿ ನೋಡಿದರೆ, ಶೇ.55 ರಷ್ಟು ರೈತರು ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರಾಗಿದ್ದರೆ, ಶೇ.25 ರಷ್ಟು ಸಾಮಾನ್ಯ ವರ್ಗದ ರೈತರು ಶೇ.21 ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರೂ ಆಗಿರುವರು (**ಚಿತ್ರ 1 ಅ & ಆ**).

**ಚಿತ್ರ 1 ಅ: ಕರ್ನಾಟಕದಲ್ಲಿ ಭೂಮಿಯನ್ನು ಬೀಳು ಬಿಟ್ಟಿರುವ ವಿವಿಧ ವರ್ಗಗಳ ರೈತರ ಪಾಲು (ಶೇ.)**





**ಚಿತ್ರ 1 ಆ : ಕರ್ನಾಟಕದಲ್ಲಿ ಭೂಮಿಯನ್ನು ಬೀಳು ಬಿಟ್ಟಿರುವ ವಿವಿಧ ಸಾಮಾಜಿಕ ಗುಂಪುಗಳ ರೈತರ ಪ್ರಮಾಣ (ಶೇ.)**





ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯದ ರೈತರು ಅಧಿಕ ಪ್ರಮಾಣದಲ್ಲಿ (ಶೇ.64) ಹಳೇ ಮೈಸೂರು ಹಾಗೂ ಮಲೆನಾಡು ಮತ್ತು ಕರಾವಳಿ ವಲಯಗಳಲ್ಲಿ ಭೂಮಿ ಬೀಳು ಬಿಟ್ಟಿದ್ದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತರು ಹೆಚ್ಚಾಗಿ (ಶೇ.41 ರಷ್ಟು) ಹೈದರಾಬಾದ್ ಕರ್ನಾಟಕದಲ್ಲಿ ತಮ್ಮ ಕೃಷಿ ಭೂಮಿಯನ್ನು ಬೀಳು ಬಿಟ್ಟಿರುವರು. ಆಶ್ಚರ್ಯವೆಂದರೆ ಮುಂಬೈ ಕರ್ನಾಟಕದಲ್ಲಿ ಸಾಮಾನ್ಯ ವರ್ಗದ ಮೇಲ್ಜಾತಿಯ ರೈತರು ಅತ್ಯಧಿಕ (ಶೇ.42) ಪ್ರಮಾಣದ ಭೂಮಿಯನ್ನು ಬೀಳು ಬಿಟ್ಟಿರುವರು. ವಿವರಗಳನ್ನು **ಅನುಬಂಧ 3** ರಲ್ಲಿ ನೀಡಲಾಗಿದೆ.

ಈ ರೀತಿ ಬೀಳು ಬಿಟ್ಟಿರುವ ಭೂಮಿಯ ಪ್ರಮಾಣ ಕೂಡಾ ವಿವಿಧ ವರ್ಗ ಹಾಗೂ ಜಾತಿಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತರು ಅವರ ಕೃಷಿ ಭೂಮಿಯ ಶೇ.59 ರಷ್ಟನ್ನು ಬೀಳು ಬಿಟ್ಟಿದ್ದರೆ, ದೊಡ್ಡ ರೈತರು ಬೀಳು ಬಿಟ್ಟಿರುವ ಭೂಮಿಯ ಪ್ರಮಾಣ ಶೇ.37 ರಷ್ಟು ಮಾತ್ರವಿರುತ್ತದೆ. ಪರಿಶಿಷ್ಟ ಜಾತಿಯ ರೈತರು ಶೇ.54 ರಷ್ಟು ಭೂಮಿ ಬೀಳು ಬಿಟ್ಟಿದ್ದರೆ, ಪರಿಶಿಷ್ಟ ವರ್ಗದ ರೈತರು ಶೇ.38 ರಷ್ಟು ಮಾತ್ರ ಭೂಮಿ ಬೀಳು ಬಿಟ್ಟಿರುತ್ತಾರೆ. ಸಾಮಾನ್ಯ ವರ್ಗದ ರೈತರೂ ಸಹ ತಮ್ಮ ಭೂಮಿಯನ್ನು ಶೇ.49 ರಷ್ಟು ಬೀಳು ಬಿಟ್ಟಿರುವುದು ಮುಖ್ಯ ಸಂಗತಿಯಾಗಿರುತ್ತದೆ (**ಚಿತ್ರ 2 ಅ & ಆ**).

**ಚಿತ್ರ 2 ಅ : ಕರ್ನಾಟಕದಲ್ಲಿ ವಿವಿಧ ವರ್ಗದ ರೈತರು ಕೃಷಿ ಭೂಮಿ ಬೀಳು ಬಿಟ್ಟಿರುವ ಪ್ರಮಾಣ (ಶೇ.)**




**ಚಿತ್ರ 2 ಆ : ಕರ್ನಾಟಕದಲ್ಲಿ ವಿವಿಧ ಸಾಮಾಜಿಕ ಗುಂಪುಗಳ ರೈತರು ಕೃಷಿ ಭೂಮಿ ಬೀಳು ಬಿಟ್ಟಿರುವ ಪ್ರಮಾಣ (ಶೇ.)**




**ರಾಜ್ಯದಲ್ಲಿ ಭೂಮಿ ಬೀಳು ಬಿಟ್ಟಿರುವ ಸಣ್ಣ ಮತ್ತು ಅತಿಸಣ್ಣ ರೈತರಲ್ಲಿ ಪರಿಶಿಷ್ಟ ಜಾತಿ (ಶೇ.69), ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ರೈತರು (ಶೇ.61), ಪರಿಶಿಷ್ಟ ಪಂಗಡದ ರೈತರು (ಶೇ.53) ಅಧಿಕ ಪ್ರಮಾಣದಲ್ಲಿರುವುದು ಗಂಭೀರ ವಿಚಾರವಾಗಿದೆ. ವಿವರಗಳನ್ನು ಅನುಬಂಧ 4 ರಲ್ಲಿ ನೀಡಲಾಗಿದೆ.**


ಮುಂದುವರೆದು, ಬೀಳು ಬಿಟ್ಟಿರುವ ರೈತರಲ್ಲಿ ಹಳೇ ಮೈಸೂರಿನ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರು, ಮಲೆನಾಡು ಮತ್ತು ಕರಾವಳಿ ಭಾಗದ ಪರಿಶಿಷ್ಟ ಪಂಗಡಗಳ ದೊಡ್ಡ ರೈತರು

ಹಾಗೂ ಮಧ್ಯ ಕರ್ನಾಟಕದ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿ ಸಣ್ಣ ರೈತರು, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ, ಮಧ್ಯಮ ರೈತರು ತಮ್ಮ ಸಂಪೂರ್ಣ ಭೂಮಿಯನ್ನು ಕೃಷಿ ಮಾಡದೇ ಬೀಳು ಬಿಟ್ಟಿರುವುದು ಅತ್ಯಂತ ಗಂಭೀರ ಸಂಗತಿಯಾಗಿದೆ.

### ಇ) ಬೀಳು ಬಿಟ್ಟಿರುವ ಅವಧಿ

ರಾಜ್ಯದಲ್ಲಿ ಬೀಳು ಬಿಟ್ಟಿರುವ ಕೃಷಿ ಭೂ ವಿಸ್ತೀರ್ಣದಲ್ಲಿ ಶೇ.72 ರಷ್ಟು ಪ್ರಮಾಣ ಐದು ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಯದ್ದಾಗಿರುತ್ತದೆ (**ಚಿತ್ರ 3**). ಮಳೆ ಆಶ್ರಯದ ಭೂಮಿ (ಶೇ.69) ಗೆ ಹೋಲಿಸಿದರೆ ಈ ಪ್ರಮಾಣ ನೀರಾವರಿಯಲ್ಲಿ ಅಧಿಕವಾಗಿರುವುದು (ಶೇ.82) ಆಶ್ಚರ್ಯದ ಸಂಗತಿಯಾಗಿರುತ್ತದೆ. ಬಾಗಲಕೋಟೆಯ ಆಲಮಟ್ಟಿ ಅಣೆಕಟ್ಟು ವ್ಯಾಪ್ತಿಯ ನೀರಾವರಿ ಪ್ರದೇಶದಲ್ಲಿ ಜೌಗು ಸಮಸ್ಯೆ ಅತಿಯಾಗಿದ್ದು, ಕೃಷಿ ಮಾಡದಿರುವುದೂ ಸಹ ಈ ನಿಟ್ಟಿನಲ್ಲಿ ಮುಖ್ಯ ವಿಚಾರವಾಗಿದೆ. ವಿವರಗಳನ್ನು **ಅನುಬಂಧ 5 ರಲ್ಲಿ ನೀಡಲಾಗಿದೆ.**

**ಚಿತ್ರ 3 : ಕರ್ನಾಟಕದಲ್ಲಿ ರೈತರು ಕೃಷಿ ಭೂಮಿ ಬೀಳು ಬಿಟ್ಟಿರುವ ಅವಧಿ (ಶೇ.)**




**ಮಧ್ಯ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದಲ್ಲಿ ರೈತರು ಬೀಳು ಬಿಟ್ಟಿರುವ ಸಂಪೂರ್ಣ ಕೃಷಿ ಭೂಮಿಯು 5 ವರ್ಷಕ್ಕಿಂತ ಹೆಚ್ಚಿನ ಅವಧಿಯದ್ದಾಗಿರುತ್ತದೆ. ಮಧ್ಯ ಕರ್ನಾಟಕದಲ್ಲಿ ಬೀಳು ಭೂಮಿಯು ಸಂಪೂರ್ಣ ಮಳೆ ಆಶ್ರಿತವಾಗಿದ್ದರೆ, ಹೈದರಾಬಾದ್ ಕರ್ನಾಟಕದಲ್ಲಿ ಮಳೆ ಆಶ್ರಯ ಹಾಗೂ ನೀರಾವರಿ – ಈ ಎರಡೂ ವಿಧದ ಭೂಮಿಗಳನ್ನು ಬೀಳು ಬಿಡಲಾಗಿದೆ.**

### ಈ) ಕೃಷಿ ಭೂಮಿಯನ್ನು ಬೀಳು ಬಿಡುವ ಕಾರಣಗಳು

ನೀರಿಗೆ ಸಂಬಂಧಿಸಿದ ಸಮಸ್ಯೆಗಳು (ಶೇ.77), ಭೂಮಿಯ ಫಲವತ್ತತೆ ನಾಶ (ಶೇ.55) ಹಾಗೂ ಕಾರ್ಮಿಕರ ಕೊರತೆ (ಶೇ.52) ರಾಜ್ಯದಲ್ಲಿ ರೈತರು ಕೃಷಿ ಭೂಮಿಯನ್ನು ಬೀಳು ಬಿಡುತ್ತಿರುವುದಕ್ಕೆ ಪ್ರಮುಖ ಮೂರು ಕಾರಣಗಳಾಗಿವೆ. ಮುಂಗಾರು ವಿಫಲತೆ ಸೇರಿ ರೈತರು ಭೂಮಿ ಬೀಳು ಬಿಡುವುದಕ್ಕೆ ಪ್ರಮುಖ ಕಾರಣ ನೀರಿನ ವಿಚಾರಗಳೇ ಎನ್ನಲಾಗಿದೆ. ಜೊತೆಗೆ ಹಿಡುವಳಿಯ ಗಾತ್ರ (ಶೇ.27), ಕಾಡು ಪ್ರಾಣಿ ಮತ್ತು ಹಕ್ಕಿಗಳ ಹಾವಳಿ (ಶೇ.26), ಹಣಕಾಸಿನ ಸಮಸ್ಯೆ (ಶೇ.23) ಹಾಗೂ ಭೂಮಿ ಮೌಲ್ಯ ಮುಂದಿನ ದಿನಗಳಲ್ಲಿ ಅಧಿಕವಾಗುವ ನಿರೀಕ್ಷೆ (ಶೇ.14) ಇವುಗಳು ಭೂಮಿ ಬೀಳು ಬಿಡುವುದಕ್ಕೆ ರೈತರು ನೀಡಿರುವ ಇತರ ಕಾರಣಗಳಾಗಿವೆ. ವಿವರಗಳನ್ನು **ಪಟ್ಟಿ 2** ರಲ್ಲಿ ನೀಡಲಾಗಿದೆ.

**ಕುಟುಂಬದ ಸದಸ್ಯರು ಪಟ್ಟಣಗಳಿಗೆ ಹಾಗೂ ಇತರೆಡೆ ಕೆಲಸಕ್ಕೆ ಹೋಗುವುದರಿಂದ ಉಂಟಾಗುವ ನಿರ್ವಹಣೆ ಕೊರತೆ ಹಾಗೂ ಗೇಣಿಗೆ ಕೊಟ್ಟರೆ ಭೂಮಿ ಕಳೆದುಕೊಳ್ಳುವ ಭಯದಿಂದ ಗಮನಾರ್ಹ ಪ್ರಮಾಣದ (ಶೇ.32) ರೈತರು ಭೂಮಿಯನ್ನು ಬೀಳು ಬಿಟ್ಟಿರುವುದಾಗಿದ್ದರೂ, ಬಹುತೇಕ ರೈತರು ಅದನ್ನು ಕಡಿಮೆ / ಮಧ್ಯಮ ಶ್ರೇಣಿಯ ಕಾರಣ ಎಂದಿರುತ್ತಾರೆ.**

**ಪಟ್ಟಿ 2: ಕೃಷಿ ಭೂಮಿ ಬೀಳು ಬಿಡುವ ಕಾರಣಗಳು**

| ಕ್ರ.ಸಂ. | ಕಾರಣಗಳು | ಶ್ರೇಣಿ | | | |
|---|---|---|---|---|---|
| | | ಕಡಿಮೆ | ಮಧ್ಯಮ | ಗರಿಷ್ಠ | ಒಟ್ಟು |
| 1 | ಮುಂಗಾರು ವಿಫಲತೆ / ನೀರಿನ ಸಮಸ್ಯೆ | 0 | 5 | 71 | 77 |
| 2 | ಭೂ ಸವಕಳಿ/ ಕಡಿಮೆ ಫಲವತ್ತತೆ / ಸಮಸ್ಯಾತ್ಮಕ ಮಣ್ಣು | 3 | 22 | 31 | 55 |
| 3 | ಕಾರ್ಮಿಕರ ಅಲಭ್ಯತೆ | 5 | 20 | 28 | 52 |
| 4 | ನಿರ್ವಹಣೆ ಕೊರತೆ ಹಾಗೂ ಗೇಣಿಗೆ ನೀಡಿದ ಭೂಮಿ ಕಳೆದುಕೊಳ್ಳವ ಭೀತಿ | 15 | 15 | 3 | 32 |
| 5 | ಹಣದ ಕೊರತೆ/ಸಾಲದ ಬಾಧೆ | 5 | 11 | 7 | 23 |
| 6 | ವ್ಯಾಜ್ಯ / ನ್ಯಾಯಾಲಯದಲ್ಲಿ ಪ್ರಕರಣಗಳು/ ಕೌಟುಂಬಿಕ ವಿವಾದಗಳು | 8 | 4 | 3 | 15 |
| 7 | ಹಿಡುವಳಿಯ ಗಾತ್ರ ಲಾಭದಾಯಕವಾಗಿಲ್ಲದಿರುವುದು | 6 | 8 | 13 | 27 |
| 8 | ಕಾಡು ಪ್ರಾಣಿಗಳ ಹಾವಳಿ | 9 | 6 | 10 | 26 |
| 9 | ಭೂಮಿ ಮೌಲ್ಯ ಅಧಿಕವಾಗುವ ನಿರೀಕ್ಷೆ | 7 | 6 | 1 | 14 |

### ಉ) ರೈತರು ಸೂಚಿಸಿರುವ ಪರಿಹಾರ ಕ್ರಮಗಳು

ಒಬ್ಬಂಟಿಯಾಗಿ ಕೃಷಿ ಮಾಡುವುದರ ಬದಲು, ರೈತರು ಗುಂಪು ಸೇರಿ ಸಾಂಘಿಕವಾಗಿ ಬೇಸಾಯ ಮಾಡುವುದು ಕೃಷಿ ಭೂಮಿಯನ್ನು ಬೀಳು ಬಿಡುವುದನ್ನು ತಡೆಯಲು ಸೂಕ್ತ ಪರಿಹಾರವೆಂದು ಬಹುಪಾಲು (ಶೇ.50) ರೈತರು ಗರಿಷ್ಠ ಶ್ರೇಣಿ ನೀಡಿ ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ. ಬೀಳು ಭೂಮಿಗಳನ್ನು ಹುಲ್ಲುಗಾವಲುಗಳಾಗಿ ಅಭಿವೃದ್ಧಿ ಪಡಿಸುವುದು (ಶೇ.45), ಸೌರಶಕ್ತಿ ಉತ್ಪಾದನೆಯಂತಹ ಪರ್ಯಾಯಗಳಿಗಾಗಿ ಬಳಸುವುದು (ಶೇ.41), ಕುರಿ ಮತ್ತು ಮೇಕೆ ಸಾಕಣೆಗಾಗಿ ಮೇವಿನ ಬೆಳೆಗಳನ್ನು ಬೆಳೆಸುವುದು (ಶೇ.41), ಕೃಷಿ ಅರಣ್ಯ/ ಬಿದಿರು ಕೃಷಿಯಂತಹ ಪರ್ಯಾಯ ಬೆಳೆ ಪದ್ಧತಿಗಳನ್ನು ಪ್ರೋತ್ಸಾಹಿಸುವುದು (ಶೇ.39), ಒಪ್ಪಂದ ಕೃಷಿ (ಶೇ.38) ಇತ್ಯಾದಿಗಳು ರೈತರಿಂದ ಬಂದಿರುವ ಇತರೆ ಸಲಹೆಗಳಾಗಿವೆ. ಪರಿಸರ ಸಂರಕ್ಷಣೆಯು ಇಂಗಾಲ ಸ್ಥಿರೀಕರಣದ ಮೂಲಕ ಪ್ರತಿಫಲಿಸುವುದಾದಲ್ಲಿ ಅದಕ್ಕಾಗಿ ಬೀಳು ಭೂಮಿಯನ್ನು ಬಳಸಲು ರೈತರು ಸಿದ್ಧರಿರುವುದಾಗಿ ತಿಳಿಸಿದರೂ, ಇದಕ್ಕೆ ಬಹಳ ಮಂದಿ ಗರಿಷ್ಠ ಆದ್ಯತೆ ನೀಡಿರುವುದಿಲ್ಲ. ವಿವರಗಳನ್ನು **ಪಟ್ಟಿ 3** ರಲ್ಲಿ ಕೊಡಲಾಗಿದೆ.

**ಪಟ್ಟಿ 3 : ಭೂಮಿ ಬೀಳು ಬಿಡುವುದನ್ನು ತಡೆಯಲು ರೈತರು ವ್ಯಕ್ತ ಪಡಿಸಿದ ಪರಿಹಾರ ಕ್ರಮಗಳು (ಶೇ.)**

| ಕ್ರ.ಸಂ. | ಪರಿಹಾರ ಕ್ರಮಗಳು | ಶ್ರೇಣಿ | | | |
|---|---|---|---|---|---|
| | | ಕಡಿಮೆ | ಮಧ್ಯಮ | ಗರಿಷ್ಠ | ಒಟ್ಟು |
| 1 | ಗುಂಪು ಸಾಗುವಳಿ/ ರೈತ ಉತ್ಪಾದಕ ಸಂಘಟನೆಗಳ ಮೂಲಕ/ ಸಹಕಾರಿ ಸಾಗುವಳಿ | 7 | 18 | 25 | 50 |
| 2 | ಒಪ್ಪಂದ ಕೃಷಿ | 12 | 18 | 9 | 38 |
| 3 | ಕಂಪನಿಗಳಿಗೆ ಗುತ್ತಿಗೆ ನೀಡುವುದು / ರೈತ ಉತ್ಪಾದಕ ಸಂಘಟನೆಗಳಿಗೆ ಗುತ್ತಿಗೆಗೆ ನೀಡುವುದು/ಸ್ವಸಹಾಯ ಗುಂಪುಗಳಿಗೆ ಗುತ್ತಿಗೆಗೆ ನೀಡುವುದು– ಜಮೀನಿನ ಹಕ್ಕನ್ನು ಭದ್ರಪಡಿಸಿಕೊಂಡು. | 8 | 17 | 6 | 28 |
| 4 | ಗುತ್ತಿಗೆಗೆ ನೀಡುವ ಮೂಲಕ ಸಾಗುವಳಿ ವಿಸ್ತೀರ್ಣವನ್ನು ಹೆಚ್ಚಿಸಿಕೊಳ್ಳುವುದು. | 10 | 10 | 5 | 25 |
| 5 | ಕೃಷಿ ಅರಣ್ಯ /ಬಿದಿರು ಕೃಷಿಯಂತಹ ಪರ್ಯಾಯ ಬೆಳೆ ಪದ್ಧತಿಗಳನ್ನು ಪ್ರೋತ್ಸಾಹಿಸುವ ಮೂಲಕ | 14 | 20 | 4 | 39 |
| 6 | ಸೌರಶಕ್ತಿ ಉತ್ಪಾದನೆಯಂತಹ ಪರ್ಯಾಯಗಳಿಗಾಗಿ ಬಳಸುವುದು. | 14 | 13 | 14 | 41 |
| 7 | ಹುಲ್ಲುಗಾವಲುಗಳಾಗಿ ಅಭಿವೃದ್ಧಿ ಪಡಿಸುವುದು. | 11 | 23 | 10 | 45 |
| 8 | ಕುರಿ ಮತ್ತು ಮೇಕೆ ಸಾಕಣೆಗಾಗಿ ಮೇವಿನ ಬೆಳೆಗಳನ್ನು ಬೆಳೆಸುವುದು. | 14 | 17 | 10 | 41 |
| 9 | ಪರಿಸರ ಸಂರಕ್ಷಣೆ, ಇಂಗಾಲ ಸ್ಥಿರೀಕರಣ ಇತ್ಯಾದಿಗಳ ಮೂಲಕ ಪ್ರತಿಫಲ ಪಡೆಯುವುದು. | 18 | 8 | 1 | 27 |


ಬೋಗಡಿ ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ



ಸತ್ತಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ

# III. ಚಿಕ್ಕ ಮತ್ತು ಚದುರಿದ ಹಿಡುವಳಿಗಳು

ನಮ್ಮ ಬಹುತೇಕ ರೈತರ ಭೂ ಹಿಡುವಳಿಗಳು ವರ್ಷದಿಂದ ವರ್ಷಕ್ಕೆ ನಾನಾ ಕಾರಣಗಳಿಂದ ಕಿರಿದಾಗುತ್ತಾ ವ್ಯವಸ್ಥಿತವಾಗಿ ಬೇಸಾಯ ಕೈಗೊಳ್ಳಲು ಅಸಾಧ್ಯವಾಗುತ್ತಿರುವುದು ಮತ್ತೊಂದು ಕಠಿಣ ಸಮಸ್ಯೆಯಾಗಿದೆ. ಸಾಲದ್ದಕ್ಕೆ, ನಮ್ಮ ರೈತರ ಕೃಷಿ ಭೂಮಿ ಒಂದೆಡೆ ಒತ್ತಾಗಿ ಇರದೇ ಅಲ್ಲಲ್ಲಿ ಚದುರಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.


**ಚಿತ್ರ 4** ರಲ್ಲಿ ಕಳೆದ ಐದು ದಶಕಗಳಲ್ಲಿ ರಾಜ್ಯದ ರೈತರ ಸರಾಸರಿ ಕೃಷಿ ಹಿಡುವಳಿ ಗಾತ್ರದಲ್ಲಾದ ಕಡಿತವನ್ನು ವಿವರಿಸಲಾಗಿದೆ. 1970–71 ರಲ್ಲಿ ರಾಜ್ಯದ ರೈತರ ಸರಾಸರಿ ಹಿಡುವಳಿ 3.20 ಹೆಕ್ಟೇರ್‌ಗಳಿದ್ದು, 2010–11 ರಲ್ಲಿ ಅದರ ಅರ್ಧಕ್ಕಿಂತಲೂ ಕಡಿಮೆ, ಅಂದರೆ 1.55 ಹೆಕ್ಟೇರ್‌ಗೆ ಇಳಿದಿರುತ್ತದೆ.

**ಚಿತ್ರ 4: ಕರ್ನಾಟಕದಲ್ಲಿ ಐದು ದಶಕಗಳಲ್ಲಿ (1970–71 ರಿಂದ 2010–11) ಕೃಷಿ ಹಿಡುವಳಿ ಗಾತ್ರದಲ್ಲಾದ ಕಡಿತ**





**ಈ ಅವಧಿಯಲ್ಲಿ ಐದು ಎಕರೆಗಿಂತ ಕಡಿಮೆ ಇಡುವಳಿ ಇರುವ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಒಟ್ಟು ರೈತರಲ್ಲಿ ಶೇ.54 ರಿಂದ ಶೇ.76 ಕ್ಕೆ ಭಾರೀ ಪ್ರಮಾಣದಲ್ಲಿ ಏರಿರುತ್ತದೆ. ವಿವಿರಗಳನ್ನು ಚಿತ್ರ 5 (ಅ & ಆ) ದಲ್ಲಿ ನೀಡಲಾಗಿದೆ.**

**ಚಿತ್ರ 5 : ಕರ್ನಾಟಕದಲ್ಲಿ ವಿವಿದ ಗಾತ್ರದ ಕೃಷಿ ಹಿಡುವಳಿಗಳ ಸಂಖ್ಯೆಯಲ್ಲಾದ ಬದಲಾವಣೆ**



ಆಶ್ಚರ್ಯವೆಂದರೆ ಈ ಐದು ದಶಕಗಳ ಅವಧಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ವರ್ಗದ ರೈತರು ಕೃಷಿ ಕೈಗೊಳ್ಳುತ್ತಿರುವ ವಿಸ್ತೀರ್ಣ ಒಟ್ಟು ಭೂಮಿಯಲ್ಲಿ ಶೇ.16 ರಿಂದ ಶೇ.23ಕ್ಕೆ ಸ್ವಲ್ಪ ಪ್ರಮಾಣದಲ್ಲಿ ಏರಿರುತ್ತದೆ. **(ಚಿತ್ರ 6 ಅ & ಆ)**

**ಚಿತ್ರ 6 : ಕರ್ನಾಟಕದಲ್ಲಿ ವಿವಿದ ಗಾತ್ರದ ಕೃಷಿ ಹಿಡುವಳಿಗಳ ವಿಸ್ತೀರ್ಣದಲ್ಲಾದ ಬದಲಾವಣೆ**




ಅಂದರೆ, ವರ್ಷ ವರ್ಷಕ್ಕೂ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಏರುತ್ತಿದ್ದು, ಅವರ ಸ್ವಾಧೀನದ ಒಟ್ಟು ಭೂ ವಿಸ್ತೀರ್ಣ ಮಾತ್ರ ಹಾಗೆಯೇ ಉಳಿದಿರುತ್ತದೆ ಎಂದಾಯ್ತು. ಪರಿಣಾಮವಾಗಿ ಈ ವರ್ಗದ ರೈತರ ಹಿಡುವಳಿ ಗಾತ್ರ ಚಿಕ್ಕದಾಗಿ, ಲಾಭದಾಯಕವಲ್ಲದ ಸ್ವರೂಪ ಪಡೆದಿರುತ್ತದೆ.

ಇನ್ನು ಬಹುತೇಕ ಮಧ್ಯಮ ಹಾಗೂ ದೊಡ್ಡ ರೈತರ ಹಿಡುವಳಿ ಒಂದೆಡೆ ಒತ್ತಾಗಿರದೇ, ಅಲ್ಲಲ್ಲಿ ಚದುರಿರುವುದು ಮತ್ತೊಂದು ಸಮಸ್ಯೆಯಾಗಿರುತ್ತದೆ. ಉದಾಹರಣೆಗೆ, ಹಳೆ ಮೈಸೂರು ಪ್ರಾಂತ್ಯದಲ್ಲಿ ಶೇ.29 ರಷ್ಟು ಮಧ್ಯಮ ರೈತರ (5–10 ಎಕರೆ) ಹಾಗೂ ಶೇ.7 ರಷ್ಟು ದೊಡ್ಡ ರೈತರ (10 ಎಕರೆಗಿಂತ ಜಾಸ್ತಿ) ಹಿಡುವಳಿ ಮಾತ್ರ ಒಂದೆಡೆ ಒತ್ತಾಗಿ ಇರುವ ಏಕೈಕ ಹಿಡುವಳಿಗಳಾಗಿವೆ.

**ಶೇ.62 ರಷ್ಟು ಮಧ್ಯಮ ರೈತರ ಹಿಡುವಳಿಗಳು 2 ರಿಂದ 4 ತುಂಡುಗಳಾದ್ದು, ಶೇ.29 ರಷ್ಟು ದೊಡ್ಡ ರೈತರ ಹಿಡುವಳಿ ಐದಕ್ಕಿಂತಲೂ ಅಧಿಕ ತುಂಡುಗಳಾಗಿರುವುದು ಗಮನಿಸಬೇಕಾಗಿರುವ ವಿಚಾರವಾಗಿದೆ.**

ಸಣ್ಣ ಮತ್ತು ಅತಿ ಸಣ್ಣ ರೈತರಲ್ಲೇ ಶೇ.42 ರಷ್ಟು ಹಿಡುವಳಿಗಳು ಕೂಡಾ 2 ರಿಂದ 4 ತುಂಡಾಗಿರುವುದು ಅಷ್ಟೇ ಗಂಭೀರ ವಿಚಾರವಾಗಿದೆ. ವಿವರಗಳನ್ನು **ಪಟ್ಟಿ 4** ರಲ್ಲಿ ನೀಡಲಾಗಿದೆ.

**ಒಟ್ಟಾರೆಯಾಗಿ ಹೇಳುವುದಾದರೆ ನಮ್ಮ ರೈತರು ಕೃಷಿ ಮಾಡುವ ಅರ್ಧದಷ್ಟು ಹಿಡುವಳಿಗಳು ಒಂದೆಡೆ ಒತ್ತಾಗಿ ಇರದೇ, 2 ರಿಂದ 4 ತುಂಡಾಗಿ ಚದುರಿರುತ್ತವೆ.**

ಪರ್ಯಾಯ ಉದ್ಯೋಗಗಳಿಲ್ಲದಿರುವುದು, ಒಡೆತನದ ಹಕ್ಕು, ಭೂಮಿಯ ಮೇಲಿನ ವ್ಯಾಮೋಹ ಇತ್ಯಾದಿ ಕಾರಣಗಳಿಂದ ರಾಜ್ಯದ ಕೃಷಿಯು ಚಿಕ್ಕ ಹಾಗೂ ಚದುರಿದ ಹಿಡುವಳಿಗಳ ಸಮಸ್ಯೆ ಎದುರಿಸುತ್ತಿದೆ.

**ಪಟ್ಟಿ 4 : ವಿವಿಧ ವರ್ಗದ ರೈತರ ಹಿಡುವಳಿ ತುಂಡು** (Fragmentation) **ಪ್ರಮಾಣ (ಹಳೇ ಮೈಸೂರು ವಲಯ) (ಶೇ.)**

| ಕ್ರ. ಸಂ. | ವರ್ಗಗಳು | ಏಕೈಕ ಹಿಡುವಳಿ | 2 ರಿಂದ 4 ತುಂಡು | 5 ಕ್ಕಿಂತ ಅಧಿಕ |
|---|---|---|---|---|
| 1 | ಸಣ್ಣ ಮತ್ತು ಅತಿಸಣ್ಣ ರೈತರು (5 ಎಕರೆಯವರೆಗೆ) | 55 | 42 | 3 |
| 2 | ಮಧ್ಯಮ ರೈತರು (5–10 ಎಕರೆಯವರೆಗೆ) | 29 | 62 | 9 |
| 3 | ದೊಡ್ಡ ರೈತರು (10 ಎಕರೆಗಿಂತ ಹೆಚ್ಚು) | 7 | 64 | 29 |
| **ಒಟ್ಟು** | | **42** | **50** | **8** |

# IV. "ರಾಜ್ಯದ ಬೀಳು ಭೂಮಿ ಸದ್ಬಳಕೆ" ಕಾರ್ಯಾಗಾರ

**ಸಮೃದ್ಧಿ ಸಭಾಂಗಣ, ಕೃಷಿ ಇಲಾಖೆ ಆವರಣ, ಬೆಂಗಳೂರು ದಿನಾಂಕ 02-03-2017**




**ಶ್ರೀ. ಟಿ. ವೈ. ಶ್ರೀನಿವಾಸ್**

ಕೃಷಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ

ಬೆಲೆ ಮತ್ತು ಮಾರುಕಟ್ಟೆ ಬಗ್ಗೆ ಮಾತ್ರವಲ್ಲ, ಕೃಷಿ ಭೂಮಿ ಸದ್ಬಳಕೆ, ಒಟ್ಟಾರೆ ರೈತರ ಕಲ್ಯಾಣ ವಿಚಾರಗಳ ಬಗ್ಗೆಯೂ ಕಾರ್ಯೋನ್ಮುಖರಾಗುವುದು ಬೆಲೆ ಆಯೋಗದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ರೈತರು ಕೃಷಿ ಕಾರ್ಯವನ್ನೇ ಕೈಗೊಳ್ಳದೇ ವ್ಯವಸಾಯ ಭೂಮಿಯನ್ನು ಬೀಳು ಬಿಡುತ್ತಿರುವ ಸಮಸ್ಯೆಗೆ ಪರಿಹಾರ ದೊರಕುವ ನಿಟ್ಟಿನಲ್ಲಿ ರೈತ ಪ್ರತಿನಿಧಿಗಳು, ತಜ್ಞರು, ಇಲಾಖಾ ಅಧಿಕಾರಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಈ ಸಭೆ ಕರೆಯಲಾಗಿದೆ.





**ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು, ಕೃಷಿ ಬೆಲೆ ಆಯೋಗ

ರಾಜ್ಯದಲ್ಲಿ ಸುಮಾರು 21 ಲಕ್ಷ ಹೆಕ್ಟೇರ್ ಬೇಸಾಯ ಯೋಗ್ಯ ಭೂಮಿಯನ್ನು ಹಲವಾರು ಕಾರಣಗಳಿಂದ ಬಳಸದೇ ಬೀಳು ಬಿಡಲಾಗಿರುತ್ತದೆ. ಇದು ರಾಜ್ಯದ ಕೃಷಿ ಅಭಿವೃದ್ಧಿಗೆ ತೀವ್ರ ಅಡಚಣೆಯಾಗಿದೆ. **ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪ ಸಂಖ್ಯಾತ ಸಮುದಾಯ**ದ ಸಣ್ಣ ಮತ್ತು ಅತಿ ಸಣ್ಣ ರೈತರು ಈ ರೀತಿ ಭೂಮಿ ಬೀಳು ಬಿಟ್ಟಿರುವುದು ಆತಂಕಕಾರಿ.

ಕೇಂದ್ರ ಸರ್ಕಾರದ **ನೀತಿ ಆಯೋಗವು** ರೈತರು ಕೃಷಿ ಮಾಡಲು ಕಷ್ಟವಾದಲ್ಲಿ ಆಸ್ತಿ ಹಕ್ಕಿಗೆ ಚ್ಯುತಿ ಬರದ ರೀತಿಯಲ್ಲಿ ಭೂಮಿಯನ್ನು ಗುತ್ತಿಗೆ ನೀಡಲು ಅನುವು ಮಾಡಿಕೊಡಲು ಮಾದರಿ ಕಾಯ್ದೆಯನ್ನು ರೂಪಿಸಿದ್ದು, ಇದರ ಬಳಕೆ ಮಾಡಿಕೊಳ್ಳುವ ಬಗ್ಗೆಯೂ ಗಂಭೀರವಾಗಿ ಚಿಂತಿಸುವುದು ಈಗ ಅಗತ್ಯವಾಗಿದೆ.

**ಡಾ. ಟಿ. ಹಖ್**
ನೀತಿ ಆಯೋಗದ ಸದಸ್ಯರು ಹಾಗೂ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷರು, ಭಾರತ ಸರ್ಕಾರ

ದೇಶದಲ್ಲಿ ಉಳುಮೆ ಮಾಡದೇ ಬೀಳು ಬಿದ್ದಿರುವ 2.6 ಕೋಟಿ ಹೆಕ್ಟೇರ್ ಭೂಮಿಯನ್ನು ಕೃಷಿಗೆ ಒಳಪಡಿಸಲು ಎಲ್ಲ ರಾಜ್ಯಗಳು **'ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ'** ಜಾರಿಗೊಳಿಸಬೇಕು. ಕೃಷಿಕರು ವಿವಿಧ ಕಾರಣಗಳಿಂದ ಬೇಸಾಯ ಮಾಡುವುದನ್ನು ಬಿಡುವುದರಿಂದ ರೈತರಿಗೆ ಮಾತ್ರವಲ್ಲ, ದೇಶಕ್ಕೂ ನಷ್ಟ. ಬೀಳು ಭೂಮಿಯಲ್ಲಿ ಬೇಸಾಯ ಮಾಡಲು ಆಸಕ್ತ ಗೇಣಿದಾರರಿಗೆ ಅವಕಾಶ **ಮಾಡುವುದೇ 'ಮಾದರಿ ಅಧಿನಿಯಮ'**ದ ಉದ್ದೇಶವಾಗಿದೆ.

ಇದರಿಂದ ಭೂ ಒಡೆಯರು ಮತ್ತು ಗೇಣಿದಾರರು ಇಬ್ಬರಿಗೂ ಅನುಕೂಲವಾಗುವ ಅಂಶಗಳನ್ನು ಅಧಿನಿಯಮ ಒಳಗೊಂಡಿದೆ. ಈ ಅಧಿನಿಯಮವು ಇನ್ನೂ ಚರ್ಚೆಯ ಹಂತದಲ್ಲಿದೆ. ಆದರೆ ಉತ್ತರ ಪ್ರದೇಶ, ಆಂಧ್ರ ಪ್ರದೇಶ, ತೆಲಂಗಾಣ, ಒಡಿಶಾದಲ್ಲಿ ಈ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.





**ಶ್ರೀಮತಿ. ಕವಿತಾ ಕುರುಗಂಟಿ**
ಸಮಾಜ ಕಾರ್ಯಕರ್ತರು ಹಾಗೂ ಆಶಾ-ಕಿಸಾನ್ ಸ್ವರಾಜ್ ಸಂಸ್ಥೆ

ಬೀಳು ಭೂಮಿಗೆ ಭೂ ಗುತ್ತಿಗೆಯು ಕೇವಲ ಒಂದು ಪರಿಹಾರ ಕ್ರಮವಾಗಿ ಮಾತ್ರ ಇರುತ್ತದೆ. ಭೂ ಗುತ್ತಿಗೆಯನ್ನು ಒಂದು ಆಕರ್ಷಕ ಪ್ರಸ್ತಾವವಾಗಿ ಮಾಡಬೇಕೆಂದರೆ ಅದನ್ನು ಕೇವಲ ಕಾನೂನುಬದ್ಧಗೊಳಿಸಿದರೆ ಮಾತ್ರ ಸಾಲದು. ಜೊತೆಗೆ ಇನ್ನೂ ಹಲವು ಅಂಶಗಳನ್ನು ಒಳಪಡಿಸಬೇಕಾಗುತ್ತದೆ. ಭೂ ಗುತ್ತಿಗೆಯ ಮೇಲ್ವಿಚಾರಣೆಗಾಗಿ ಒಂದು ಸಾಂಸ್ಥಿಕ ಚೌಕಟ್ಟನ್ನು ರಚಿಸಬೇಕಾಗುತ್ತದೆ. ಇದಕ್ಕಾಗಿ ಸರ್ಕಾರವು ಕೆಲವು ವಿಶೇಷ ಬಂಡವಾಳ ಮತ್ತು ಪ್ರೋತ್ಸಾಹ ಯೋಜನೆಗಳನ್ನು ರೂಪಿಸಬೇಕು. ಭೂ ಗುತ್ತಿಗೆಯನ್ನು ರೈತರಿಗೆ ಮಾತ್ರ ನೀಡಬೇಕು, **ಗುಂಪು ಕೃಷಿ**ಗೆ ಅದರಲ್ಲೂ **ಮಹಿಳೆಯರ ಗುಂಪಿಗೆ** ವಿಶೇಷ ಆದ್ಯತೆ ನೀಡಬೇಕು.



**ಶ್ರೀ. ಹನುಮನಗೌಡ ಬೆಳಗುರ್ಕಿ**

ಸದಸ್ಯರು, ಕರ್ನಾಟಕ ಕೃಷಿ ಬೆಲೆ ಆಯೋಗ

ಗುತ್ತಿಗೆದಾರರಿಗೆ ನಬಾರ್ಡ್ ಮೂಲಕ ಸಾಲ ಹಾಗೂ ಸೂಕ್ತ ಮಾರುಕಟ್ಟೆ ಸೌಲಭ್ಯಗಳು ದೊರಕುವ ಬಗ್ಗೆ ಖಾತ್ರಿ ಪಡಿಸಬೇಕು. ಜೊತೆಗೆ ಎಲ್ಲಾ ನೀರಾವರಿ ಯೋಜನೆಗಳನ್ನೂ ಒಗ್ಗೂಡಿಸುವಿಕೆ ಹಾಗೂ ಕೃಷಿಭಾಗ್ಯ ಯೋಜನೆಯನ್ನು ರೈತರಿಗೆ ತಲುಪುವಂತೆ ಮಾಡುವುದು ಬೀಳು ಭೂಮಿ ಸಮಸ್ಯೆ ಪರಿಹರಿಸಲು ಇರುವ ದಾರಿಯಾಗಿದೆ.

**ಶ್ರೀ. ಕುರುಬೂರು ಶಾಂತಕುಮಾರ್**

ಅಧ್ಯಕ್ಷರು, ರಾಜ್ಯ ಕಬ್ಬು ಬೆಳೆಗಾರರ ಸಂಘ

ಗುತ್ತಿಗೆದಾರನು ಅವಧಿಗೆ ಮುಂಚೆಯೇ ಬಿಟ್ಟು ಹೋದರೆ ಹಾಗೂ ಅವನು ಭೂಮಿಯ ಮೇಲೆ ಅಥವಾ ಬೆಳೆ ಸಾಲ ತೆಗೆದುಕೊಂಡಿದ್ದರೆ ಅದನ್ನು ತೀರಿಸುವವರು ಯಾರು? ಈ ಬಗ್ಗೆ ವ್ಯಾಜ್ಯ ಉಂಟಾದರೆ ಇತ್ಯರ್ಥಪಡಿಸಲು ತಹಸಿಲ್ದಾರ್‌ರವರಿಗೆ 4 ವಾರಗಳ ಗಡುವು ಕೊಟ್ಟಿದ್ದೀರಿ. ಹಾಗೆಯೇ ಮೇಲ್ಮನವಿಯನ್ನು ಇತ್ಯರ್ಥ ಪಡಿಸಲು ಜಿಲ್ಲಾಧಿಕಾರಿಗಳಿಗೂ ಗಡುವನ್ನು ಕೊಡಬೇಕು. ಕೃಷಿ ಭೂಮಿ ಗೇಣಿ ಕೊಡುವಂತಹ ಮಾದರಿ ಕಾಯ್ದೆ ತಂದ ಕೇಂದ್ರ ಸರ್ಕಾರ ಒಳ್ಳೆ ಕೆಲಸ ಮಾಡುತ್ತಿದೆ. ಆದರೆ, ರೈತರ ಭೀಕರ ಸಮಸ್ಯೆಗಳನ್ನು ಮರೆಮಾಡಬಾರದು. ಮುಂದೆ ಎಲ್ಲಿ ಆಹಾರ ಉತ್ಪಾದನೆ ಕಡಿಮೆಯಾಗಬಹುದೋ ಎಂಬ ಭೀತಿ ಸರ್ಕಾರಕ್ಕಿದೆ. ರೈತನ ಉತ್ಪಾದನೆಗೆ ತಕ್ಕಂತೆ ಬೆಲೆ ಕೊಡುವ ವಿಚಾರಗಳ ಬಗ್ಗೆ ಸರ್ಕಾರ ಚಿಂತನೆ ಮಾಡಿಲ್ಲ.





**ಶ್ರೀ. ಕೆ. ಟಿ. ಗಂಗಾಧರ**

ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ

ಕರ್ನಾಟಕದಲ್ಲಿ ರೈತರು ಭೂಮಿಯನ್ನು ಪಾಳು ಬಿಟ್ಟು ಕೃಷಿಯೇತರ ಚಟುವಟಿಕೆಗಳಿಗೆ ಹೋಗುತ್ತಿರುವುದಕ್ಕೆ ಮೂಲ ಕಾರಣಗಳು ಬೆಲೆ ಕುಸಿತ, ಮಳೆ ನಷ್ಟ, ಸರ್ಕಾರದ ಮಾರುಕಟ್ಟೆ ನೀತಿಗಳು. ಇವುಗಳ ಬಗ್ಗೆ ಮೊದಲು ಗಮನಹರಿಸಬೇಕು. ಬೀಳು ಭೂಮಿಯಲ್ಲಿ ವ್ಯವಸಾಯ ಆಗಬೇಕೆಂಬ ಆಶಯ ಒಳ್ಳೆಯದೇ ಆಗಿದೆ. ಆದರೆ ಈ ಅಧಿನಿಯಮದಲ್ಲಿ ಕೂಲಿಕಾರರ ಸಮಸ್ಯೆ, ಮಣ್ಣಿನ ಫಲವತ್ತತೆ, ಬೆಲೆ ಮತ್ತು ಮಾರುಕಟ್ಟೆಗಳ ಬಗ್ಗೆ ಪ್ರಸ್ತಾಪವಿಲ್ಲ.



**ಶ್ರೀ. ಮಾರುತಿ ಮಾನ್ಪಡೆ**

ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ

ಮೂರು ವರ್ಷ ಉಳುಮೆ ಮಾಡದೇ ಬಿಟ್ಟ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರ ತಹಶಿಲ್ದಾರ್‌ರಿಗೆ ಇಲ್ಲವೇ? ಅಂತಹ ಕಾನೂನನ್ನು ಯಾಕೆ ತರಬಾರದು? ಬೀಳು ಭೂಮಿಯ ಸಮೀಕ್ಷೆ ಮಾಡಿ ದೊಡ್ಡ ಜಮೀನುದಾರರು ಬೀಳು ಬಿಟ್ಟಿದ್ದರೆ ಅವರ ಜಮೀನನ್ನು ಬಡವರಿಗೆ ಹಂಚುತ್ತೀವಿ ಎಂದು ತೀರ್ಮಾನ ಮಾಡಿದರೆ ಅದೊಂದು ಕ್ರಾಂತಿಕಾರಿ ವಿಚಾರವಾಗುತ್ತದೆ. ರಾಜ್ಯದಲ್ಲಿ ಬೇನಾಮಿ ಭೂ ಮಾಲಿಕರ ಹಾವಳಿ ಮಿತಿ ಮೀರಿದೆ. ಇದನ್ನು ಶಾಸನದ ಮೂಲಕ ಹತ್ತಿಕ್ಕಬೇಕಾದ ಕೆಲಸ ಆಗಬೇಕಿದೆ.

**ಶ್ರೀಮತಿ. ಸುನಂದ ಜಯರಾಮ್**

ರೈತ ಮಹಿಳಾ ಮುಖಂಡರು

ಬೆಳೆ ಬೆಳೆಯಲು ನೀರಿಲ್ಲದೆ ರೈತರು ಭೂಮಿಯನ್ನು ಬರಡು ಬಿಟ್ಟಿದ್ದಾರೆ. ಗೇಣಿಯನ್ನು ಕಾನೂನುಬದ್ಧಗೊಳಿಸಿ ಮತ್ತೊಬ್ಬ ರೈತರಿಗೆ ನೀಡಿದರೆ ಬರಡು ಭೂಮಿಯಲ್ಲಿ ಅವರು ಏನು ಉಳುಮೆ ಮಾಡುತ್ತಾರೆ? ಉಳುಮೆ ಮಾಡಲು ಅನುಕೂಲ ಮಾಡಿಕೊಟ್ಟರೆ ಮಹಿಳೆಯರಿಗೇ ಬೀಳು ಭೂಮಿ ಕೊಡಿ.





**ಶ್ರೀ. ಕೋಡಿಹಳ್ಳಿ ಚಂದ್ರಶೇಖರ್**

ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ

ಸದ್ಯದಲ್ಲಿ ಬೀಳು ಬಿಡಲಾಗಿರುವ 21 ಲಕ್ಷ ಹೆಕ್ಟೇರ್ ಭೂಮಿಯನ್ನು ಅದರ ಫಲವತ್ತತೆಯ ಆಧಾರದ ಮೇರೆಗೆ ವರ್ಗೀಕರಣ ಮಾಡಿ ಯಾವ ರೀತಿ ಇವುಗಳಿಗೆ ಸಹಾಯಧನ ನೀಡಬಹುದು ಎಂದು ನಿರ್ಧರಿಸಬೇಕು. ಪ್ರತಿ ತಾಲ್ಲೂಕಿನಲ್ಲಿ 500-1000 ಹೆಕ್ಟೇರ್ ಭೂಮಿಯಲ್ಲಿ ಸೌರಶಕ್ತಿಯನ್ನು ಉತ್ಪಾದಿಸುವ ಯೋಜನೆಯಲ್ಲಿ ಟಾಟಾ, ಅಂಬಾನಿಗಳು ಭಾಗವಹಿಸಿದ್ದಾರೆ. ಈ ಬೀಳು ಭೂಮಿಯನ್ನು ಕೈಗಾರಿಕಾ ವಲಯವನ್ನಾಗಿ ಮಾರ್ಪಡಿಸುವುದಿಲ್ಲ ಎಂಬ ನಂಬಿಕೆಯನ್ನು ಹೇಗೆ ಇಟ್ಟುಕೊಳ್ಳುವುದು?

**ಶ್ರೀ. ಎ. ಎಸ್. ಚಂದ್ರಶೇಖರಯ್ಯ**

ತುಮಕೂರು ಸಾವಯವ ಕೃಷಿಕರ ಸಂಘಗಳ ಒಕ್ಕೂಟದ ಉಪಾಧ್ಯಕ್ಷರು

ಕೃಷಿಯೇ ದುಬಾರಿಯಾಗಿದೆ. ಅದರ ಹೊಡೆತವನ್ನು ತಾಳಲಾರದೆ ಕೃಷಿಯಿಂದ ತಪ್ಪಿಸಿಕೊಂಡು ಹೋಗುತ್ತಿರುವ ರೈತರ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಬೀಳು ಭೂಮಿಯನ್ನು ಆಹಾರ ಉತ್ಪತ್ತಿಗೆ ತೊಡಗಿಸುವುದೇ ಆದರೆ ನೀರು, ವಿದ್ಯುತ್ ಮತ್ತು ಸಹಾಯಧನ ನೀಡಬೇಕು. ಸೌರಶಕ್ತಿ ಉತ್ಪಾದನೆಗೆ ಪ್ರತಿ ತಾಲ್ಲೂಕಿನಲ್ಲಿ ನೂರರಿಂದ ಐನೂರು ಎಕರೆ ಬೀಳು ಭೂಮಿಯನ್ನು ಬಳಸಬಹುದು.



**ಶ್ರೀ. ವಿಶ್ವನಾಥ್ ಅಣೇಕಟ್ಟೆ**
ತೆಂಗು ಬೆಳೆಗಾರರ ಸಂಘ

ಬೀಳು ಭೂಮಿಯನ್ನು ಸದ್ಬಳಕೆ ಮಾಡಬೇಕು ಎನ್ನುವ ವಿಚಾರ ಒಳ್ಳೆಯದೆ. ಆದರೆ ಅಷ್ಟು ಮಟ್ಟಿನ ಭೂಮಿ ಯಾಕೆ ಬೀಳು ಬಿದ್ದಿದೆ ಎಂಬ ಪ್ರಶ್ನೆಗೆ ಪರಿಹಾರ ಸೂಚಿಸಿದರೆ ಆ ಚಿಂತೆ ದೂರವಾಗುತ್ತದೆ. ಗುತ್ತಿಗೆ ಅವಧಿಯಲ್ಲಿ ಯಾವ ಬೆಳೆ ಹಾಕಬೇಕು ಎಂಬುದನ್ನು ಭೂ ಮಾಲಿಕರ ಬಳಿ ಗುತ್ತಿಗೆದಾರರು ಚರ್ಚಿಸುವುದು ಸೂಕ್ತವಾಗಿರುತ್ತದೆ. ಜೊತೆಗೆ ಭೂಮಿಯನ್ನು ಕಾರ್ಪೋರೇಟ್ ವಲಯಗಳಿಗೆ ಗುತ್ತಿಗೆ ನೀಡಬಾರದು. ಕೇವಲ ರೈತ ಉತ್ಪಾದಕ ಸಂಘಟನೆಗಳಿಗೆ ನೀಡುವುದು ಸೂಕ್ತ.





**ಶ್ರೀ. ಎಲ್. ನಾರಾಯಣ ರೆಡ್ಡಿ**
ಕೃಷಿಕರು, ಖ್ಯಾತ ಸಾವಯವ ಕೃಷಿಕರು

ಸಾವಯವ ಕೃಷಿಯು ರೈತರನ್ನು ಎಂದಿಗೂ ಕೈಬಿಡುವುದಿಲ್ಲ. ಅಂತಹ ರೈತರು ಕೃಷಿಯಿಂದ ಎಂದೂ ವಿಮುಖವಾಗುವುದಿಲ್ಲ. ಬೀಳು ಭೂಮಿಗಳಲ್ಲಿ ಅರಣ್ಯೀಕರಣ ಮಾಡುವುದು ಸೂಕ್ತ. ಅದರಲ್ಲೂ ಹೆಬ್ಬೇವು ಒಂದು ಉತ್ತಮ ಪರ್ಯಾಯವಾಗಿದೆ.

**ಶ್ರೀ. ಸಚಿನ್ ಮೀಗಾ**
ಅಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಿಸಾನ್ ಘಟಕ

ಕೃಷಿ ಇಲಾಖೆಯು ಜಾರಿಗೊಳಿಸುತ್ತಿರುವ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಗೆ ಜೀವವಿಮೆ, ಅಪಘಾತ ವಿಮೆ ಮುಂತಾದವುಗಳ ರೀತಿಯಲ್ಲಿ ತಿದ್ದುಪಡಿ ಮಾಡಬೇಕು. ಜೊತೆಗೆ ವಿವಿಧ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಆಯಾ ರಾಜ್ಯಗಳೇ ಘೋಷಣೆ ಮಾಡುವುದು ಸೂಕ್ತ. ಆಗ ಮಾತ್ರ ಭೂಮಿಯನ್ನು ಬೀಳು ಬಿಡುವಿಕೆ ಕಡಿಮೆಯಾಗಿ, ಅದರ ಸದ್ಬಳಕೆಯಾಗಲಿದೆ.





**ಡಾ. ಪ್ರತಾಪ್ ಕುಮಾರ್ ಹೆಗಡೆ**
ಟೆಲಿಮ್ಯಾಟಿಕ್ಸ್ 4ಯು ಸರ್ವಿಸ್ ಪ್ರೈ. ಲಿಮಿಟೆಡ್, ಬೆಂಗಳೂರು

ಹೆದ್ದಾರಿ ಅಕ್ಕಪಕ್ಕದ ಬೀಳು ಭೂಮಿಗಳಲ್ಲಿ ದೊಡ್ಡ ದೊಡ್ಡ ಕಂಪನಿಗಳ ಜಾಹೀರಾತು ಫಲಕ ಅಳವಡಿಸಿದಲ್ಲಿ ರೈತರಿಗೆ ಸ್ಥಿರವಾದ ಆದಾಯ ಸಿಗಲಿದೆ.

**ಡಾ. ಅಮೃತಾ ಜೋಶಿ**
ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು

ಬೀಳು ಬಿಡುವುದನ್ನು ತಪ್ಪಿಸಲು ಗುಂಪು ಕೃಷಿಯನ್ನು ಮಾಡುವುದು, ಗಾಳಿ ಯಂತ್ರಗಳನ್ನು ಅಳವಡಿಸಿಕೊಳ್ಳುವುದು ಮುಂತಾದವುಗಳನ್ನು ಪರಿಗಣಿಸಬಹುದಾಗಿದೆ. ಅಮೇರಿಕಾದಂತಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಭೂಮಿಯನ್ನು ಬೀಳು ಬಿಟ್ಟರೆ, ಅದರಲ್ಲಿ **ಇಂಗಾಲ ಸ್ಥಿರೀಕರಿಸಿ, ಪರಿಹಾರ ಕೊಡುವ ವ್ಯವಸ್ಥೆ** ಇದೆ. ಇದನ್ನು ಕರ್ನಾಟಕದಲ್ಲೂ ಪರಿಶೀಲಿಸಬಹುದು.





**ಡಾ.ಎಂ.ಕೆ. ರಮೇಶ್**
ಪ್ರಾಧ್ಯಾಪಕರು, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು

ಕೇಂದ್ರ ಸರ್ಕಾರವು ಹೊರತಂದಿರುವ ಭೂಗುತ್ತಿಗೆ ಮಾದರಿ ಅಧಿನಿಯಮವು ಕರ್ನಾಟಕ ರಾಜ್ಯ ಜಾರಿಗೊಳಿಸಿರುವ **ಭೂ ಸುಧಾರಣೆ ಕಾಯಿದೆ** ಮೇಲೆ ಏನು ಪರಿಣಾಮ ಬೀರಲಿದೆ ಎಂಬುದರ ಸಮಗ್ರ ವಿಶ್ಲೇಷಣೆ ಅಗತ್ಯ.

**ಡಾ. ಗೋಪಾಲ ನಾಯಕ್**
ಪ್ರಾಧ್ಯಾಪಕರು, ಭಾರತೀಯ ನಿರ್ವಹಣಾ ಸಂಸ್ಥೆ, ಬೆಂಗಳೂರು

ಈ ಅಧಿನಿಯಮದ ಮೂಲಕ ಗುತ್ತಿಗೆದಾರರಿಗೆ ಬೆಳೆ ವಿಮೆ ಯೋಜನೆ ಸೌಲಭ್ಯ ಸಿಗುವಂತಾಗಬೇಕು. ಭೂ ಮಾಲಿಕರು ಗುತ್ತಿಗೆದಾರರು ಪಡೆಯುವ ಸಾಲದ ಬಗ್ಗೆ ಪೂರ್ಣ ತಿಳುವಳಿಕೆ ಹೊಂದಿರಬೇಕು. ಕೃಷಿಯು ಆಸಕ್ತಿ ಕಳೆದುಕೊಳ್ಳುತ್ತಿರುವ ಕ್ಷೇತ್ರವಾಗಿರುವುದರಿಂದ **ಭೂ ಗುತ್ತಿಗೆಯನ್ನು** ಕೇವಲ ಸಣ್ಣ ರೈತರು ಅಥವಾ ಭೂರಹಿತ ಕಾರ್ಮಿಕರಿಗೆ ಮಿತಿಗೊಳಿಸುವ ಬದಲು **ಬೇರೆಯವರಿಗೂ ಕೊಡುವ ಅವಕಾಶಗಳಿರಬೇಕು**. ಪ್ರಸ್ತುತದಲ್ಲಿ ಭೂ ದಾಖಲೆಗಳು ಉತ್ತಮಮಟ್ಟದಲ್ಲಿಲ್ಲ. ಇದನ್ನು ಸುಧಾರಿಸುವುದು ಹೇಗೆ ಮತ್ತು ಭೂ ವಿಚ್ಛಿದ್ರೀಕರಣವನ್ನು ತಡೆಯುವುದು ಹೇಗೆ ಎಂಬುದನ್ನು ನಾವು ಚಿಂತಿಸಬೇಕಾಗುತ್ತದೆ.





**ಶ್ರೀ. ಟಿ. ಎಂ. ವಿಜಯ ಭಾಸ್ಕರ್, ಭಾ.ಆ.ಸೇ.**
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ

ಗುಂಪು ಕೃಷಿಯು ಕಮ್ಯುನಿಸ್ಟ್ ರಾಷ್ಟ್ರಗಳಾದ ರಷ್ಯಾ ಮತ್ತು ಚೈನಾ ದೇಶಗಳಲ್ಲಿ ಹೇಳುವಷ್ಟು ಸಫಲವಾಗಿರುವುದಿಲ್ಲ. ಹಾಗೆಯೇ **ಒಪ್ಪಂದ ಕೃಷಿಯ** ಬಗ್ಗೆಯೂ ಈ ನಿಟ್ಟಿನಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. **ಸಾಮಾಜಿಕ ಅರಣ್ಯೀಕರಣಕ್ಕೆ** ಗುತ್ತಿಗೆ ನೀಡಲು ಸಾಧ್ಯವೇ ಎಂಬುದನ್ನು ಮತ್ತು ಬೀಳು ಭೂಮಿಯನ್ನು ಎಷ್ಟರ ಮಟ್ಟಿಗೆ ಗೋಮಾಳಗಳನ್ನಾಗಿ ಅಭಿವೃದ್ಧಿ ಪಡಿಸುವುದು ಸಾಧ್ಯ ಎಂಬುದನ್ನೂ ಸಹ ಪರಿಶೀಲಿಸಬೇಕಾಗಿದೆ.

**ಶ್ರೀ. ಜಿ. ಸತೀಶ್, ಭಾ.ಅ.ಸೇ.**
ಕೃಷಿ ಆಯುಕ್ತರು, ಕರ್ನಾಟಕ ಸರ್ಕಾರ

ಇಷ್ಟೊಂದು ರೈತರು ಹಾಗೂ ರೈತ ಮುಖಂಡರ, ತಜ್ಞರ ಅಭಿಪ್ರಾಯಗಳನ್ನು ಒಟ್ಟಿಗೆ ಪಡೆದಿದ್ದಕ್ಕೆ ಕೃಷಿ ಬೆಲೆ ಆಯೋಗವನ್ನು ಅಭಿನಂದಿಸಬೇಕು. ಬೀಳು ಭೂಮಿಯ ಸದ್ಬಳಕೆ ಮತ್ತು ಗುತ್ತಿಗೆ ಕೃಷಿಯ ಬಗ್ಗೆ ಇನ್ನೂ ಆಳವಾಗಿ ಪರಿಶೀಲಿಸುವುದು ಸೂಕ್ತ. ಗುತ್ತಿಗೆ ಕೃಷಿಯನ್ನು ಅನುಷ್ಠಾನಕ್ಕೆ ತಂದಲ್ಲಿ, **ಕೇಂದ್ರದಿಂದ ಪ್ರೋತ್ಸಾಹ**ವೇನಾದರೂ ಸಿಗಲಿದೆಯೇ ಎಂಬುದನ್ನು ಪರಿಶೀಲಿಸಬೇಕು.



**ದಿನಾಂಕ 02-03-2017 ರಂದು ಪೂರ್ವಾಹ್ನ 11.00 ಗಂಟೆಗೆ ಬೆಂಗಳೂರಿನ ಕೃಷಿ ಇಲಾಖೆ ಆವರಣದ ಸಮೃದ್ಧಿ ಸಭಾಂಗಣದಲ್ಲಿ ನಡೆದ ಕರ್ನಾಟಕ ಕೃಷಿ ಬೆಲೆ ಆಯೋಗದ "ರಾಜ್ಯದ ಬೀಳು ಭೂಮಿ ಸದ್ಬಳಕೆ" ಕುರಿತ ಒಂದು ದಿನದ ಕಾರ್ಯಾಗಾರಕ್ಕೆ ಹಾಜರಿದ್ದವರ ಪಟ್ಟಿ:**

1. ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ, ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು.
2. ಶ್ರೀ. ಹನುಮನಗೌಡ ಬೆಳಗುರ್ಕಿ, ಸದಸ್ಯರು ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು.
3. ಶ್ರೀ. ಟಿ. ಎಂ. ವಿಜಯ ಭಾಸ್ಕರ್, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು.
4. ಶ್ರೀ. ಎಂ. ಮಹೇಶ್ವರ್ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
5. ಡಾ. ಟಿ. ಹಖ್, ನೀತಿ ಆಯೋಗದ ಸದಸ್ಯರು ಹಾಗೂ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷರು, ಭಾರತ ಸರ್ಕಾರ, ನವದೆಹಲಿ.
6. ಶ್ರೀ. ಡಿ. ಎಸ್. ರಘು, ಮಾಜಿ ಸದಸ್ಯರು, ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷರು, ಭಾರತ ಸರ್ಕಾರ, ನವದೆಹಲಿ.
7. ಶ್ರೀ. ಜಿ. ಸತೀಶ್, ಭಾ.ಅ.ಸೇ, ಕೃಷಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು.
8. ಶ್ರೀ. ಬಿ. ವೈ. ಶ್ರೀನಿವಾಸ್, ಕೃಷಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ, ಬೆಂಗಳೂರು.
9. ಡಾ. ಎಂ. ಜಿ. ಚಂದ್ರಕಾಂತ್, ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ನಾಗರಬಾವಿ, ಬೆಂಗಳೂರು.
10. ಡಾ. ಎಂ. ಕೆ. ರಮೇಶ್, ಪ್ರಾಧ್ಯಾಪಕರು, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು.
11. ಶ್ರೀಮತಿ. ವೀಣಾ ನೂಪುರ, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು.
12. ಶ್ರೀ. ದಿವ್ಯೇಶ್ ಪ್ರತಾಪ್, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು.
13. ಡಾ. ವಿ. ರಾಮಸ್ವಾಮಿ, ಸಂಶೋಧನಾ ಅಧಿಕಾರಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು.
14. ಡಾ. ಎನ್. ವಿ. ಕಮಲ, ಉಪ ಕೃಷಿ ನಿರ್ದೇಶಕರು, ಕೃಷಿ ಬೆಲೆ ಆಯೋಗ, ಬೆಂಗಳೂರು.
15. ಡಾ. ವೈ. ಎಸ್. ರಮೇಶ್, ಸಹ ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ ಹಾಗೂ ಮುಖ್ಯಸ್ಥರು ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ, ಶಿವಮೊಗ್ಗ.
16. ಡಾ. ವಿಲಾಸ್ ಕುಲಕರ್ಣಿ, ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ ಹಾಗೂ ಮುಖ್ಯಸ್ಥರು ಭೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ.
17. ಡಾ. ಎಂ. ಜಿ. ಕೆರುಟಗಿ, ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ ಮತ್ತು ಮುಖ್ಯಸ್ಥರು, ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ, ತೋಟಗಾರಿಕಾ ವಿಶ್ವವಿದ್ಯಾನಿಲಯ, ಬಾಗಲಕೋಟೆ.
18. ಡಾ. ಅಮೃತ. ಟಿ. ಜೋಶಿ, ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ ಹಾಗೂ ಮುಖ್ಯಸ್ಥರು ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು.
19. ಡಾ. ಸಿ. ಪಿ. ಗ್ರೇಸಿ, ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ ಹಾಗೂ ಮುಖ್ಯಸ್ಥರು ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
20. ಶ್ರೀ. ಬಾಲರಾಜು, ಜಂಟಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
21. ಶ್ರೀಮತಿ. ಎಸ್. ವಿ. ಭಾಗ್ಯಲಕ್ಷ್ಮಿ, ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ, ಬೆಂಗಳೂರು.
22. ಶ್ರೀ. ಪಿ. ರಾಜಶೇಖರ್, ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ, ಬೆಂಗಳೂರು.
23. ಡಾ. ಗೋಪಾಲ ನಾಯಕ್, ಪಾಧ್ಯಾಪಕರು, ಭಾರತೀಯ ವ್ಯವಹಾರ ನಿರ್ವಾಹಣಾ ಸಂಸ್ಥೆ, ಬೆಂಗಳೂರು.
24. ಶ್ರೀಮತಿ. ಕವಿತಾ ಕುರುಗಂಟಿ, ಸಮಾಜ ಕಾರ್ಯಕರ್ತರು ಹಾಗೂ ಆಶಾ-ಕಿಸಾನ್ ಸ್ವರಾಜ್ ಸಂಸ್ಥೆ, ಬೆಂಗಳೂರು.
25. ಶ್ರೀ. ಮಾರುತಿ ಮಾನ್ಪಡೆ, ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ, ಬೆಂಗಳೂರು.
26. ಶ್ರೀ. ಕುರುಬೂರು ಶಾಂತಕುಮಾರ್, ಅಧ್ಯಕ್ಷರು, ರಾಜ್ಯ ಕಬ್ಬು ಬೆಳೆಗಾರರ ಸಂಘ, ಮೈಸೂರು.
27. ಶ್ರೀ. ಕೋಡಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ಬೆಂಗಳೂರು.
28. ಶ್ರೀ. ಅತ್ತಹಳ್ಳಿ ದೇವರಾಜ್, ರಾಜ್ಯ ಸಂಘಟನಾ ಕಾರ್ಯದರ್ಶಿ, ಕಬ್ಬು ಬೆಳೆಗಾರರ ಸಂಘ, ಮೈಸೂರು.

29. ಶ್ರೀ. ಪಿ. ಎಸ್. ಪುಟ್ಟಸ್ವಾಮಿ ಗೌಡ, ಭಾರತೀಯ ಕಿಸಾನ್ ಸಂಘ, ಬೆಂಗಳೂರು.
30. ಶ್ರೀ. ಎಲ್. ನಾರಾಯಣ ರೆಡ್ಡಿ, ಕೃಷಿಕರು, ಶ್ರೀನಿವಾಸಪುರ, ದೊಡ್ಡಬಳ್ಳಾಪುರ ತಾ., ಬೆಂಗಳೂರು ಜಿಲ್ಲೆ.
31. ಶ್ರೀ. ಬಾಪು ಹೆದ್ದೂರ್ ಶೆಟ್ಟಿ, ಪ್ರಗತಿಪರ ಚಿಂತಕರು ಹಾಗೂ ವಕೀಲರು, ಬೆಂಗಳೂರು.
32. ಶ್ರೀ. ಕೆ. ಟಿ. ಗಂಗಾಧರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ಬೆಂಗಳೂರು.
33. ಶ್ರೀ. ಕೆ. ಬೋರಯ್ಯ, ಕರ್ನಾಟಕ ರಾಜ್ಯ ರೈತ ಸಂಘ, ಮಂಡ್ಯ.
34. ಶ್ರೀ. ಎ. ಎಸ್. ಚಂದ್ರ ಶೇಖರಯ್ಯ, ತುಮಕೂರು ಸಾವಯವ ಕೃಷಿಕರ ಸಂಘಗಳ ಒಕ್ಕೂಟದ ಉಪಾಧ್ಯಕ್ಷರು, ತುಮಕೂರು.
35. ಶ್ರೀ. ಕೆ. ಎನ್. ಮಹೇಂದ್ರ, ಕರೆ ಕ್ಯಾತನಹಳ್ಳಿ, ಸಿರಾ ತಾ. ತುಮಕೂರು.
36. ಶ್ರೀ. ವಿ. ಶಿವಣ್ಣ, ಸಂಘಟನಾ ಕಾರ್ಯದರ್ಶಿ, ರಾಷ್ಟ್ರೀಯ ಕಿಸಾನ್ ಸಂಘ, ಬೆಂಗಳೂರು.
37. ಶ್ರೀ. ಭೀಮಯ್ಯ, ಉಪಾಧ್ಯಕ್ಷರು, ರಾಷ್ಟ್ರೀಯ ಕಿಸಾನ್ ಸಂಘಟನೆ, ತುಮಕೂರು.
38. ಶ್ರೀಮತಿ. ಸುನಂದ ಜಯರಾಮ್, ಕರ್ನಾಟಕ ರಾಜ್ಯ ರೈತ ಸಂಘಟನಾ ಮಹಿಳಾ ಮುಖಂಡರು, ಗೆಜ್ಜಲಗೆರೆ, ಮದ್ದೂರ್ ತಾ. ಮಂಡ್ಯ.
39. ಶ್ರೀ. ವಿಶ್ವನಾಥ್ ಅಣೇಕಟ್ಟೆ, ತೆಂಗು ಬೆಳೆಗಾರರ ಸಂಘ, ನವಿಲೇ ಅಂಚೆ, ಚಿಕ್ಕನಾಯಕನಹಳ್ಳಿ, ತುಮಕೂರು.
40. ಡಾ. ಹೆಚ್. ಕೆ. ಮಂಜುನಾಥ್, ಲ್ಯಾಂಡೇಸಾ ಸಂಸ್ಥೆ, ಬೆಂಗಳೂರು.
41. ಡಾ. ಎಸ್. ಟಿ. ಲೋಕೇಶ್, ರಾಜ್ಯ ನಿರ್ದೇಶಕರು, ಲ್ಯಾಂಡೇಸಾ ಸಂಸ್ಥೆ, ಬೆಂಗಳೂರು.
42. ಶ್ರೀ. ಹರೀಶ್, ವ್ಯವಸ್ಥಾಪಕರು, ಯುನಿವರ್ಸಲ್ ವಿಮಾ ಸಂಸ್ಥೆ, ಬೆಂಗಳೂರು.
43. ಶ್ರೀ. ಶ್ರೇಯಸ್, ಹಿರಿಯ ವ್ಯವಸ್ಥಾಪಕರು, ಯುನಿವರ್ಸಲ್ ವಿಮಾ ಸಂಸ್ಥೆ, ಬೆಂಗಳೂರು.
44. ಶ್ರೀ. ಪ್ರತಾಪ್ ಹೆಗ್ಡೆ, ಸಾವಯವ ಕೃಷಿಕರು, ಟೆಲಿಮ್ಯಾಟಿಕ್ಸ್ 4ಯು, ಬೆಂಗಳೂರು.
45. ಶ್ರೀ. ಸಚಿನ್ ಮೀಗಾ, ಅಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಿಸಾನ್ ಘಟಕ, ಚಿಕ್ಕಮಗಳೂರು.
46. ಶ್ರೀ. ಮಧುಸೂಧನ ಹೆಗ್ಡೆ, ಪ್ರಗತಿಪರ ರೈತರು, ಸಿದ್ದಾಪುರ ತಾ., ಉತ್ತರ ಕನ್ನಡ ಜಿಲ್ಲೆ.
47. ಶ್ರೀ. ಎ.ಜಿ. ಭರತ್, ಪರಿಶ್ರಮ ಪ್ಲಾಂಟೇಶನ್ಸ್, ಕೊಪ್ಪ ತಾ. ಚಿಕ್ಕಮಗಳೂರು ಜಿಲ್ಲೆ.
48. ಶ್ರೀ.ಸುಗೂರಯ್ಯ, ಆರ್. ಎಸ್. ಮಠದ ಅಧ್ಯಕ್ಷರು, ರಾಯಚೂರು.
49. ಶ್ರೀ. ಬಸವರಾಜ್, ಹರ್ದಿನಾಳ್, ಸಿಂಧನೂರು, ರಾಯಚೂರು.
50. ಶ್ರೀ. ಎನ್. ಎ. ನಾಗರಾಜ್, ಅಂಕೋಲಾ, ಉತ್ತರ ಕನ್ನಡ.
51. ಶ್ರೀ. ಹೆಚ್. ಎಸ್. ಧರಣೇಶಪ್ಪ, ಹೊಳಲ್‌ಕೆರೆ, ಚಿತ್ರದುರ್ಗ ಜಿಲ್ಲೆ.
52. ಶ್ರೀ. ಜಿ. ಕೆ. ನಾಗರಾಜ, ರಾಜ್ಯ ಹಸಿರು ಸೇನೆ ಸಂಚಾಲಕರು, ಚಿತ್ರದುರ್ಗ.
53. ಶ್ರೀ. ವಿ. ಬಸವನಗೌಡ, ಪ್ರಗತಿಪರ ರೈತರು, ಚಿತ್ರರ್ದುಗ.
54. ಶ್ರೀ. ಸಿ. ನಾಯಕ, ಹಿರೇಕೆರೂರು, ಧಾರವಾಡ
55. ಶ್ರೀ. ಪಿ.ಕೆ. ದೇವರಾಜ್, ಹೊಳಳ್‌ಕೆರೆ, ಚಿತ್ರದುರ್ಗ.
56. ಶ್ರೀ. ಟಿ. ಎಸ್. ಜಯಪ್ರಕಾಶ ನಾರಾಯಣ, ಪತ್ರಕರ್ತರು, ವಿಜಯ ಕರ್ನಾಟಕ, ಬೆಂಗಳೂರು.
57. ಶ್ರೀ. ಕೆ. ಎಸ್. ರಘುರಾಮ್, ಅಣೇಕಟ್ಟೆ ಗ್ರಾಮ, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ.
58. ಶ್ರೀ. ಸಿ. ಜಿ. ಅಶೋಕ, ಚಿಕ್ಕಬಾಣಾವರ ಅಂಚೆ, ಚಿತ್ರದುರ್ಗ ತಾ. ಮತ್ತು ಜಿಲ್ಲೆ.
59. ಕೆ. ಜೆ. ಪರಮೇಶ್ವರಪ್ಪ, ತಾಂತ್ರಿಕ ಸಲಹೆಗಾರರು, ಕೃಷಿ ಬೆಲೆ ಆಯೋಗ, ಬೆಂಗಳೂರು.
60. ಡಾ. ಕೆ. ಎಸ್. ಜನಾರ್ಧನ, ತಾಂತ್ರಿಕ ಸಲಹೆಗಾರರು, ಕೃಷಿ ಬೆಲೆ ಆಯೋಗ, ಬೆಂಗಳೂರು.
61. ಕು. ಕೆ. ಟಿ. ಪ್ರಿಯಾಂಕ, ಹಿರಿಯ ಸಂಶೋಧನಾ ಸಹವರ್ತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
62. ಶ್ರೀ. ಎಂ. ಬಿ. ಶ್ರೀಕಾಂತ್, ಹಿರಿಯ ಸಂಶೋಧನಾ ಸಹವರ್ತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
63. ಶ್ರೀ. ಹೆಚ್. ಎಸ್. ಹರ್ಷನ್, ಸಂಶೋಧನಾ ಸಹಾಯಕರು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು.
64. ಕು. ಎಸ್. ಸವಿತ, ಸಂಶೋಧನಾ ಸಹಾಯಕರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ.

# V. ತಜ್ಞರ ಅಭಿಪ್ರಾಯ

ರಾಜ್ಯದಲ್ಲಿ ಕೃಷಿ ಬೀಳು ಭೂಮಿ ಸಮಸ್ಯೆಗೆ ಪರಿಹಾರವಾಗಿ ಕೇಂದ್ರ ಸರ್ಕಾರದ ನೀತಿ (NITI) ಆಯೋಗವು ಹೊರತಂದಿರುವ **ಕೃಷಿ ಭೂಮಿ ಗುತ್ತಿಗೆ ಮಾದರಿ ಕಾಯಿದೆ – 2016 ರ (ಅನುಬಂಧ-6)** (http://www.prsindia.org/parliamenttrack/report-summaries/model-agricultural-land-leasing-act-2016-4270/ AND http://niti.gov.in/content/report-expert-committee-land-leasing) ಸಾಧ್ಯಾಸಾಧ್ಯತೆಗಳನ್ನು ಸಮಗ್ರವಾಗಿ ಪರಿಶೀಲಿಸಲು ಬೆಲೆ ಆಯೋಗವು ನಿರ್ಧರಿಸಿರುತ್ತದೆ.

ಈ ನಿಟ್ಟಿನಲ್ಲಿ ಶ್ರೀ ಹನುಮನಗೌಡರ ನೇತೃತ್ವದಲ್ಲಿ ಒಂದು **ತಜ್ಞರ ಸಮಿತಿ** ರಚಿಸಲಾಗಿರುತ್ತದೆ. ಈ ಸಮಿತಿಯಲ್ಲಿ ಶ್ರೀ. ಬಾಪು ಹೆದ್ದೂರ್ ಶೆಟ್ಟಿ, ಶ್ರೀಮತಿ ಕವಿತಾ ಕುರುಗಂಟಿ, ಡಾ. ಕೆ.ಜೆ. ಪರಮೇಶ್ವರಪ್ಪ, ಶ್ರೀ. ರುದ್ರಪ್ಪ ಇವರುಗಳು ಸದಸ್ಯರಾಗಿದ್ದು, ಶ್ರೀಮತಿ ಡಾ. ಎನ್. ವಿ. ಕಮಲ, ಉಪ ಕೃಷಿ ನಿರ್ದೇಶಕರು, ಕೃಷಿ ಬೆಲೆ ಆಯೋಗರವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಈ ಸಮಿತಿಯು ದಿನಾಂಕ: 01.03.2017 ರಂದು ಪ್ರಥಮ ಸಭೆ ಸೇರಿದ್ದು, ಖ್ಯಾತ ಆರ್ಥಿಕ ತಜ್ಞರಾಗಿರುವ ಡಾ. ನರೇಂದ್ರ ಪಾಣಿ ಹಾಗೂ ಹಣಕಾಸು ವ್ಯವಹಾರ ಸಲಹೆಗಾರರಾಗಿರುವ ಶ್ರೀ.ಜಿ.ವಿ. ಸುಂದರ್ ರವರನ್ನು ವಿಶೇಷ ಆಹ್ವಾನಿತರಾಗಿ ತೊಡಗಿಸಿಕೊಳ್ಳಲಾಯಿತು. ಈ ಸಮಿತಿಯ ಕಾರ್ಯ ಕಲಾಪಗಳನ್ನು ಸಂಯೋಜಿಸಿ ದಿನಾಂಕ: 02.03.2017 ರಂದು ರೈತರೊಡನೆ ನಡೆದ ಸಮಾಲೋಚನೆ ಸಭೆಯಲ್ಲಿನ ಅಭಿಪ್ರಾಯ, ಚರ್ಚೆ, ನಿರ್ಣಯಗಳನ್ನು ಕ್ರೋಢೀಕರಿಸುವ ಜವಾಬ್ದಾರಿಯನ್ನು **ಶ್ರೀಮತಿ ಕವಿತಾ ಕುರುಗಂಟಿ** ವಹಿಸಿರುತ್ತಾರೆ. ತಜ್ಞರ ಅಭಿಪ್ರಾಯದ ಸಾರಾಂಶ ಕೆಳಗೆ ಕೊಡಲಾಗಿದೆ.

1. ಭೂ ಗುತ್ತಿಗೆಯನ್ನು ಕೇವಲ **ರೈತರಿಗಾಗಿ ಮತ್ತು ಕೃಷಿ ಹಾಗೂ ಸಂಬಂಧಿತ ಚಟುವಟಿಕೆಗಳಿಗಾಗಿ ಮಾತ್ರ** ಕಾನೂನು ಬದ್ಧವಾಗಿ ಸೀಮಿತಗೊಳಿಸಬೇಕು. ಇದಕ್ಕಾಗಿ "ರೈತ" ಹಾಗೂ "ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು" ಎಂಬ ಪದಗಳಿಗೆ ಕರಾರುವಾಕ್ಕಾದ ವಿವರಣೆ ನೀಡಬೇಕಾಗುತ್ತದೆ.

2. ಕೇಂದ್ರದ ಭೂ ಗುತ್ತಿಗೆ ಮಾದರಿ ಅಧಿನಿಯಮವು ಭೂ ಮಾಲಿಕರ ಹಿತಾಸಕ್ತಿಗಳನ್ನು ಕಾಪಾಡಲು ಶಕ್ತವಾಗಿರಬೇಕು. ಅಂದರೆ ಮೊದಲೇ ವಿಧಿಸಿಕೊಂಡ ನಿರ್ದಿಷ್ಟ ಷರತ್ತು ಮತ್ತು ನಿರ್ಬಂಧನೆಗಳ ಪ್ರಕಾರ, ಗುತ್ತಿಗೆ ಅವಧಿಯು ಮುಗಿದ ನಂತರ ಅಥವಾ ಪರಸ್ಪರ ಒಪ್ಪಿಗೆಗೆ ಅನುಸಾರವಾಗಿ ಅವಧಿಗೆ ಮೊದಲೇ ಗುತ್ತಿಗೆ ಭೂಮಿಯನ್ನು ಪೂರ್ಣವಾಗಿ ಭೂ ಮಾಲಿಕರಿಗೆ ಮರಳಿಸುವ ಸಾಮರ್ಥ್ಯವು ಅಧಿನಿಯಮಕ್ಕಿರಬೇಕು. ಜೊತೆಗೆ ಗುತ್ತಿಗೆ **ಸಾಗುವಳಿದಾರನಿಗೂ ಸಹ ಆತನ/ಆಕೆಯ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು ಫಲಪ್ರದವಾಗುವ ನಿಟ್ಟಿನಲ್ಲಿ ಪೂರ್ಣ ಬೆಂಬಲವನ್ನು ಅಧಿನಿಯಮವು ನೀಡಬೇಕು.**

3. ಹೊಸ ಅಧಿನಿಯಮದಲ್ಲಿ ಬೀಳು ಭೂಮಿಯನ್ನು ಗುತ್ತಿಗೆಗೆ ವ್ಯಕ್ತಿಗಳಿಗೆ ನೀಡಲು ಅವಕಾಶವಿರುತ್ತದೆಯಾದರೂ, ರೈತರ ಗುಂಪುಗಳಿಗೆ ಆದ್ಯತೆ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ **ಕೇರಳದ ಕುಡುಂಬಶ್ರೀ** ಮಾದರಿಯಲ್ಲಿ (http://www.kudumbashree.org/) **ಜಂಟಿ ಜವಾಬ್ದಾರಿಯುಳ್ಳ** (Joint Liability Group-JLG) **ಮಹಿಳಾ ರೈತರ ಗುಂಪುಗಳಿಗೆ** (ಕನಿಷ್ಠ ಐದು ಸಾಗುವಳಿದಾರರನ್ನು ಹೊಂದಿರುವ) ಆದ್ಯತೆಯ ಮೇರೆಗೆ ಹಾಗೂ ಸರ್ಕಾರದ ಬೆಂಬಲದೊಂದಿಗೆ ನೀಡುವುದು ಅತ್ಯಂತ ಸೂಕ್ತವಾಗಿರುತ್ತದೆ. ಒಟ್ಟಿನಲ್ಲಿ ಹೊಸ ಅಧಿನಿಯಮದ ಪ್ರಕಾರ ಬೀಳು ಭೂಮಿಯನ್ನು ವ್ಯಕ್ತಿಗಳಿಗೆ ಗುತ್ತಿಗೆಗೆ ಕೊಡಬಹುದಾದರೂ, ಗುಂಪುಗಳಿಗೆ ಮತ್ತು ಗುಂಪು ಕೃಷಿಗೆ ಮಾತ್ರ ಸರ್ಕಾರದ ಪ್ರೋತ್ಸಾಹ ಮತ್ತು ಸೌಲಭ್ಯಗಳನ್ನು ಸೀಮಿತಗೊಳಿಸಬೇಕಾಗಿದೆ.

4. ಜೆಎಲ್‌ಜಿ ರಚನೆಯಡಿಯಲ್ಲಿ ಗುಂಪು ಕೃಷಿಯನ್ನು ಪ್ರೋತ್ಸಾಹಿಸುವಾಗ **ದಕ್ಷತೆ, ಸಮಾನತೆ ಮತ್ತು ಸುಸ್ಥಿರತೆ** ತತ್ವಗಳನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು. ಭೂ ಮಾಲಿಕ ರೈತ ಅಥವಾ ಮಹಿಳೆ ಸಹ ಗುತ್ತಿಗೆ ಸಾಗುವಳಿದಾರರ ಜೆಎಲ್‌ಜಿ ಯಲ್ಲಿ ಒಂದು ಭಾಗವಾಗಿರಬಹುದಾಗಿರುತ್ತದೆ. ಇದು ಗುತ್ತಿಗೆ ಕೃಷಿಗೆ ಮತ್ತಷ್ಟು ಪ್ರೋತ್ಸಾಹ ದೊರಕಿಸಿದಂತಾಗುತ್ತದೆ. ಭಾರತದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಹಾಗೂ 2006 ರಲ್ಲಿ ನಬಾರ್ಡ್ ಸಂಸ್ಥೆಯು ನಿರ್ದಿಷ್ಟಪಡಿಸಿರುವ ಸೂತ್ರದ ಪ್ರಕಾರ ಪ್ರತಿ ಜೆಎಲ್‌ಜಿಯಲ್ಲಿ **4 ರಿಂದ 10 ಸದಸ್ಯರಿರಬಹುದಾಗಿದೆ.**

5. ಜೆಎಲ್‌ಜಿಗಳ ಮೂಲಕ ಗುತ್ತಿಗೆ ಕೃಷಿಗೆ ಅಗತ್ಯ ಸಾಲ, ಬೆಳೆ ವಿಮೆ, ಸಂಕಷ್ಟಗಳಿಗೆ ಪರಿಹಾರ ಮತ್ತು ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು ಅಧಿನಿಯಮದ ಭಾಗವಾಗಿರಬೇಕಾಗುತ್ತದೆ. ಇದೇ ರೀತಿ ಮಳೆಯ ವೈಫಲ್ಯತೆ, ಕಾರ್ಮಿಕರ ಅಭಾವಕ್ಕಾಗಿ ಸೂಕ್ತ ಪರಿಹಾರ

ನೀಡುವಿಕೆ, **ಗುಂಪು ಕೃಷಿ**ಗೆ ಅಗತ್ಯವಾದ ಸೂಕ್ತ ಸಾಧನಗಳು ಮತ್ತು ಯಂತ್ರೋಪಕರಣಗಳನ್ನು ಒದಗಿಸುವುದು, ಬರಗಾಲ ಅಥವಾ ಮಳೆಯ ಅಭಾವದ ಪರಿಸ್ಥಿತಿಯಲ್ಲಿ ಸಂರಕ್ಷಕ ನೀರಾವರಿ ಸೌಲಭ್ಯ ಒದಗಿಸುವಿಕೆ, ಕಾರ್ಮಿಕ ಸಾಂದ್ರ ಕಾರ್ಯಕ್ರಮವಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯ ಮೂಲಕ ಗುಂಪು ಕೃಷಿಗೆ ಅಗತ್ಯವಾದ ಕಾರ್ಮಿಕರನ್ನು ಒದಗಿಸುವುದು ಹಾಗೂ ಇತರೆ ಯೋಜನೆಗಳನ್ನು ಗುಂಪು ಕೃಷಿಗೆ ಸಹಾಯಕವಾಗುವ ರೀತಿಯಲ್ಲಿ ಮಾರ್ಪಡಿಸಿ ಅಥವಾ ಒಗ್ಗೂಡಿಸಿ ನೆರವಾಗುವಂತಹ ವಿಶೇಷ ಕ್ರಮಗಳನ್ನು ಸರ್ಕಾರವು ಅಧಿನಿಯಮದ ಮೂಲಕ ಜಾರಿಗೆ ತರುವುದು ಸೂಕ್ತವಾಗಿರುತ್ತದೆ.

6. ಅಧಿನಿಯಮವು ಪರಿಸರದ ದೃಷ್ಟಿಯಿಂದ **ಸುಸ್ಥಿರವಲ್ಲದ** ಭೂ, ಜಲ, ಮಣ್ಣು ನಾಶ ಮಾಡುವ ಕೃಷಿ ಪದ್ಧತಿಯನ್ನು ಹಾಗೂ ಮಾನ್ಯವಲ್ಲದ ಬೆಳೆಗಳ ಕೃಷಿಯನ್ನು ನಿರ್ಬಂಧಿಸುವ ಅಂಶಗಳನ್ನು ಒಳಗೊಂಡಿರಬೇಕು.

7. **ಗ್ರಾಮ ಪಂಚಾಯಿತಿ**ಯು ಈ ರೀತಿಯ ಭೂ ಗುತ್ತಿಗೆ ಒಪ್ಪಂದವನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆ ನಡೆಸುವ ಅಧಿಕೃತ ಸಂಸ್ಥೆಯಾಗಿರಬೇಕು ಹಾಗೂ ಇದರ ಅನುಷ್ಠಾನವು (ಯೋಜನೆಗಳ ಒಗ್ಗೂಡಿಸುವಿಕೆಯೂ ಸೇರಿದಂತೆ) ಸುಸೂತ್ರವಾಗಿ ಆಗುವಂತೆ ನೋಡಿಕೊಳ್ಳಬೇಕು.

8. ಭೂ ಗುತ್ತಿಗೆಯಲ್ಲಿ ಉಂಟಾಗುವ ವ್ಯಾಜ್ಯಗಳು ಮತ್ತು ವಿವಾದಗಳನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಪರಿಹರಿಸಿಕೊಳ್ಳಲು ಅವಕಾಶಗಳಿರಬೇಕು ಮತ್ತು ಇವುಗಳ ಪರಿಹಾರವು ಶೀಘ್ರವಾಗಿ ನಿರ್ದಿಷ್ಟ ಅವಧಿಯಲ್ಲಿ ದೊರಕುವಂತೆ ಅಧಿನಿಯಮದಲ್ಲಿ ಸೂಚಿಸಿರಬೇಕು.

9. ಅಧಿನಿಯಮದ ಮೂಲಕ **ಸಾಲ ಭದ್ರತೆ ನಿಧಿ** (Credit Guarantee Fund) ಯನ್ನು ಸ್ಥಾಪಿಸಬೇಕು ಮತ್ತು ಈ ನಿಧಿಯು ಜೆಎಲ್‌ಜಿ ಗಳಿಗೆ ಸಾಲ ಕೊಡುವಾಗ ಬ್ಯಾಂಕರ್‌ಗಳ ನಂಬಿಕೆಯು ಹೆಚ್ಚಾಗುವಂತೆ ಇರಬೇಕು ಮತ್ತು ದಕ್ಷತೆಯಿಂದ ಕೆಲಸ ಮಾಡುತ್ತಿರುವ ಗುಂಪುಗಳಿಗೆ ಸಾಲಮನ್ನಾದಂತಹ ಪ್ರೋತ್ಸಾಹ ನೀಡುವ ಅವಕಾಶಗಳಿರಬೇಕು.

10. ರಾಜ್ಯದಲ್ಲಿ ಪ್ರಸ್ತುತದ ಭೂ ಸುಧಾರಣಾ ಕಾಯಿದೆ ಅಡಿಯಲ್ಲಿರುವ ಭೂಮಿತಿ ಕಾನೂನಿನ ಪ್ರಕಾರ ಗುತ್ತಿಗೆ ಕೃಷಿಗೆ ನೀಡುವ ಭೂ ಹಿಡುವಳಿ ವಿಸ್ತೀರ್ಣವನ್ನೂ ಮಿತಿಗೊಳಿಸಬೇಕು. ಇದು ವ್ಯಕ್ತಿಗಳಿಗೆ ನೀಡುವ ಜಮೀನಿಗೆ ಮಾತ್ರ ಅನ್ವಯಿಸುವಂತೆ ಇರಬೇಕೇ ಹೊರತು **ಗುಂಪು ಗುತ್ತಿಗೆ ಕೃಷಿ ಮಾಡುವುದಕ್ಕೆ ಯಾವುದೇ ಮಿತಿ ಇರಬಾರದು**.

11. ಅಧಿನಿಯಮದಲ್ಲಿ ಎಲ್ಲಾ ಮುಖ್ಯ ನಮೂನೆಗಳನ್ನೂ ಅಂದರೆ ಗುತ್ತಿಗೆ ಕೃಷಿ ಒಪ್ಪಂದ, ಪಂಚಾಯಿತಿ ಮತ್ತು ಅದರ ಮೇಲಿನ ಕಛೇರಿಗಳಲ್ಲಿ ದಾಖಲೆಗಳ ನಿರ್ವಹಣೆ, ಜೆಎಲ್‌ಜಿ ಗಳಿಗೆ ಮಾರ್ಗಸೂಚಿಗಳು ಇತ್ಯಾದಿಗಳನ್ನು ಸೇರಿಸಿರಬೇಕು.

12. **ಸದ್ಯದ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರಲ್ಲಿ ಭೂ ಗುತ್ತಿಗೆಗೆ** ಇರುವ ನಿರ್ಬಂಧವನ್ನು ಸಡಿಲಿಸಬೇಕು. ಇದಕ್ಕೆ ಪೂರಕವಾಗಿ ಬೇರೆ ಬೇರೆ ರಾಜ್ಯಗಳು ಜಾರಿಗೆ ತಂದಿರುವ ಈ ಕೆಳಗಿನ ಕಾಯ್ದೆ, ಕಾರ್ಯಕ್ರಮಗಳನ್ನು ಪರಿಗಣಿಸತಕ್ಕದ್ದು.

(ಅ) ಗೇಣಿದಾರ ರೈತರಿಗೆ ಸಾಲ, ವಿಮೆ ಮತ್ತು ರಿಯಾಯ್ತಿಗಳನ್ನು ಸಾಂಸ್ಥಿಕ ಮೂಲದಿಂದ ದೊರಕಿಸಲು ಆಂಧ್ರಪ್ರದೇಶವು ಹೊರತಂದಿರುವ "Andhra Pradesh Land Licensed Cultivators Act, 2011" - Act to Provide Loan and Other Benefits' Eligibility.

(ಆ) ಸರ್ಕಾರಿ ಮತ್ತು ಖಾಸಗಿ ವಲಯದ ನೌಕರರು, ವ್ಯಾಪಾರಸ್ಥರು, ಜನತಾ ಪ್ರತಿನಿಧಿಗಳು ತಮ್ಮ ಕೃಷಿ ಭೂಮಿಯನ್ನು ಮೂರು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದಕ್ಕೆ ಅನುಮತಿ – "Uttar Pradesh Revenue Code Rules, 2016" - Permission for Leasing Out.

(ಇ) ಕೃಷಿ ಭೂಮಿಯನ್ನು ಗುತ್ತಿಗೆ ನೀಡಿದ ಭೂ ಮಾಲೀಕರ ಆಸ್ತಿ ಹಕ್ಕನ್ನು ರಕ್ಷಣೆ ಮಾಡಲು ಮಧ್ಯಪ್ರದೇಶ ಸರ್ಕಾರವು ತಂದಿರುವ "The Madhya Pradesh Bhumiswamy Evam Bataidar Ka Hiton Ka Sanrakshan Vidheyak-2016" - To protect the rights of the owner after leasing out.

(ಈ) ಗುತ್ತಿಗೆ ಭೂಮಿ ಪಡೆದ ಗೇಣಿದಾರರ ಜಂಟಿ ಜವಾಬ್ದಾರಿ ಗುಂಪಿಗೆ (JLG) ಹಣಕಾಸು ಒದಗಿಸಲು ನಬಾರ್ಡ್ ಸಂಸ್ಥೆಯ ಸುತ್ತೋಲೆ "Nabard Guidelines For Financing JLGs of Tenant Farmers".

(ಉ) ರೈತರು ಕೃಷಿಯಿಂದ ವಿಮುಖರಾಗುವುದನ್ನು ತಡೆಯಲು ಆಂಧ್ರ ಪ್ರದೇಶ ಸರ್ಕಾರ 2014ರಲ್ಲಿ ಹೊರ ತಂದಿರುವ ಯೋಜನೆ "Establishment of Agro Service Centres under Agro Service Centre and Service Delivery" - Administrative Sanction dated 28-05-2014.

ಅನುಬಂಧ 1

# ಕರ್ನಾಟಕ ಕೃಷಿ ಬೆಲೆ ಆಯೋಗ

**(Karnataka Agriculture Price Commission)**

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

## ಕರ್ನಾಟಕದ ಕೃಷಿ ಪರಿವರ್ತನೆಯ ದಿಕ್ಕು ಮತ್ತು ಮಾರ್ಗೋಪಾಯಗಳು

ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಿ ದಶಕ
(2005–06 ರಿಂದ 2014–15) ದಲ್ಲಾದ ಪರಿವರ್ತನೆಯ ಸಮಗ್ರ ವಿಶ್ಲೇಷಣೆ

**ಸಂಶೋಧನಾ ವರದಿ**

ಜುಲೈ 2016

## (Executive Summary)

- ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಿ ದಶಕ (2005-06 ರಿಂದ 2014-15) ದಲ್ಲಾದ ಪರಿವರ್ತನೆಯನ್ನು ಜಿಲ್ಲೆ, ವಲಯ ಮಟ್ಟದಲ್ಲಿ ಸಮಗ್ರ ವಿಶ್ಲೇಷಣೆ ಮಾಡಲಾಗಿದೆ.
- ಕಳೆದ ದಶಕದಲ್ಲಿ ಕೃಷಿ ಬೆಳೆಗಳಿಗೆ ತೊಡಗಿಸಿದ ಭೂಮಿಯ ವಿಸ್ತೀರ್ಣ ಸುಮಾರು 12.49 ಲಕ್ಷ ಹೆಕ್ಟೇರ್ (ಶೇ.11) ರಷ್ಟು ಇಳಿಕೆಯಾಗಿರುವುದು ಆತಂಕದ ಸಂಗತಿಯಾಗಿರುತ್ತದೆ. **ಇದರಲ್ಲಿ ಬಹುಪಾಲು (ಶೇ.52) ರಷ್ಟು ಎಣ್ಣೆಕಾಳು ಬೆಳೆಯುವ ಭೂಮಿಯಾಗಿದ್ದರೆ ಶೇ.13 ರಷ್ಟು ಏಕದಳ ಧಾನ್ಯಗಳದ್ದಾಗಿದೆ.**
- ಆದರೆ, ತೋಟಗಾರಿಕೆ ಬೆಳೆಗಳ ಒಟ್ಟಾರೆ ವಿಸ್ತೀರ್ಣ ಶೇ.1.6 ರಷ್ಟು ಅಂದರೆ ಸುಮಾರು 36 ಸಾವಿರ ಹೆಕ್ಟೇರ್‌ಗಳು ಪ್ರತಿ ವರ್ಷ ರಾಜ್ಯದಲ್ಲಿ ಹೆಚ್ಚಾಗಿರುವುದು ಅತ್ಯಂತ ಸಂತಸದ ವಿಚಾರ.
- ಅಡಕೆ ವಿಸ್ತೀರ್ಣ ಕಳೆದ ಹತ್ತು ವರ್ಷದಲ್ಲಿ ಶೇ. 40 ರಷ್ಟು, ಮಾವು ಶೇ.51, ತೆಂಗು ಶೇ.13, ಬಾಳೆ ಶೇ.89, ಟೊಮೇಟೊ ಶೇ.47 ಮತ್ತು ಈರುಳ್ಳಿ ಶೇ.11 ವಿಸ್ತೀರ್ಣ ಅಧಿಕಗೊಂಡಿರುವ ಪ್ರಮುಖ ತೋಟಗಾರಿಕೆ ಬೆಳೆಗಳಾಗಿವೆ.
- ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಅಧಿಕವಾಗಿ ಉತ್ಪಾದನೆಯಾಗುತ್ತಿರುವ ಮುಸುಕಿನ ಜೋಳ, ಹತ್ತಿ, ಕಬ್ಬಿನಂತಹ ಬೆಳೆಗಳ ವಿಸ್ತೀರ್ಣ ಅಧಿಕವಾಗುತ್ತಿದ್ದರೆ ನಮ್ಮ **ಆಹಾರ ಭದ್ರತೆಗೆ ಅತ್ಯಗತ್ಯವಾಗಿರುವ ಭತ್ತ, ರಾಗಿ, ಜೋಳದಂತಹಾ ಬೆಳೆಗಳ ವಿಸ್ತೀರ್ಣ ಕಡಿಮೆಯಾಗುತ್ತಿರುವುದು ಆತಂಕದ ವಿಚಾರ.**
- ಆಲೂಗಡ್ಡೆ ತವರಾದ ಹಾಸನ ಜಿಲ್ಲೆಯಲ್ಲಿ ಬೆಳೆ ವಿಸ್ತೀರ್ಣ ತೀವ್ರವಾಗಿ ಶೇ.65 ರಷ್ಟು ಇಳಿಕೆಯಾಗಿದೆ. ಪ್ರಮುಖ ಸಾಂಬಾರು ಪದಾರ್ಥವಾದ ಮೆಣಸಿನಕಾಯಿ ವಿಸ್ತೀರ್ಣ ಬಹುತೇಕ ಜಿಲ್ಲೆಗಳಲ್ಲಿ ಕಡಿಮೆಯಾಗಿರುವುದು ಆತಂಕದ ವಿಚಾರವಾಗಿದೆ.
- ಕರ್ನಾಟಕದಲ್ಲಿ ರೈತರು ಕೃಷಿ ಮತ್ತು ತೋಟಗಾರಿಕೆಯಲ್ಲಿ ತೊಡಗಿಸಿದ ಒಟ್ಟಾರೆ ಭೂಮಿಯ ವಿಸ್ತೀರ್ಣ ಕಳೆದ ಒಂದು ದಶಕದಲ್ಲಿ ವಾರ್ಷಿಕವಾಗಿ ಸುಮಾರು ಶೇ. ಒಂದರಷ್ಟು ಅಥವಾ ಪ್ರತಿ ವರ್ಷ ಸರಾಸರಿ 60 ಸಾವಿರ ಹೆಕ್ಟೇರ್ ಕೃಷಿಯೇತರ ಬಾಬ್ತಿಗೆ ಪರಿವರ್ತನೆಯಾಗಿರುವುದು ಅತ್ಯಂತ ಆತಂಕದ ವಿಚಾರವಾಗಿದೆ.
- ಬೆಂಗಳೂರು ನಗರ ಜಿಲ್ಲೆಯಲ್ಲಿ ಬಹುತೇಕ ಆಹಾರ ಬೆಳೆಗಳು ಮಾತ್ರವಲ್ಲ ದ್ರಾಕ್ಷಿ, ಸಪೋಟ, ಟೊಮೇಟೊ, ಮಾವು, ತೆಂಗು ಇತ್ಯಾದಿ ಎಲ್ಲಾ ತೋಟಗಾರಿಕಾ ಬೆಳೆಗಳ ವಿಸ್ತೀರ್ಣ ತೀವ್ರ ಗತಿಯಲ್ಲಿ ಕ್ಷೀಣಿಸುತ್ತಿರುವುದು, ಭೂಮಿ ಕೃಷಿಯೇತರ ಕಾರ್ಯಕ್ಕೆ ಪರಿವರ್ತನೆಯಾಗಿರುವುದಕ್ಕೆ ಸಾಕ್ಷಿಯಾಗಿರುತ್ತದೆ.
- ಆದರೆ, ಬಹುತೇಕ ಕೃಷಿ ಬೆಳೆಗಳಲ್ಲಿ ತಂತ್ರಜ್ಞಾನ, ಸುಧಾರಿಸಿದ ತಳಿ ಇತ್ಯಾದಿಗಳ ಸದ್ಬಳಕೆಯಿಂದ ಉತ್ಪಾದಕತೆ ಅಧಿಕವಾಗಿದ್ದು, ಪರಿಣಾಮವಾಗಿ ಇವುಗಳ ವಿಸ್ತೀರ್ಣದಲ್ಲಿ ಕಡಿತವಾಗಿದ್ದರೂ ಉತ್ಪಾದನೆ ಅಷ್ಟೇನೂ ಕಡಿಮೆಯಾಗಿರುವುದಿಲ್ಲ.
- ಜೋಳ, ಕಿರು ಧಾನ್ಯಗಳ ವಿಸ್ತೀರ್ಣ ಕಡಿಮೆಯಾಗದಿದ್ದರೆ, ಸುಮಾರು 6.65 ಲಕ್ಷಟನ್ ಏಕಧಾನ್ಯ ಅಧಿಕ ಸಿಗುತ್ತಿತ್ತು. ಹಾಗೇ, ಎಣ್ಣೆಕಾಳುಗಳ ಇಳುವರಿ ಉತ್ತಮವಾಗಿದ್ದು, ವಿಸ್ತೀರ್ಣ ಕಡಿಮೆಯಾಗಿರದಿದ್ದಲ್ಲಿ, ರಾಜ್ಯಕ್ಕೆ 5.19 ಲಕ್ಷ ಟನ್ ಅಧಿಕ ಎಣ್ಣೆಕಾಳುಗಳು ಲಭ್ಯವಾಗುತ್ತಿತ್ತು.
- ಕಳೆದ 10 ವರ್ಷಗಳಲ್ಲಿ ರಾಜ್ಯದಲ್ಲಿ ಕೃಷಿ ಭೂಮಿ ವಿಸ್ತೀರ್ಣ ಕಡಿಮೆಯಾಗಿದ್ದರೂ ರೈತರು ಬೆಲೆಗೆ ಸ್ಪಂದಿಸಿ ಅಧಿಕ ಉತ್ಪಾದನೆ ಕೈಗೊಂಡಿದ್ದು ಇದನ್ನು ಸದ್ಬಳಕೆ ಮಾಡುವ ದಾರಿ ಹುಡುಕುವುದು ಸರ್ಕಾರದ ಮುಂದಿರುವ ಸವಾಲಾಗಿದೆ.

2

# ಮಾರ್ಗೋಪಾಯಗಳು

ದಶಕದ ಅವಧಿಯಲ್ಲಿ ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಾದ ಪರಿವರ್ತನೆ, ಆ ಮೂಲಕ ಉತ್ಪಾದನೆಯ ಮೇಲಾಗುತ್ತಿರುವ ಪರಿಣಾಮಗಳನ್ನು ಅರ್ಥೈಸಿಕೊಂಡು ಸಮರ್ಥವಾಗಿ ಪರಿಹಾರ ರೂಪಿಸಬೇಕಾಗಿದೆ.

## ಅ. ಸಮಗ್ರ ಉತ್ಪಾದನಾ ನೀತಿ

ನಮ್ಮ ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಎಷ್ಟು ಪ್ರಮಾಣದಲ್ಲಿ ಅಗತ್ಯವಿದೆ ಎಂದು ಅಂದಾಜು ಮಾಡಬೇಕಾಗಿದೆ. ಇದನ್ನು ಆಹಾರ ಭದ್ರತೆಯ ಅಗತ್ಯ, ಸ್ಥಳೀಯ ಬೇಡಿಕೆಗಳು, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳ ಪೂರೈಕೆ, ವಿದೇಶಗಳಿಗೆ ರಫ್ತು ಹೀಗೆ ವಿವಿಧ ಮೂಲಗಳಿಂದ ಲೆಕ್ಕಾಚಾರ ಹಾಕಬೇಕಾಗಿದೆ. ಹಾಗೇ, ದೇಶ–ವಿದೇಶಗಳ ಉತ್ಪಾದನೆ, ಪೂರೈಕೆ ಬೇಡಿಕೆಗಳನ್ನು ಗಮನಿಸಬೇಕಾಗಿದೆ. ಇದಕ್ಕೆ ಮೊಟ್ಟ ಮೊದಲಾಗಬೇಕಾಗಿರುವುದು ರಾಜ್ಯ ಮಟ್ಟದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಮಗ್ರ ಉತ್ಪಾದನಾ ನೀತಿ.

## ಆ. ವಿಕೇಂದ್ರೀಕೃತ ಬೆಳೆ ಯೋಜನೆ

ಜಾಗತಿಕ ಮಾರುಕಟ್ಟೆ ಪ್ರಭಾವ ಅತಿಯಾಗಿರುವ ಮುಸುಕಿನ ಜೋಳ, ಕಬ್ಬು, ಹತ್ತಿಯಂತಹ ವಾಣಿಜ್ಯ ಬೆಳೆಗಳ ಹಾಗೂ ಅಡಕೆಯಂತಹ ತೋಟದ ಬೆಳೆಗಳ ವಿಸ್ತೀರ್ಣ ರಾಜ್ಯದಲ್ಲಿ ಅತಿಯಾಗಿ ಏರುತ್ತಿದೆ. ಆದರೆ ಆಹಾರ ಮತ್ತು ಮೇವಿಗೆ ಅತ್ಯಗತ್ಯವಾಗಿರುವ ರಾಗಿ, ಜೋಳ, ದ್ವಿದಳ ಧಾನ್ಯ ಮಳೆ ಆಶ್ರಯದ ಭತ್ತ ಇತ್ಯಾದಿಗಳ ಕೃಷಿಯನ್ನೇ ರೈತರು ಕೈಬಿಡುವಂತಾಗಿರುವರು.

ಈ ಪ್ರವೃತ್ತಿಗೆ ಕಡಿವಾಣ ಹಾಕಿ, ಆಹಾರ ಭದ್ರತೆ ಅಗತ್ಯ ಹವಾಮಾನ ವೈಪರಿತ್ಯ ಮಾರುಕಟ್ಟೆ, ವಾಣಿಜ್ಯ, ಕೈಗಾರಿಕೆಗಳ ಅಗತ್ಯ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ರೈತಾಪಿ ವರ್ಗದ ಸಹಯೋಗದಲ್ಲೇ ಸೂಕ್ತ ಬೆಳೆ ಯೋಜನೆ (Crop Planning) ಯನ್ನು ಜಿಲ್ಲಾ, ವಲಯ ಮತ್ತು ರಾಜ್ಯ ಮಟ್ಟಗಳಲ್ಲಿ ರೂಪಿಸಿ, ಅನುಷ್ಠಾನಗೊಳಿಸಬೇಕಾಗಿದೆ.

- ಪ್ರೋತ್ಸಾಹಿಸುವ ಉದ್ದೇಶದಿಂದ **ಪ್ರತಿ ಜಿಲ್ಲೆಯ ಪ್ರಮುಖ ಬೆಳೆ** ಅಥವಾ ಬೆಳೆ ಪದ್ಧತಿಗಳನ್ನು ಗುರುತಿಸುವುದು. ಉದಾಹರಣೆಗೆ ತೃಣಧಾನ್ಯಕ್ಕೆ ಚಿತ್ರದುರ್ಗ ಮತ್ತು ಚಾಮರಾಜನಗರಗಳು, ಬ್ಯಾಡಗಿ ಒಣಮೆಣಸಿನಕಾಯಿಗೆ ಹಾವೇರಿ ಜಿಲ್ಲೆ, ತೊಗರಿಗೆ ಕಲಬುರಗಿ, ಸಾವಯವ ನಾಟಿ ತಳಿ ಭತ್ತಕ್ಕೆ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳು, ಸಾವಯವ ಶುಂಠಿಗೆ ಬೀದರ್ ಜಿಲ್ಲೆ ಇತ್ಯಾದಿ.

- ಹಾಗೇ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಅಗತ್ಯವಾದ ಬಿಳಿಜೋಳ, ರಾಗಿ ಹಾಗೇ, ತೊಗರಿ ಉತ್ಪಾದನೆ ಅಧಿಕ ಮಾಡಲು **ಪ್ರತ್ಯೇಕ ವಲಯಗಳನ್ನಾಗಿ** ರೂಪಿಸಿ ಪ್ರೋತ್ಸಾಹಿಸಬೇಕು.

- ಕರ್ನಾಟಕ ಸರ್ಕಾರ ರಾಜ್ಯದ 30 ಜಿಲ್ಲೆಗಳಿಗೆ ಪ್ರತ್ಯೇಕವಾದ **'ಸಮಗ್ರ ಜಿಲ್ಲಾ ಕೃಷಿ ಯೋಜನೆ'** (C-DAP) ಮತ್ತು **ರಾಜ್ಯಕ್ಕೆ ಪ್ರತ್ಯೇಕ ಯೋಜನೆ** (S-DAP) ಗಳನ್ನು ರೂಪಿಸುವ ಜವಾಬ್ದಾರಿಯನ್ನು **'ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್‌ಲರ್ನಿಂಗ್'** ಎಂಬ ಸಂಸ್ಥೆಗೆ ವಹಿಸಿದ್ದು, ಈ ಸಂಸ್ಥೆ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಪ್ರತಿ ಜಿಲ್ಲೆಯಲ್ಲೂ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO) ನೇತೃತ್ವದಲ್ಲಿ ರೈತರು, ತಜ್ಞರು, ಇಲಾಖಾಧಿಕಾರಿಗಳು ಮತ್ತಿತರರ ಸಮಿತಿ ರಚನೆಯಾಗಿ ಈ ಬಗ್ಗೆ ಚರ್ಚೆಯಾಗಿ ಸಹಮತ ರೂಪಿಸಬೇಕು.

- ಜಿಲ್ಲಾ ಮಟ್ಟದ ಬೆಳೆ ಯೋಜನೆಯ ಆಧಾರದ ಮೇಲೆ **ಕೃಷಿ ಪರಿಸರ ವಲಯ** (Agro Ecological Zones) ಮಟ್ಟದ ಬೆಳೆ ಪದ್ಧತಿ ರೂಪಿಸಿ, ರಾಜ್ಯದ ಅಗತ್ಯ, ಮಾರುಕಟ್ಟೆ ಪರಿಸ್ಥಿತಿ, ಹವಾಮಾನ ವೈಪರಿತ್ಯ (Climate Change) ಇತ್ಯಾದಿ ವಿಚಾರಗಳ ನಡುವೆ ಸಮನ್ವಯ ಸಾಧಿಸಿ, **ರಾಜ್ಯ ಮಟ್ಟದ ಸೂಕ್ತ ಬೆಳೆ ಮತ್ತು ಉತ್ಪಾದನೆ ಯೋಜನೆಯನ್ನು ರಚಿಸುವುದು.**

- ಈ ಉದ್ದೇಶಕ್ಕಾಗಿ ವಿವಿಧ ವಿಶ್ವವಿದ್ಯಾನಿಲಯಗಳು, **ರಾಷ್ಟ್ರೀಯ ಮಣ್ಣು ಸರ್ವೇಕ್ಷಣ ಮತ್ತು ಭೂ ನಿಯೋಜನ ಬಳಕೆ ಸಂಸ್ಥೆ (NBSS & LUP)** ಯಂತಹ ಸಂಶೋಧನಾ ಕೇಂದ್ರಗಳು, **ಕೃಷಿ ತಂತ್ರಜ್ಞರ ಸಂಸ್ಥೆ** (IAT) ಗಳಂತಹ ವೃತ್ತಿಪರ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳ ಸಕ್ರಿಯ ಸಹಯೋಗ ಏರ್ಪಡಿಸುವುದು.

## ಇ. ಉತ್ಪಾದನೆ ನಿಗದಿ

ಮುಂದುವರೆದ ದೇಶಗಳಲ್ಲಿ ಕೃಷಿ ಉತ್ಪಾದನೆಯನ್ನು ಅಗತ್ಯಕ್ಕೆ ಅನುಗುಣವಾಗಿ ಮಿತಿಗೊಳಿಸುವ ಪರಿಪಾಠವಿರುತ್ತದೆ. ನಮ್ಮ ದೇಶದಲ್ಲೇ ತಂಬಾಕು ಮಂಡಳಿ ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಗುರಿ ನಿರ್ಧರಿಸಿ, ತಂಬಾಕು ಬೆಳೆ ಬೆಳೆಯುವ ವಿಸ್ತೀರ್ಣವನ್ನು ನಿಗದಿಪಡಿಸುವುದು ಮಾತ್ರವಲ್ಲ ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೂ ತರುತ್ತಿದೆ.

- ಒಂದು ಸಾಲಿನಲ್ಲಿ ಧಾರಣೆ ಉತ್ತಮವಾದೊಡನೇ ರೈತರು ಆ ಬೆಳೆಯ ವಿಸ್ತೀರ್ಣವನ್ನು ಅತಿಯಾಗಿ ವಿಸ್ತರಿಸುವುದನ್ನು ನಿಯಂತ್ರಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

- ಹಾಗೇ, ಅಗತ್ಯವಿರುವ ಬೆಳೆಗಳನ್ನು ಎಲ್ಲಾ ಪ್ರೋತ್ಸಾಹಗಳೊಡನೆ ವಿಸ್ತರಿಸುವುದೂ ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

- ಸರ್ಕಾರದ ಹಿಡಿತದಲ್ಲಿರುವ ಪ್ರೋತ್ಸಾಹ, ರಿಯಾಯ್ತಿ, ಖರೀದಿ ಇತ್ಯಾದಿ ಕಾರ್ಯಕ್ರಮಗಳೆಲ್ಲವನ್ನೂ ಈ ಬೆಳೆ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಸೂಕ್ತ ಮತ್ತು ಸಮಯೋಜಿತ ರೀತಿಯಲ್ಲಿ ಬಳಸುವುದು.

- ವಿವಿಧ ಬೆಳೆಗಳ ವಿಸ್ತೀರ್ಣ, ಉತ್ಪಾದನೆಗಳ ಬಗ್ಗೆ ನಿಖರವಾದ ಅಂಕಿ ಅಂಶಗಳು ಸಕಾಲದಲ್ಲಿ ದೊರೆಯುವಂತೆ ಮಾಡಲು **ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ** ಮತ್ತಷ್ಟು ಸದೃಢಗೊಳಿಸುವುದು.

- ಇದರ ಜೊತೆಗೆ ದೇಶ, ವಿದೇಶಗಳ ಉತ್ಪಾದನೆ, ಬೆಲೆ ಮುನ್ಸೂಚನೆ, ಮಾರುಕಟ್ಟೆ ಪರಿಸ್ಥಿತಿ ಇತ್ಯಾದಿ **ಮಾಹಿತಿಗಳನ್ನು ರೈತರಿಗೆ** ನಿರಂತರವಾಗಿ ದೊರಕಿಸುವ ವ್ಯವಸ್ಥೆ ರೂಪಿಸಿ ರಾಜ್ಯ/ಜಿಲ್ಲೆಗಳಿಗೆ ಸೂಕ್ತವಾದ ಬೆಳೆಗಳ ಕೃಷಿಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.

- ಈ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗ 2015ರ ಡಿಸೆಂಬರ್‌ನಲ್ಲಿ ಸಲ್ಲಿಸಿರುವ ವರದಿಯ ಕೆಳಗಿನ ಶಿಫಾರಸ್ಸು ಕಾರ್ಯರೂಪಕ್ಕೆ ತರುವುದು ಅಗತ್ಯವಾಗಿದೆ.

## ಈ. ಮಾರಾಟ ಮಾಹಿತಿ

- ಒಂದು ಬೆಳೆಯ ಕೃಷಿಗೆ ಸಂಬಂಧಿಸಿದ ಈ ಎಲ್ಲಾ ಮಾಹಿತಿಯನ್ನು ಸಕಾಲದಲ್ಲಿ ರೈತಾಪಿ ವರ್ಗಕ್ಕೆ ತಲುಪಿಸಲು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ **ಬಿತ್ತರಿಸುವ ವ್ಯವಸ್ಥೆ** (KIOSKS) ಯನ್ನು ರಾಜ್ಯಾದ್ಯಂತ ರೂಪಿಸಿ, ಸಮಗ್ರ ವಿದ್ಯುನ್ಮಾನ ಜಾಲ ಏರ್ಪಡಿಸುವುದು. ಈ ಕಾರ್ಯದಲ್ಲಿ ಗ್ರಾಮ ಪಂಚಾಯ್ತಿ ಅಥವಾ **ಕೆ.ಎಂ.ಎಫ್.ನ ಹಾಲು ಸಂಗ್ರಹಣಾ ಕೇಂದ್ರಗಳನ್ನು** ಬಳಸಿಕೊಳ್ಳುವುದು.

- ರೈತರೊಡನೆ ನಿರಂತರ ಸಂಪರ್ಕ, ಸಂವಾದಕ್ಕಾಗಿ ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತಿತರ ಇಲಾಖೆಗಳನ್ನು ಸೇರಿಸಿ ವಿದ್ಯುನ್ಮಾನ ಸಂವಾದ ಪೋರ್ಟಲ್ (Interactive Portal) ಸಿದ್ಧಪಡಿಸಿ ರಾಜ್ಯಾದ್ಯಂತ ರೈತರು ದಿನನಿತ್ಯ ಅಗತ್ಯ ಮಾಹಿತಿಗಳನ್ನು ಕೇಳಿ ಪಡೆಯುವಂತಾಗಬೇಕು.

- ಇವುಗಳ ಯಶಸ್ವಿ ಅನುಷ್ಠಾನಕ್ಕೆ ಮಾರಾಟ ಇಲಾಖೆ ವಿವಿಧ ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು, ವೃತ್ತಿಪರರು, ಮಾಹಿತಿ ತಂತ್ರಜ್ಞಾನ ಪರಿಣಿತರ ಸಹಯೋಗದಲ್ಲಿ ಒಂದು ಸದೃಢ **ತಾಂತ್ರಿಕ ಘಟಕ** (Technical Cell) ಶೀಘ್ರ ನಿರ್ಮಿಸುವುದು.

## ಉ. ಸಾಂಸ್ಥಿಕ ರಚನೆ

ಹೀಗೆ, ಕರ್ನಾಟಕಕ್ಕೆ ಸಂಬಂಧಿಸಿದ ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನೆಗೆ ಸಂಬಂಧಿಸಿದ ಸಮಗ್ರ ನೀತಿಯನ್ನೂ ಅದಕ್ಕೆ ಪೂರಕವಾದ ವಿಕೇಂದ್ರೀಕೃತ ಬೆಳೆ ಯೋಜನೆಯನ್ನು ವಲಯ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿ ಸಾಲಿನಲ್ಲೂ ಮುಂಚಿತವಾಗಿ ಹೊರ ತರುವ ಸಾಂಸ್ಥಿಕ ರಚನೆ ಅತ್ಯಗತ್ಯವಾಗಿರುತ್ತದೆ.

- ಇದರ ಜವಾಬ್ದಾರಿಯನ್ನು ಶಾಸನಬದ್ಧ ಸ್ಥಾನಮಾನ ಹೊಂದಿರುವ ರಾಜ್ಯ ಯೋಜನೆ ಮಂಡಳಿ (State Planning Board) ಹೊರುವುದು ಅತ್ಯಂತ ಸೂಕ್ತವಾಗಿರುತ್ತದೆ.

ಈ ನಿಟ್ಟಿನಲ್ಲಿ ರೈತ ಸಂಘಟನೆಗಳು, ಪ್ರಗತಿಪರ ರೈತರು, ಸ್ವಯಂ ಸೇವಾಸಂಸ್ಥೆಗಳು, ತಜ್ಞರು, ಮತ್ತಿತರರೊಡನೆ ಸತತ ಮಾತುಕತೆ, ಸಂವಾದ, ಚರ್ಚೆಗಳನ್ನು ಏರ್ಪಡಿಸಿ ಸಹಮತ ರೂಪಿಸಬೇಕಾಗಿದೆ.

## ಅನುಬಂಧ 2 : ಕರ್ನಾಟಕದಲ್ಲಿ ವಿವಿಧ  ವಲಯಗಳಲ್ಲಿ ಕೃಷಿ ಭೂಮಿ ಬೀಳು ಬಿಟ್ಟಿರುವ ರೈತರ ಸಾಮಾನ್ಯ ಚಿತ್ರಣ

| ಕ್ರ. ಸಂ. | ವಿವರ | | ಹಳೇ ಮೈಸೂರು | | ಮಲೆನಾಡು ಮತ್ತು ಕರಾವಳಿ ಪ್ರದೇಶ | | ಮಧ್ಯ ಕರ್ನಾಟಕ | | ಮುಂಬೈ ಕರ್ನಾಟಕ | | ಹೈದ್ರಾಬಾದ್ ಕರ್ನಾಟಕ | | ಕರ್ನಾಟಕ | |
|---|---|---|---|---|---|---|---|---|---|---|---|---|---|---|
| | | | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. |
| 1 | ಮಾದರಿ ಸಂಖ್ಯೆ | | 80 | 100 | 160 | 100 | 25 | 100 | 111 | 100 | 80 | 100 | **456** | **100** |
| 2 | ವಿದ್ಯಾರ್ಹತೆ | ಅನಕ್ಷರಸ್ಥ | 18 | 23 | 11 | 7 | 1 | 4 | 43 | 39 | 39 | 49 | **112** | **25** |
| | | ಪ್ರಾಥಮಿಕ | 21 | 26 | 26 | 16 | 2 | 8 | 33 | 30 | 14 | 18 | **96** | **21** |
| | | ಪ್ರೌಢಶಾಲೆ | 21 | 26 | 47 | 29 | 10 | 40 | 19 | 17 | 16 | 20 | **113** | **25** |
| | | ಪದವಿಪೂರ್ವ ಕಾಲೇಜು | 5 | 6 | 57 | 36 | 5 | 20 | 9 | 8 | 7 | 9 | **83** | **18** |
| | | ಪದವಿಧರ | 15 | 19 | 19 | 12 | 7 | 28 | 7 | 6 | 4 | 5 | **52** | **11** |
| 3 | ಸರಾಸರಿ ಕುಟುಂಬದ ಗಾತ್ರ | | 5 | | 5 | | 5 | | 8 | | 8 | | **6** | |
| 4 | ಉದ್ಯೋಗ | ಸ್ವಂತ ಜಮೀನಿನಲ್ಲಿ ಕೆಲಸ | 197 | 46 | 366 | 48 | 57 | 42 | 345 | 41 | 198 | 33 | **1163** | **43** |
| | | ಬೇರೆ ಉದ್ಯೋಗ | 21 | 5 | 37 | 5 | 3 | 2 | 29 | 3 | 0 | 0 | **90** | **3** |
| | | ದಿನಗೂಲಿ | 37 | 9 | 6 | 1 | 26 | 19 | 80 | 10 | 26 | 4 | **175** | **6** |
| | | ನಿರುದ್ಯೋಗ, ಸಾಂಧರ್ಬಿಕ ಕೂಲಿ | 175 | 41 | 360 | 47 | 51 | 37 | 384 | 46 | 385 | 63 | **1298** | **48** |

## ಅನುಬಂಧ 3 : ಕರ್ನಾಟಕದಲ್ಲಿ ವಿವಿಧ  ವಲಯಗಳಲ್ಲಿ ಭೂಮಿ ಬೀಳು ಬಿಟ್ಟಿರುವ ರೈತರ ವರ್ಗ ಮತ್ತು ಸಾಮಾಜಿಕ ವಿಂಗಡಣೆ (ಶೇ.)

| ಕ್ರ. ಸಂ. | ವಲಯ | ರೈತರ ವರ್ಗ | ರೈತರ ಸಾಮಾಜಿಕ ಹಿನ್ನೆಲೆ | | | | |
|---|---|---|---|---|---|---|---|
| | | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಹಿಂದುಳಿದ ವರ್ಗ & ಅಲ್ಪ ಸಂಖ್ಯಾತರು | ಸಾಮಾನ್ಯ ವರ್ಗ | ಒಟ್ಟು |
| 1 | ಹಳೇ ಮೈಸೂರು | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 13 | 1 | 45 | 9 | 68 |
| | | ಮಧ್ಯಮ (5–10 ಎಕರೆಯವರೆಗೆ) | – | – | 14 | 6 | 20 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | – | 1 | 5 | 6 | 13 |
| | | ಒಟ್ಟು | 13 | 3 | 64 | 21 | 100 |
| 2 | ಮಲೆನಾಡು ಮತ್ತು ಕರಾವಳಿ ಪ್ರದೇಶ | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 3 | 5 | 48 | 17 | 73 |
| | | ಮಧ್ಯಮ (5–10 ಎಕರೆಯವರೆಗೆ) | 1 | 1 | 11 | 4 | 17 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | | 1 | 5 | 4 | 10 |
| | | ಒಟ್ಟು | 4 | 7 | 64 | 26 | 100 |
| 3 | ಮಧ್ಯ ಕರ್ನಾಟಕ | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 4 | 12 | 36 | 16 | 68 |
| | | ಮಧ್ಯಮ (5–10 ಎಕರೆಯವರೆಗೆ) | – | 8 | 4 | – | 12 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | – | 4 | 12 | 4 | 20 |
| | | ಒಟ್ಟು | 4 | 24 | 52 | 20 | 100 |
| 4 | ಮುಂಬೈ ಕರ್ನಾಟಕ | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 10 | 4 | 14 | 16 | 43 |
| | | ಮಧ್ಯಮ (5–10 ಎಕರೆಯವರೆಗೆ) | 6 | 1 | 12 | 8 | 27 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | 1 | 2 | 9 | 18 | 30 |
| | | ಒಟ್ಟು | 17 | 6 | 34 | 42 | 100 |
| 5 | ಹೈದ್ರಾಬಾದ್ ಕರ್ನಾಟಕ | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 8 | 19 | 25 | – | 51 |
| | | ಮಧ್ಯಮ (5–10 ಎಕರೆಯವರೆಗೆ) | 1 | 6 | 14 | – | 21 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | 1 | 6 | 18 | 3 | 28 |
| | | ಒಟ್ಟು | 10 | 31 | 56 | 3 | 100 |
| 6 | ಕರ್ನಾಟಕ | **ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ)** | **7** | **7** | **34** | **12** | **61** |
| | | **ಮಧ್ಯಮ (5–10 ಎಕರೆಯವರೆಗೆ)** | **2** | **2** | **12** | **5** | **20** |
| | | **ದೊಡ್ಡ (10 ಎಕರೆಗಿಂತ ಹೆಚ್ಚು)** | **–** | **2** | **9** | **8** | **19** |
| | | **ಒಟ್ಟು** | **10** | **11** | **55** | **25** | **100** |

## ಅನುಬಂಧ 4 : ಕರ್ನಾಟಕದಲ್ಲಿ ವಿವಿಧ ವರ್ಗ ಮತ್ತು ಸಾಮಾಜಿಕ ಗುಂಪುಗಳ ರೈತರ ಬೀಳು ಭೂಮಿಯ ಪ್ರಮಾಣ (ಶೇ.)

| ಕ್ರ. ಸಂ. | ವಲಯ | ರೈತರ ವರ್ಗ | ರೈತರ ಸಾಮಾಜಿಕ ಹಿನ್ನೆಲೆ | | | | |
|---|---|---|---|---|---|---|---|
| | | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಹಿಂದುಳಿದ ವರ್ಗ & ಅಲ್ಪ ಸಂಖ್ಯಾತರು | ಸಾಮಾನ್ಯ ವರ್ಗ | ಒಟ್ಟು |
| 1 | **ಹಳೇ ಮೈಸೂರು** | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 75 | 100 | 69 | 62 | 69 |
| | | ಮಧ್ಯಮ (5-10 ಎಕರೆಯವರೆಗೆ) | - | - | 51 | 58 | 53 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | - | 83 | 44 | 60 | 55 |
| | | **ಒಟ್ಟು** | 75 | 85 | 57 | 60 | 60 |
| 2 | **ಮಲೆನಾಡು ಮತ್ತು ಕರಾವಳಿ ಪ್ರದೇಶ** | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 69 | 76 | 66 | 66 | 67 |
| | | ಮಧ್ಯಮ (5-10 ಎಕರೆಯವರೆಗೆ) | 67 | 38 | 48 | 46 | 47 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | - | 100 | 52 | 49 | 53 |
| | | **ಒಟ್ಟು** | 68 | 68 | 57 | 55 | 57 |
| 3 | **ಮಧ್ಯ ಕರ್ನಾಟಕ** | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 100 | 92 | 76 | 57 | 75 |
| | | ಮಧ್ಯಮ (5-10 ಎಕರೆಯವರೆಗೆ) | - | 69 | 100 | - | 81 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | - | 17 | 82 | 60 | 64 |
| | | **ಒಟ್ಟು** | 100 | 60 | 81 | 59 | 71 |
| 4 | **ಮುಂಬೈ ಕರ್ನಾಟಕ** | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 77 | 46 | 39 | 40 | 45 |
| | | ಮಧ್ಯಮ (5-10 ಎಕರೆಯವರೆಗೆ) | 50 | 4 | 47 | 40 | 43 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | 19 | 46 | 38 | 45 | 43 |
| | | **ಒಟ್ಟು** | 52 | 36 | 41 | 44 | 43 |
| 5 | **ಹೈದ್ರಾಬಾದ್ ಕರ್ನಾಟಕ** | ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ) | 44 | 36 | 41 | - | 39 |
| | | ಮಧ್ಯಮ (5-10 ಎಕರೆಯವರೆಗೆ) | 14 | 33 | 37 | 0 | 34 |
| | | ದೊಡ್ಡ (10 ಎಕರೆಗಿಂತ ಹೆಚ್ಚು) | 25 | 12 | 13 | 24 | 14 |
| | | **ಒಟ್ಟು** | 32 | 23 | 20 | 24 | 21 |
| 6 | **ಕರ್ನಾಟಕ** | **ಸಣ್ಣ ಮತ್ತು ಅತಿಸಣ್ಣ (5 ಎಕರೆಯವರೆಗೆ)** | **69** | **53** | **61** | **54** | **59** |
| | | **ಮಧ್ಯಮ (5-10 ಎಕರೆಯವರೆಗೆ)** | **48** | **35** | **47** | **46** | **46** |
| | | **ದೊಡ್ಡ (10 ಎಕರೆಗಿಂತ ಹೆಚ್ಚು)** | **21** | **30** | **30** | **48** | **37** |
| | | **ಒಟ್ಟು** | **54** | **38** | **43** | **49** | **45** |

## ಅನುಬಂಧ ೫ : ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿ ರೈತರು ಭೂಮಿ ಬೀಳು ಬಿಟ್ಟಿರುವ ಅವಧಿ

| ಅವದಿ | ಹಳೆ ಮೈಸೂರು | | | ಮಲೆನಾಡು ಮತ್ತು ಕರಾವಳಿ ಪ್ರದೇಶ | | | ಮಧ್ಯ ಕರ್ನಾಟಕ | | | ಮುಂಬೈ ಕರ್ನಾಟಕ | | | ಹೈದ್ರಾಬಾದ ಕರ್ನಾಟಕ | | | ಕರ್ನಾಟಕ | | |
|---|---|---|---|---|---|---|---|---|---|---|---|---|---|---|---|---|---|---|
| | ಮಳೆ ಆಶ್ರಿತ | ನೀರಾವರಿ | ಒಟ್ಟು | ಮಳೆ ಆಶ್ರಿತ | ನೀರಾವರಿ | ಒಟ್ಟು | ಮಳೆ ಆಶ್ರಿತ | ನೀರಾವರಿ | ಒಟ್ಟು | ಮಳೆ ಆಶ್ರಿತ | ನೀರಾವರಿ | ಒಟ್ಟು | ಮಳೆ ಆಶ್ರಿತ | ನೀರಾವರಿ | ಒಟ್ಟು | ಮಳೆ ಆಶ್ರಿತ | ನೀರಾವರಿ | ಒಟ್ಟು |
| 1 ವರ್ಷಗಳು | 32 | 45 | 36 | 2 | 0 | 1 | 0 | 0 | 0 | 43 | 34 | 42 | 0 | 0 | 0 | **19** | **14** | **18** |
| 2 ವರ್ಷಗಳು | 12 | 5 | 10 | 15 | 10 | 13 | 0 | 0 | 0 | 11 | 1 | 10 | 0 | 0 | 0 | **6** | **1** | **5** |
| 3 ವರ್ಷಗಳು | 9 | 0 | 7 | 8 | 18 | 11 | 0 | 0 | 0 | 7 | 20 | 8 | 0 | 0 | 0 | **4** | **2** | **4** |
| 4 ವರ್ಷಗಳು | 8 | 0 | 6 | 4 | 19 | 8 | 0 | 0 | 0 | 1 | 0 | 1 | 0 | 0 | 0 | **2** | **0** | **1** |
| 5 & 5 ವರ್ಷಕ್ಕಿಂತ ಅಧಿಕ | 39 | 49 | 42 | 72 | 53 | 66 | 100 | 0 | 100 | 38 | 45 | 39 | 100 | 100 | 100 | **69** | **82** | **72** |
| ಒಟ್ಟು | **100** | **100** | **100** | **100** | **100** | **100** | **100** | **0** | **100** | **100** | **100** | **100** | **100** | **100** | **100** | **100** | **100** | **100** |

**ಅನುಬಂಧ 6**

## ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ, 2016
## (Model Agricultural Land Leasing Act, 2016)

### ವರದಿಯ ಸಾರಾಂಶ

- ಕೇಂದ್ರ ಸರ್ಕಾರದ **ನೀತಿ (NITI) ಆಯೋಗವು ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ. ಟಿ.ಹಕ್** ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಭೂಮಿ ಗೇಣಿ ಬಗೆಗಿನ ತಜ್ಞರ ಸಮಿತಿಯು ದಿನಾಂಕ:31.03.2016 ರಂದು ಮಾದರಿ ಕೃಷಿ ಭೂಮಿ ಗೇಣಿ ಅಧಿನಿಯಮ, 2016ನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಮಾದರಿ ಅಧಿನಿಯಮವು ಭೂರಹಿತರಿಗೆ ಮತ್ತು ಅತೀ ಸಣ್ಣ ರೈತರಿಗೆ ಭೂಮಿಯನ್ನು ಹೊಂದಲು ಅವಕಾಶವಾಗುವ ರೀತಿಯಲ್ಲಿ ಭೂಮಿ ಗೇಣಿಯನ್ನು ಸುಲಭಗೊಳಿಸುವ ಹಾಗೂ ಸಾಧ್ಯಮಾಡಿಕೊಡುವ ಪ್ರಯತ್ನವನ್ನು ಮಾಡಿದೆ. ಈ ಅಧಿನಿಯಮವು ಭೂಮಿ ಗೇಣಿ ಪಡೆದ ರೈತರನ್ನು ಮಾನ್ಯ ಮಾಡಿ ಅವರುಗಳಿಗೆ ಸಾಂಸ್ಥಿಕ ಸಾಲವನ್ನು ಪಡೆಯಲು ಸಾಧ್ಯ ಮಾಡಿಕೊಡುತ್ತದೆ.

- **ವಿವರಣೆ:** "ಗೇಣಿ" (Lease) ಎಂದರೆ ಭೂಮಿಯ ಮಾಲೀಕ ಹಾಗೂ ಸಾಗುವಳಿದಾರನ ನಡುವಿನ ಒಪ್ಪಂದವಾಗಿರುತ್ತದೆ. ಸಾಗುವಳಿದಾರನು ಭೂ ಮಾಲೀಕನ ಜಮೀನನ್ನು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗಾಗಿ ಪರಸ್ಪರ ಒಪ್ಪಂದ ಮಾಡಿಕೊಂಡ ನಿರ್ದಿಷ್ಟ ಅವಧಿಯ ವರೆಗೆ ಬಳಸುತ್ತಾನೆ. "ಗೇಣಿ ಪಡೆದ" ಅಂದರೆ ಭೂ ಮಾಲೀಕನಿಂದ (ಯಾರು ಭೂಮಿಯನ್ನು ಗೇಣಿ ಕೊಡುತ್ತಾರೋ ಅವರು) ಭೂಮಿಯನ್ನು ಬಳಕೆಗೆ ತೆಗೆದುಕೊಳ್ಳಲಾಗಿರುತ್ತದೆ ಎಂದು ಅರ್ಥೈಸಬೇಕು.

- **ಭೂಮಿ ಗೇಣಿ ಒಪ್ಪಂದ:** ಭೂ ಮಾಲೀಕ ಮತ್ತು ಸಾಗುವಳಿದಾರನು ಮಾಡಿಕೊಳ್ಳುವ ಒಪ್ಪಂದವು ಈ ಅಂಶಗಳನ್ನು ಹೊಂದಿರುತ್ತದೆ – i) ಗೇಣಿಗೆ ನೀಡಿದ ಜಮೀನಿನ ಪ್ರದೇಶ ಮತ್ತು ವಿಸ್ತೀರ್ಣ, ii) ಗೇಣಿಯ ಅವದಿ, iii) ಗೇಣಿಯ ಮೊತ್ತ ಮತ್ತು ಅ ಮೊತ್ತವನ್ನು ಯಾವ ದಿನಾಂಕದೊಳಗೆ ಸಂದಾಯ ಮಾಡಬೇಕು, ಮತ್ತು ಊ) ಈ ಗೇಣಿ ಒಪ್ಪಂದವನ್ನು ಪುನರ್‌ನವೀಕರಿಸಲು ಅಥವಾ ವಿಸ್ತರಿಸಲು ಹಾಕಿಕೊಳ್ಳುವ ಷರತ್ತುಗಳು ಮತ್ತು ನಿಬಂಧನೆಗಳು. ಗೇಣಿ ಅವದಿ ಮತ್ತು ಗೇಣಿ ಮೊತ್ತವು ಭೂ ಮಾಲೀಕ ಮತ್ತು ಸಾಗುವಳಿದಾರನು ಮಾಡಿಕೊಂಡ ಪರಸ್ಪರ ಒಪ್ಪಂದದ ಪ್ರಕಾರ ಇರುತ್ತದೆ, ಜೊತೆಗೆ, **"ಗೇಣಿ ಒಪ್ಪಂದವು ಸಾಗುವಳಿದಾರನಿಗೆ ಯಾವುದೆ ರೀತಿಯ ಸಾಗುವಳಿ ಹಕ್ಕಿನ ರಕ್ಷಣೆಯನ್ನು ನಿಡುವುದಿಲ್ಲ."** ಗೇಣಿ ಒಪ್ಪಂದವನ್ನು ಪರಸ್ಪರರು ಒಪ್ಪಿಕೊಳ್ಳುವ ಪ್ರಕಾರ ನೊಂದಾಯಿಸಬಹುದು ಅಥವಾ ನೊಂದಯಿಸದೆ ಮೌಖಿಕ ರೂಪದಲ್ಲೂ ಇರಬಹುದು ಮತ್ತು ಈ ಒಪ್ಪಂದವು ಭೂಮಿ ಹಕ್ಕಿನ ಯಾವುದೇ ದಾಖಲೆಗಳಲ್ಲಿ ನಮೂದಿಸಲ್ಪಡುವುದಿಲ್ಲ.

- **ಗೇಣಿ ಒಪ್ಪಂದದ ಜಾರಿ:** ತಾಲ್ಲೂಕಿನ ತಹಸೀಲ್ದಾರ್ ಅಥವಾ ಇದೇ ಶ್ರೇಣಿಯ ಒಬ್ಬ ಕಂದಾಯ ಅಧಿಕಾರಿಯು i) ಗೇಣಿ ಒಪ್ಪಂದದ ಷರತ್ತು ಮತ್ತು ನಿಬಂದನೆಗಳನ್ನು ಜಾರಿಗೊಳಿಸಲು ಮತ್ತು ii) ಗೇಣಿಯ ಅವದಿಯು ಮುಗಿದ ನಂತರ ಗೇಣಿ ಕೊಟ್ಟ ಜಮೀನನ್ನು ಅದರ ಮಾಲೀಕನಿಗೆ ಹಿಂತಿರುಗಿಸುವ ಅಧಿಕಾರವನ್ನು ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ

- ಭೂ ಮಾಲೀಕನ ಹಕ್ಕುಗಳು ಮತ್ತು ಜವಾಬ್ದಾರಿಗಳು: ಭೂ ಮಾಲೀಕನು ಗೇಣಿ ಒಪ್ಪಂದದ ಮೊದಲ ದಿವಸವೇ ಸಾಗುವಳಿದಾರನಿಗೆ ಭೂಮಿಯನ್ನು ಬಿಟ್ಟುಕೊಡುತ್ತಾನೆ. ಅವನು ಗೇಣಿ ಅವದಿಯು ಮುಗುದ ಕೂಡಲೇ ಭೂಮಿಯನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ. ಅತನು ಗೇಣಿಗಾಗಿ ನೀಡಿದ ಜಮೀನನ್ನು ಮಾರಾಟ ಮಾಡಬಹುದು, ದಾನ ಮಾಡಬಹುದು, ಅಡಮಾನ ಇಡಬಹುದು. ಅದರೆ, ಈ ಹಕ್ಕು ಸಾಗುವಳಿದಾರನು ಗೇಣಿಗೆ ಪಡೆದ ಜಮೀನನ್ನು

ಅವದಿ ಮುಗಿಯುವರೆಗೆ ಸಾಗುವಳಿ ಮಾಡುವ ಅವಕಾಶಕ್ಕೆ ಕುಂದು ಉಂಟುಮಾಡಬಾರದು. **"ಭೂ ಮಾಲೀಕನು ಜಮೀನಿಗೆ ಸಂಬಂಧಪಟ್ಟ ಎಲ್ಲ ತೆರಿಗೆಗಳನ್ನು ಮತ್ತು ಸುಂಕಗಳನ್ನು ಕಟ್ಟುವ ಜವಾಬ್ದಾರಿಯನ್ನು ಹೊಂದಿರುತ್ತಾನೆ"**.

- **ಸಾಗುವಳಿದಾರನ ಹಕ್ಕುಗಳು ಮತ್ತು ಜವಾಬ್ದಾರಿಗಳು:** ಗೇಣಿಗೆ ಪಡೆದ ಜಮೀನನ್ನು ಸಾಗುವಳಿದಾರನು ಅವದಿಯು ಮುಗಿಯುವರೆಗೆ ನಿರ್ಬಾಧಿತವಾಗಿ ಬಳಕೆ ಮಾಡುವ ಹಕ್ಕನ್ನು ಹೊಂದಿರುತ್ತಾನೆ. ಅತನು ಜಮೀನನ್ನು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸುವ ಹಕ್ಕನ್ನು ಹೊಂದಿರುತ್ತಾನೆ ಮತ್ತು ಈ ಜಮೀನನ್ನು ಉಪ ಗೇಣಿಗೆ ಅಥವಾ ಅಡಮಾನಕ್ಕೆ ನೀಡುವ ಹಾಗಿರುವುದಿಲ್ಲ. ಇದರ ಫಲವತ್ತತೆ ನಾಶಮಾಡುವಂತಿಲ್ಲ ಸಾಗುವಳಿದಾರನು ಸದರಿ ಭೂಮಿಯನ್ನು ಅಡಮಾನ ಮಾಡದೇ ನಿರೀಕ್ಷಿತ ಉತ್ಪನ್ನದ ಮೌಲ್ಯದ ಆಧಾರದ ಮೇಲೆ ಬ್ಯಾಂಕುಗಳಿಂದ ಮತ್ತು ಇತರ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯಲು ಅರ್ಹನಾಗಿರುತ್ತಾನೆ. ಅವನು **"ಗೇಣಿ ಪಡೆದ ಭೂಮಿಯಲ್ಲಿ ಯಾವುದೇ ಸುಧಾರಣೆಯನ್ನು ಮಾಡಿದ ಪಕ್ಷದಲ್ಲಿ ಅದಕ್ಕಾಗಿ ಭೂ ಮಾಲೀಕನಿಂದ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ."** ಸಾಗುವಳಿದಾರನು ಗೇಣಿ ಅವದಿಗೆ ಮುಂಚಿತವಾಗಿಯೇ ಭೂಮಿಯನ್ನು ಭೂ ಮಾಲೀಕನಿಗೆ ಹಿಂತಿರುಗಿಸುವ ಅಧಿಕಾರವನ್ನೂ ಸಹ ಹೊಂದಿರುತ್ತಾನೆ.

- **ಗೇಣಿಯನ್ನು ರದ್ದುಗೊಳಿಸುವುದು:** ಗೇಣಿ ಒಪ್ಪಂದವನ್ನು ಈ ಕಾರಣಗಳಿಗಾಗಿ ರದ್ದುಗೊಳಿಸಬಹುದಾಗಿದೆ: i) ಸಾಗುವಳಿದಾರನು ಗೇಣಿ ಮೊತ್ತವನ್ನು ಅವದಿಯು ಮೀರಿದ ಮೇಲೆ ನೀಡಲಾಗುವ ಮೂರು ತಿಂಗಳ ಅವಕಾಶದ ನಂತರವೂ ಕಟ್ಟದ್ದಿದ ಪಕ್ಷದಲ್ಲಿ, ii) ಒಪ್ಪಂದದಲ್ಲಿ ನಿರ್ದಿಷ್ಟಪಡಿಸಲಾದ ಅಂಶಗಳಿಗೆ ಹೊರತಾಗಿ ಇತರ ಕಾರಣಗಳಿಗೆ ಭೂಮಿಯನ್ನು ಉಪಯೋಗಿಸಿದ ಪಕ್ಷದಲ್ಲಿ, iii) ಭೂಮಿಯನ್ನು ಉಪ ಗೇಣಿಗೆ ನೀಡಿದರೆ ಅಥವಾ ಹಾನಿಗೊಳಿಸಿದ ಪಕ್ಷದಲ್ಲಿ ಗೇಣಿಯ ಒಪ್ಪಂದವು ರದ್ದಾಗುತ್ತದೆ.

- **ವ್ಯಾಜ್ಯ ಪರಿಹಾರ:** ಸಾಗುವಳಿದಾರನು ಮತ್ತು ಭೂ ಮಾಲೀಕನು ತಮ್ಮೊಳಗೆ ಉಂಟಾಗುವ ವ್ಯಾಜ್ಯವನ್ನು ಪರಿಹಾರ ಮಾಡಲು ಗ್ರಾಮ ಸಭೆ, ಗ್ರಾಮ ಪಂಚಾಯಿತಿ ಅಥವಾ ಮೂರನೆಯ ವ್ಯಕ್ತಿಯ ಮಧ್ಯಸ್ಥಿಕೆಯನ್ನು ಹೊಂದಬಹುದಾಗಿದೆ. ಮೂರನೆಯ ವ್ಯಕ್ತಿಯಿಂದ ಅಥವಾ ಸಂಸ್ಥೆಯಿಂದ ವ್ಯಾಜ್ಯವನ್ನು ಪರಿಹರಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಭೂ ಮಾಲೀಕನೇ ಅಗಲಿ ಅಥವಾ ಸಾಗುವಳಿದಾರನೇ **ಅಗಲಿ ತಹಸೀಲ್ದಾರ್ ಅಥವಾ ಇದೇ ಶ್ರೇಣಿಯ ಒಬ್ಬ ಕಂದಾಯ ಅಧಿಕಾರಿಯ** ಮುಂದೆ ದೂರನ್ನು ಸಲ್ಲಿಸಬಹುದಾಗಿದೆ. ಈ ಅಧಿಕಾರಿಯು ವ್ಯಾಜ್ಯವನ್ನು ನಾಲ್ಕು ವಾರಗಳ ಒಳಗೆ ಇತ್ಯರ್ಥ ಪಡಿಸಬೇಕಾಗುತ್ತದೆ. ಒಂದು ವೇಳೆ ಇತ್ಯರ್ಥ ಪಡಿಸಲಾಗದಿದ್ದರೆ, ದೂರನ್ನು ಜಿಲ್ಲಾಧಿಕಾರಿ ಅಥವಾ ಜಿಲ್ಲಾ ದಂಡಾಧಿಕಾರಿಗೆ ಸಲ್ಲಿಸಬಹುದಾಗಿದೆ.

- **ವಿಶೇಷ ಭೂ ನ್ಯಾಯಾಲಯ:** ರಾಜ್ಯ ಸರ್ಕಾರಗಳು **ವಿಶೇಷ ಭೂ ನ್ಯಾಯಾಲಯ** (Tribunal) ವನ್ನು ರಚಿಸಬಹುದಾಗಿದ್ದು, ಮಾದರಿ ಅದಿನಿಯಮದ ಅನ್ವಯ ಉಂಟಾಗುವ ಎಲ್ಲಾ ವ್ಯಾಜ್ಯಗಳನ್ನು ಸಹ ಈ ನ್ಯಾಯಾಲಯಗಳ ಮೂಲಕ ಅಂತಿಮ್ಮ ಗೊಳಿಸಬಹುದಾಗಿದೆ. ಈ ನ್ಯಾಯಾಲಯಕ್ಕೆ **ಒಬ್ಬ ನಿವೃತ್ತ ಮುಖ್ಯ ನ್ಯಾಯಾಲಯದ ನ್ಯಾಯಾಧೀಶರು** ಅಥವಾ ಜಿಲ್ಲಾ ನ್ಯಾಯಾಧೀಶರನ್ನು ಮುಖ್ಯಸ್ಥರನ್ನಾಗಿ ನೇಮಿಸಬಹುದಾಗಿದೆ. ಮಾದರಿ ಅದಿನಿಯಮದ ಅನ್ವಯ ಯಾವ ಸಿವಿಲ್ ನ್ಯಾಯಾಲಯಗಳು ಸಹ ಈ ವ್ಯಾಜ್ಯಗಳಲ್ಲಿ ಮದ್ಯಪ್ರವೇಶಿಸುವಂತಿಲ್ಲ.

- **ರಿಪೀಲ್‌ಗಳು ಮತ್ತು ಉಳಿತಾಯಗಳು:** ಮಾದರಿ ಅದಿನಿಯಮದಲ್ಲಿ ಇರುವ ಅವಕಾಶಗಳು ಈ ಅದಿನಿಯಮಗಳು ಜಾರಿಗೆ ಬರುವ ದಿವಸದವರೆಗೂ ಜಾರಿಯಲ್ಲಿದ್ದ ಸಂಬಂಧಿತ ಇತರ ಎಲ್ಲಾ ನಿಯಮಗಳನ್ನು ಸಹ ರದ್ದುಗೊಳಿಸುತ್ತದೆ. ಜಾರಿಯಲ್ಲಿದ್ದ ನಿಯಮದಡಿ ಇನ್ನೂ ಬಾಕಿ ಇದ್ದ ವ್ಯಾಜ್ಯಗಳು ಮಾತ್ರ ಅ ನಿಯಮದ ಪ್ರಕಾರವೇ ಪರಿಹಾರ ಗೊಳ್ಳಬೇಕಾಗುತ್ತದೆ. ಈ ಮಾದರಿ ಅದಿನಿಯಮವು ಹಿಂದಿನ ದಿನಾಂಕಗಳಿಗೆ ಅನ್ವಹಿಸುವುದಿಲ್ಲ.

PRS LEGISLATIVE RESEARCH 10 years PRS

# Report Summary

## Model Agricultural Land Leasing Act, 2016

- The Expert Committee on Land Leasing (Chair: Dr. T. Haque), constituted under the NITI Aayog submitted the model Agricultural Land Leasing Act, 2016 on March 31, 2016. The model Act seeks to permit and facilitate leasing of agricultural land to improve access to land by the landless and marginal farmers. It also provides for recognition of farmers cultivating on leased land to enable them to access loans through institutional credit.
- **Definitions:** 'Lease' is defined as a contract between the land owner and cultivator, who uses the land owner's land for agriculture and allied activities for a mutually agreed specified period. 'Leasing in' means taking land from an owner (who is leasing out his land) for use.
- **Land lease agreement:** The lease agreement between the land owner and cultivator will include information pertaining to: (i) the location and area of leased out land, (ii) the duration of lease, (iii) the lease amount and the due date by which it has to be paid, and (iv) terms and conditions for the renewal or extension of lease. The lease period and lease amount will be based on a mutual agreement between the land owner and cultivator. Additionally, the lease agreement will not confer any protected tenancy right on a cultivator. The lease agreement may or may not be registered (as mutually agreed), and will also not be entered into any record of rights.
- **Enforcement of lease agreement:** The tahsildar or a revenue officer of equal rank will be responsible for, (i) enforcement of terms of lease, and (ii) facilitating return of the leased out agricultural land to the owner on expiry of the lease period.
- **Rights and responsibilities of land owner:** The land owner will give possession of the leased-out land to the cultivator on the first day of the lease. He will be entitled to automatic possession of the land on the expiry of the agreed lease period. He can put the leased out land for use such as sale, gift, mortgage, etc. However, this should not affect the cultivator's right to cultivate the land till the end of the lease period. He will also be responsible to pay all taxes and cess on the land.
- **Rights and responsibilities of cultivator:** The cultivator, to whom the land has been leased out, will be entitled to an undisturbed possession and use of this land. He can use the land only for agriculture and allied activities. Further, he cannot sub-lease or mortgage the land. He will be eligible to raise loans from banks and other financial institutions without mortgaging the leased in land. He will be entitled for compensation from landowner for any improvements or fixtures that he makes on this land. He will also have the right to surrender land to the land owner within a time period as specified in the lease agreement.
- **Termination of lease:** The lease agreement may be terminated on grounds including: (i) failure of cultivator to pay the lease amount after a grace period of three months, (ii) use of land for purposes other than those specified in the agreement, (iii) sub-leasing of land or damage caused to it by the cultivator.
- **Dispute resolution:** The cultivator and the owner can settle disputes between them using third party mediation, or gram panchayat, or gram sabha. If the dispute cannot be settled by third party mediation, either the landowner or the cultivator can file a petition before the Tahsildar, or an equal rank revenue officer. He will have to adjudicate the dispute within four weeks. In such cases, an appeal can also be made to the collector or district magistrate.
- **Special Land Tribunal:** State governments will constitute a special Land Tribunal, which will be the final authority to adjudicate disputes under the model Act. It will be headed by a retired high court or district court judge. No civil courts will have jurisdiction over disputes under the model Act.
- **Repeals and savings:** The provisions of the model Act will override any other law in force on the concerned subject from the date of its coming into force. Cases pending under any other law in force will be governed by the provisions of that particular law. The model Act will not have any retrospective effect.

facebook/vijaykarnataka twitter/vijaykarnataka www.vijaykarnatakaepaper.com ಮಂಗಳವಾರ,21 ಫೆಬ್ರವರಿ 2017, ಬೆಂಗಳೂರು | 05

ರಿನಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ
ರ್ಕಾರಿ ಶಾಲೆ ಮುಖ್ಯಸ್ಥರ ಬಂಧನ: ಪೋಷಕರ
ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶಾಲೆ ಬಂದ್

ಮಹಾಶಿವರಾತ್ರಿಗೆ ಕೆಎಸ್ಆರ್‌ಟಿಸಿಯಿಂದ
450 ಹೆಚ್ಚುವರಿ ಬಸ್ ಸಂಚಾರ

ರಾಜ್ಯ STATE

# ಭೂಮಿಗೂ ಬರಲಿದೆ ಲೀಸ್ ಭಾಗ್ಯ: ಕೃಷ್ಣ ಬೈರೇಗೌಡ

■ **ವಿಕ ಸುದ್ದಿಲೋಕ** ಬೆಂಗಳೂರು

ನೀರಾವರಿ ಸೌಲಭ್ಯವಿಲ್ಲದೆ ಪಾಳು ಬಿದ್ದಿರುವ ಒಣ ಭೂಮಿಯನ್ನು ರೈತರು ಗುತ್ತಿಗೆ ನೀಡುವ ಮೂಲಕ ಆದಾಯ ಗಳಿಸುವ ಅವಕಾಶವಿರುವ ಪ್ರಸ್ತಾವನೆಯನ್ನು ಕೇಂದ್ರದ ನೀತಿ ಆಯೋಗ ರಾಜ್ಯ ಸರಕಾರದ ಮುಂದಿಟ್ಟಿದ್ದು, ಇದರ ಸಾಧಕ-ಬಾಧಕಗಳ ಬಗ್ಗೆ ತಜ್ಞರು ಹಾಗೂ ರೈತ ಮುಖಂಡರ ಜತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಕರ್ನಾಟಕ ಕೃಷಿ ಬೆಲೆ ಆಯೋಗವು ನಗರದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆಯ ಪ್ರಾರಂಭಿಕ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

''ರಾಜ್ಯದಲ್ಲಿ ಸುಮಾರು 15 ಲಕ್ಷ ಹೆಕ್ಟೇರ್‌ನಷ್ಟು ಜಮೀನು ಖಾಲಿ ಇದೆ ಎಂದು ಅಂದಾಜಿಸಲಾಗಿದೆ. ವ್ಯರ್ಥವಾಗಿರುವ ಕೃಷಿ ಭೂಮಿಯನ್ನು ಉತ್ಪಾದಕತೆಯ ಭೂಮಿಯನ್ನಾಗಿ ಮಾಡಬೇಕೆಂಬುದು ಕೇಂದ್ರ ಸರಕಾರ ಹಾಗೂ ನೀತಿ ಆಯೋಗದ ಮುಖ್ಯ ಉದ್ದೇಶ. ಹೀಗೆ, ಜಮೀನನ್ನು ಗುತ್ತಿಗೆ ನೀಡುವುದರಿಂದ ರೈತರ ಭೂಮಿ ಮೇಲಿನ ಹಕ್ಕಿಗೆ ಯಾವುದೇ ಬಾಧಕವಿಲ್ಲ'' ಎಂದು ಸ್ಪಷ್ಟಪಡಿಸಿದರು.



ಬೆಂಗಳೂರಿನಲ್ಲಿ ಸೋಮವಾರ ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆಯ ಪ್ರಾರಂಭಿಕ ಕಾರ್ಯಾಗಾರದಲ್ಲಿ ಕೃಷಿ ಮತ್ತು ಆಹಾರ ನೀತಿ ವಿಮರ್ಶಕ ಡಾ. ದೇವೇಂದ್ರ ಶರ್ಮ, 'ಐಸೆಕ್'ನ ಅಧ್ಯಕ್ಷ ಡಾ.ಎ. ರವೀಂದ್ರ, ಸಚಿವ ಕೃಷ್ಣ ಬೈರೇಗೌಡ, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಉಪಸ್ಥಿತರಿದ್ದರು.

**ಕಂಪನಿಗಳಿಗೆ ಕೊಡುವ ಉದ್ದೇಶ ಇಲ್ಲ:** ''ರೈತರಿಂದ ಪಡೆಯುವ ಒಣ ಭೂಮಿಯನ್ನು ಕೃಷಿ ಮಾಡುವಂತಹ ಸಾಮರ್ಥ್ಯವಿರುವ ರೈತರಿಗೇ ಕೊಡಲು ಅವಕಾಶವಿದೆ. ಕಂಪನಿಗಳಿಗೆ ಕೊಡುವ ಪ್ರಸ್ತಾವ ಸರಕಾರದ ಮುಂದಿಲ್ಲ, ಸದ್ಯಕ್ಕೆ ರೈತರಿಂದ ಭೂಮಿಯನ್ನು ಗುತ್ತಿಗೆ ಪಡೆಯಲು ಕಾನೂನಿನಲ್ಲಿ ಅವಕಾಶ ಇಲ್ಲ, ಇದು ಭೂಸುಧಾರಣಾ ಚಳವಳಿಯ ಧ್ಯೇಯಕ್ಕೆ ವಿರುದ್ಧವಾದುದು ಕೂಡ. ಈ ಹಿನ್ನೆಲೆಯಲ್ಲಿ ಭೂ ಕಂದಾಯ ಕಾಯಿದೆಗೆ ತಿದ್ದುಪಡಿ ತರಬೇಕಾಗುತ್ತದೆ. ಹೀಗಾಗಿ, ಈ ಯೋಜನೆ ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ಸರಕಾರ ಯಾವುದೇ ತೀರ್ಮಾನ ಕೈಗೊಂಡಿಲ್ಲ,'' ಎಂದು ಸಚಿವರು ತಿಳಿಸಿದರು.

**ಕೈಗಾರಿಕೆಗಳಿಗೆ ನೀಡುವ ಉದ್ದೇಶದಿಂದಲೇ ಕೇಂದ್ರ ಸರಕಾರ ರೈತರ ಜಮೀನನ್ನು ಗುತ್ತಿಗೆ ಪಡೆಯಲು ಹೊರಟಿದೆ. ಇದು ರೈತರ ಕಣ್ಣೊರೆಸುವ ತಂತ್ರ. ಕೈಗಾರಿಕೆಗಳಿಗೆ 1 ರೂ. ಲೀಸ್ ಆಧಾರದಲ್ಲಿ ಚದರ ಮೀಟರ್ ಜಾಗ ಕೊಡುವ ಸರಕಾರ, ಅದೇ ಭೂಮಿಯನ್ನು ಅದೇ ದರದಲ್ಲಿ ರೈತರಿಗೆ ಕೊಡಲಿ. ಸ್ಮಾರ್ಟ್ ಸಿಟಿಗಳ ಬದಲು ಸ್ಮಾರ್ಟ್ ವಿಲೇಜ್‌ಗಳನ್ನು ಅಭಿವೃದ್ಧಿಪಡಿಸಲಿ. ಆಗ ನಗರ ಪ್ರದೇಶಗಳ ಜನ ಗ್ರಾಮೀಣ ಪ್ರದೇಶಗಳಿಗೇ ವಲಸೆ ಹೋಗುತ್ತಾರೆ.**

**- ಡಾ. ದೇವೇಂದ್ರ ಶರ್ಮ, ಕೃಷಿ ಮತ್ತು ಆಹಾರ ನೀತಿ ವಿಮರ್ಶಕ**

**ಗುಂಪು ಕೃಷಿಗೂ ಅವಕಾಶ:**

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ, ''ಕೇಂದ್ರ ಸರಕಾರದ ಮಾದರಿ ಗುತ್ತಿಗೆ ಭೂಮಿ ಕಾಯಿದೆಯ ಪ್ರಸ್ತಾವನೆ ಹಿನ್ನೆಲೆಯಲ್ಲಿ ರಾಜ್ಯದ 20 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲಾಗಿದ್ದು, ರೈತರು ಕೃಷಿ ತೊರೆಯಲು ಕಾರಣ ಏನೆಂಬುದರ ಬಗ್ಗೆ ಕಾರಣಸಹಿತ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಯೋಜನೆಯನ್ವಯ ರೈತರು ಗುತ್ತಿಗೆ ನೀಡಲು ಒಪ್ಪದಿದ್ದರೆ ಗುಂಪು ಕೃಷಿ ಮಾಡಲು ಕೂಡ ಅವಕಾಶವಿದೆ,'' ಎಂದರು.

ಕೃಷಿ ಹಾಗೂ ಆಹಾರ ನೀತಿ ವಿಮರ್ಶಕ ಡಾ. ದೇವೇಂದ್ರ ಶರ್ಮ, ಐಸೆಕ್‌ನ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎ. ರವೀಂದ್ರ, ಕೃಷಿ ಬೆಲೆ ಆಯೋಗದ ಸದಸ್ಯ ಹನುಮನಗೌಡ ಬೆಳಗುರ್ಕಿ, ಧಾರವಾಡ ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ.ಎಂ. ಮಹದೇವಪ್ಪ, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಡಾ. ಗಾಣಗಿ, ರೈತ ಮುಖಂಡರಾದ ಮಾರುತಿ ಮಾನ್ಪಡೆ, ಕುರುಬೂರು ಶಾಂತಕುಮಾರ್, ಸುನಂದಾ ಜಯರಾಂ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

08 | ವಿಜಯ ಕರ್ನಾಟಕ VK

## 2016ರ ಕೇಂದ್ರ ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ ಕುರಿತು ಚರ್ಚೆ

# ರಾಜ್ಯದಲ್ಲಿ 21 ಲಕ್ಷ ಹೆಕ್ಟೇರ್ ಬೀಳುಭೂಮಿ: ಕಮ್ಮರಡಿ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ 21 ಲಕ್ಷ ಹೆಕ್ಟೇರ್‌ನಷ್ಟು ಭೂಮಿ ಬೀಳು ಬಿದ್ದಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ ಹೇಳಿದ್ದಾರೆ.

ಕೇಂದ್ರ ಸರಕಾರವು ಜಾರಿಗೆ ತರಲು ಉದ್ದೇಶಿಸಿರುವ 2016ರ ಕೃಷಿಭೂಮಿ ಗೇಣಿ ಮಾದರಿ ಅಧಿನಿಯಮದ ಬಗ್ಗೆ ಚರ್ಚಿಸಲು ಆಯೋಗದ ಕಚೇರಿಯಲ್ಲಿ ಗುರುವಾರ ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು ''ರಾಜ್ಯದಲ್ಲಿ ದೊಡ್ಡ ರೈತರು ಮಾತ್ರವಲ್ಲದೆ, ಮಧ್ಯಮ ಹಾಗೂ ಸಣ್ಣ ರೈತರೂ ಜಮೀನನ್ನು ಬೀಳು ಬಿಡುವ ಪ್ರವೃತ್ತಿ ಕಳೆದ 10 ವರ್ಷಗಳಿಂದ ಹೆಚ್ಚಾಗಿದೆ. ಇದಕ್ಕೆ ನೀರಿನ ಕೊರತೆ, ಅಂತರ್ಜಲ ಕುಸಿತ, ಕೂಲಿಕಾರರ ಅಭಾವ ಮತ್ತು ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಹಾಗೂ ಬೆಲೆ ಸಿಗದೆ ಇರುವುದು ಪ್ರಮುಖ ಕಾರಣಗಳಾಗಿವೆ'' ಎಂದು ವಿವರಿಸಿದರು.

''ರಾಜ್ಯದಲ್ಲಿ 130 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವ್ಯವಸಾಯ ಮಾಡಲಾಗುತ್ತಿದೆ. ಹೆಚ್ಚು ಮಳೆ ಬರುವ ಮಲೆನಾಡು ಮತ್ತು ಕರಾವಳಿ ಭಾಗಗಳಲ್ಲೂ ಈ ಸಮಸ್ಯೆ ಬೃಹದಾಕಾರವಾಗಿದೆ. ಹೀಗೆ ಭೂಮಿ ಬೀಳು ಬಿಡುವುದನ್ನು ತಪ್ಪಿಸಲೆಂದೇ ಬರಡು ನೆಲದಲ್ಲೂ ಬೆಳೆಯುವ ಹೆಬ್ಬೇವನ್ನು ಹೆಚ್ಚಾಗಿ ಪ್ರೋತ್ಸಾಹಿಸಲಾಗುತ್ತಿದೆ. ಇದರಿಂದ ರೈತರಿಗೆ ಆರ್ಥಿಕ ಚೈತನ್ಯ ಸಿಗುತ್ತದೆ. ಜತೆಗೆ ಕೇಂದ್ರ ಸರಕಾರವು ನೀತಿ ಆಯೋಗದ ಮೂಲಕ '2016ರ ಕೃಷಿಭೂಮಿ ಗೇಣಿ ಮಾದರಿ ನಿಯಮ'ವನ್ನು ರೂಪಿಸಿದೆ. ಇದರ ಬಗ್ಗೆ ರಾಜ್ಯ ಸರಕಾರವೂ ಆಸಕ್ತಿ ಹೊಂದಿದೆ'' ಎಂದು ಕಮ್ಮರಡಿ ಪ್ರತಿಪಾದಿಸಿದರು.

''ಒಂದು ಹೆಕ್ಟೇರ್ ಜಮೀನನ್ನು ಖಾಲಿ ಬಿಟ್ಟರೆ ಅದರಿಂದ ವರ್ಷಕ್ಕೆ 36 ಸಾವಿರ ರೂ. ನಷ್ಟವಾಗುತ್ತದೆ. ಈಗ ರಾಜ್ಯದಲ್ಲಿ ಬೀಳು ಬಿದ್ದಿರುವ ಜಮೀನಿನಿಂದ ಬೊಕ್ಕಸಕ್ಕೆ 8,000 ಕೋಟಿ ರೂ.ಗೂ ಹೆಚ್ಚು ನಷ್ಟವಾಗುತ್ತಿದೆ. ಇಷ್ಟೂ ಜಮೀನಿನಲ್ಲಿ ಮತ್ತೆ ವ್ಯವಸಾಯ ಆರಂಭವಾದರೆ ರಾಜ್ಯದ ಒಟ್ಟು ನಿವ್ವಳ ಉತ್ಪಾದನೆಯು ಶೇ.2.5ರಷ್ಟು ಹೆಚ್ಚಲಿದೆ. ಈ ಮಹತ್ವವನ್ನು ಎಲ್ಲರೂ ಮನಗಾಣಬೇಕು'' ಎಂದು ಅವರು ಸೂಚಿಸಿದರು.



ಬೆಂಗಳೂರಿನಲ್ಲಿ ಗುರುವಾರ ಕೇಂದ್ರದ ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ ಕುರಿತ ಚರ್ಚೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ, ರಾಜ್ಯದ ನಾನಾ ರೈತ ಮುಖಂಡರು ಭಾಗವಹಿಸಿದ್ದರು.

**ರೈತ ಪ್ರತಿನಿಧಿಗಳ ಆತಂಕ:** ರೈತ ಸಂಘದ ಮುಖಂಡ ಕೆ.ಟಿ ಗಂಗಾಧರ್ ಮಾತನಾಡಿ ''ಬೀಳುಭೂಮಿಯಲ್ಲಿ ವ್ಯವಸಾಯ ಆಗಬೇಕೆಂಬ ಆಶಯ ಒಳ್ಳೆಯದೇ ಆಗಿದೆ. ಆದರೆ ಈ ಅಧಿನಿಯಮದಲ್ಲಿ ಕೂಲಿಕಾರರ ಸಮಸ್ಯೆ, ಮಣ್ಣಿನ ಫಲವತ್ತತೆ, ಬೆಲೆ ಮತ್ತು ಮಾರುಕಟ್ಟೆಗಳ ಬಗ್ಗೆ ಪ್ರಸ್ತಾಪವಿಲ್ಲ. ಇದು ಅನೇಕ ಅನುಮಾನಗಳಿಗೆ ದಾರಿ ಮಾಡಿಕೊಡುವಂಥದ್ದು'' ಎಂದರು.

ಕುರುಬೂರು ಶಾಂತಕುಮಾರ್ ಮಾತನಾಡಿ ''ಸಕ್ಕರೆ ಕಾರ್ಖಾನೆಗಳ ಮಾಲೀಕರು ಈಗಾಗಲೇ ಅನಧಿಕೃತವಾಗಿ ಭೂಮಿಯನ್ನು ಗೇಣಿ ಪಡೆಯುವ ಪ್ರವೃತ್ತಿ ಚಾಲ್ತಿಗೆ ಬಂದಿದೆ. ಅಂತಿಮವಾಗಿ ಈ ನಿಯಮ ರೈತಮಕ್ಕಳ ಹಿತವನ್ನು ಕಾಪಾಡಬೇಕು'' ಎಂದರು.

ಮಾರುತಿ ಮಾನ್ಪಡೆ ಮಾತನಾಡಿ ''ರಾಜ್ಯದಲ್ಲಿ ಬೇನಾಮಿ ಭೂ ಮಾಲೀಕರ ಹಾವಳಿ ಮಿತಿ ಮೀರಿದೆ. ಇದನ್ನು ಶಾಸನದ ಮೂಲಕ ಹತ್ತಿಕ್ಕಬೇಕಾದ ಕೆಲಸ ಆಗಬೇಕಿದೆ. ಈ ಅಧಿನಿಯಮವನ್ನು ಜಾರಿಗೆ ತಂದಲ್ಲಿ ರೈತರು ತಮ್ಮ ಜಮೀನಿನ ಮಾಲೀಕತ್ವ ಕಳೆದುಕೊಳ್ಳುವ ಭೀತಿ ಎದುರಾಗಲಿದೆ,'' ಎಂದರು. ರೈತ ಮುಖಂಡರಾದ ಸುನಂದಾ ಜಯರಾಂ, ಪ್ರಮೋದ್ ಹೆಗಡೆ, ಚೋರಯ್ಯ, ನಾರಾಯಣ ರಡ್ಡಿ, ಹನುಮಂತ ಬೆಳಗುರ್ಕಿ, ಭೀಮಯ್ಯ, ಸಚಿನ್ ಮೀಣಾ, ಕವಿತಾ ಕುರಗುಂಟಿ ಮತ್ತಿತರರಿದ್ದರು.

### ವ್ಯಾಪಕ ಚರ್ಚೆ ಅಗತ್ಯ

ಇದೇ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹಾಗೂ ಮಾದರಿ ಅಧಿನಿಯಮದ ರೂವಾರಿ ಡಾ.ಟಿ ಹಕ್ ''ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮವನ್ನು ಹೋದ ವರ್ಷದ ಮಾರ್ಚ್ 31ರಂದು ಕೇಂದ್ರ ಸರಕಾರಕ್ಕೆ ಸಲ್ಲಿಸಲಾಗಿದೆ. ದೇಶದಲ್ಲಿ ಒಟ್ಟು 69 ದಶಲಕ್ಷ ಹೆಕ್ಟೇರ್ ಭೂಮಿ ಬೀಳು ಬಿದ್ದಿದೆ. ಇದು ದೇಶದ ಆಹಾರ ಭದ್ರತೆಗೆ ಮಾರಕವಾಗಿ ಪರಿಣಮಿಸುವ ಅಪಾಯ ನಮ್ಮ ಮುಂದಿದೆ'' ಎಂದರು.

''ಈ ಅಧಿನಿಯಮವು ಇನ್ನೂ ಚರ್ಚೆಯ ಹಂತದಲ್ಲಿದೆ. ಆದರೆ ಉತ್ತರ ಪ್ರದೇಶ, ಆಂಧ್ರಪ್ರದೇಶ, ತೆಲಂಗಾಣ, ಒಡಿಶಾದಲ್ಲಿ ಈ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಅಧಿನಿಯಮದಲ್ಲಿ ರೈತರ ಜಮೀನಿನ ಮಾಲೀಕತ್ವಕ್ಕೆ ಯಾವುದೇ ಧಕ್ಕೆ ಬರುವುದಿಲ್ಲ, ಗೇಣಿ ಪಡೆದವರು ರೈತರ ಜಮೀನಿನ ಮೇಲೆ ಸಾಲ ಪಡೆಯಲು ಬರುವುದಿಲ್ಲ, ಇದು ರೈತರಿಗೆ ಅನುಕೂಲವಾಗುವಂತಹ ವ್ಯವಸ್ಥೆಯಾಗಿದೆ'' ಎಂದರು.

ಶುಕ್ರವಾರ • ಮಾರ್ಚ್ 3, 2017 ಪ್ರಜಾವಾಣಿ

ರಾಜ್ಯ ಕೃಷಿ ಬೆಲೆ ಆಯೋಗ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ 'ಮಾದರಿ ಅಧಿನಿಯಮ' ಕುರಿತು ರೈತರ ಜತೆ ಚರ್ಚೆ

# ಬೀಳು ಭೂಮಿ ಗೇಣಿಗೆ ಕೊಡಿ: ಹಕ್ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಉಳುಮೆ ಮಾಡದೇ ಬೀಳು ಬಿದ್ದಿರುವ 2.6 ಕೋಟಿ ಹೆಕ್ಟೇರ್ ಭೂಮಿಯನ್ನು ಕೃಷಿಗೆ ಒಳಪಡಿಸಲು ಎಲ್ಲ ರಾಜ್ಯಗಳು 'ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ' ಜಾರಿಗೊಳಿಸಬೇಕು ಎಂದು ಕೇಂದ್ರ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ. ಟಿ.ಹಕ್ ಸಲಹೆ ನೀಡಿದರು.

ರಾಜ್ಯ ಕೃಷಿ ಬೆಲೆ ಆಯೋಗ ಗುರುವಾರ ಏರ್ಪಡಿಸಿದ್ದ 'ರಾಜ್ಯದ ಬೀಳು ಭೂಮಿ ಸದ್ಬಳಕೆ' ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕೃಷಿಕರು ವಿವಿಧ ಕಾರಣಗಳಿಂದ ಬೇಸಾಯ ಮಾಡುವುದನ್ನು ಬಿಡುತ್ತಿದ್ದಾರೆ. ಕೃಷಿ ಭೂಮಿ ಬೀಳು ಬಿಡುವುದರಿಂದ ರೈತರಿಗೆ ಮಾತ್ರವಲ್ಲ ದೇಶಕ್ಕೂ ನಷ್ಟ ಎಂದು ಹೇಳಿದರು.


ಬೀಳು ಭೂಮಿಯಲ್ಲಿ ಬೇಸಾಯ ಮಾಡಲು ಆಸಕ್ತ ಗೇಣಿದಾರರಿಗೆ ಬೇಸಾಯಕ್ಕೆ ಅವಕಾಶ ಮಾಡುವುದೇ 'ಮಾದರಿ ಅಧಿನಿಯಮ'ದ ಉದ್ದೇಶವಾಗಿದೆ. ಇದರಿಂದ ಭೂ ಒಡೆಯರು ಮತ್ತು ಗೇಣಿದಾರರು ಇಬ್ಬರಿಗೂ ಅನುಕೂಲವಾಗುವ ಅಂಶಗಳನ್ನು ಅಧಿನಿಯಮ ಒಳಗೊಂಡಿದೆ ಎಂದರು.

ಕೃಷಿ ಭೂಮಿಯನ್ನು ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡುವ ಹುನ್ನಾರ ಇದರ ಹಿಂದೆ ಇಲ್ಲ. ಈ ಬಗ್ಗೆ ರೈತರಿಗೆ ಯಾವುದೇ ಸಂಶಯ ಬೇಡ. ಪ್ರತಿಯೊಂದು ರಾಜ್ಯವೂ ತನ್ನ ಅಗತ್ಯಗಳಿಗೆ ಅನುಗುಣವಾಗಿ ಮಾರ್ಪಾಡು ಮಾಡಿಕೊಂಡು ಜಾರಿ ಮಾಡಬಹುದು ಎಂದು ಹೇಳಿದರು.

ಕೇರಳದಲ್ಲಿ ಕೃಷಿಕರು ಸೇರಿಕೊಂಡು 'ಕುಟುಂಬ ಸಿರಿ' ಹೆಸರಿನಲ್ಲಿ ಯಶಸ್ವಿಯಾಗಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದು ಹಕ್ ತಿಳಿಸಿದರು.

ದೇಶದಲ್ಲಿ ಕೃಷಿ ಭೂಮಿ ಹೊಂದಿರುವವರು ಸ್ವತಃ ಕೃಷಿ ಮಾಡಲು ಸಾಧ್ಯವಾಗದೇ ಗೇಣಿ ನೀಡುತ್ತಿದ್ದಾರೆ. ಆ ಪ್ರಮಾಣ ಶೇ 36 ಇದೆ. ಭೂರಹಿತರು ಮತ್ತು ಅತಿ ಸಣ್ಣ ರೈತರಿಗೆ ಭೂಮಿಯನ್ನು ಹೊಂದಲು ಅವಕಾಶವಾಗುವ ರೀತಿಯಲ್ಲಿ ಭೂಮಿ ಗೇಣಿಯನ್ನು ಸುಲಭಗೊಳಿಸುವ ಉದ್ದೇಶವನ್ನು 'ಮಾದರಿ ಕೃಷಿ ಭೂಮಿ ಗೇಣಿ ಅಧಿನಿಯಮ' ಹೊಂದಿದೆ. ಅಲ್ಲದೆ, ಗೇಣಿ ಪಡೆದ ರೈತರಿಗೆ ಕಾನೂನಿನ ಮಾನ್ಯತೆ ನೀಡಿ, ಅವರಿಗೆ ಸಾಂಸ್ಥಿಕ ಸಾಲ ಪಡೆಯಲು ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಅಧಿನಿಯಮದಲ್ಲಿ ಏನಿದೆ: ಭೂಮಾಲೀಕ ಮತ್ತು ಸಾಗುವಳಿದಾರನ ನಡುವೆ ಒಪ್ಪಂದ ಮಾಡಿಕೊಳ್ಳಬೇಕು. ಗೇಣಿಗೆ ನೀಡಿದ ಜಮೀನಿನ ಪ್ರದೇಶ ಮತ್ತು ವಿಸ್ತೀರ್ಣ, ಗೇಣಿಯ ಅವಧಿ, ಗೇಣಿಯ ಮೊತ್ತ, ಯಾವ ದಿನಾಂಕದೊಳಗೆ ಸಂದಾಯ ಮಾಡಬೇಕು. ಗೇಣಿ ಒಪ್ಪಂದದ ಪುನರ್‌ನವೀಕರಣ ಅಥವಾ ವಿಸ್ತರಣೆ ಷರತ್ತುಗಳು ಮತ್ತು ನಿಬಂಧನೆಗಳನ್ನು ಒಪ್ಪಂದವು ಒಳಗೊಂಡಿರಬೇಕು.




## 'ನೀರು, ಬೆಳೆಗೆ ಬೆಲೆ ಕೊಟ್ಟರೆ ರೈತರು ಬೇಸಾಯ ಮಾಡ್ತಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೀರಿನ ಅಭಾವ ಮತ್ತು ಮಿತಿ ಮೀರಿದ ರಸಗೊಬ್ಬರ ಬಳಕೆಯಿಂದ ಕೃಷಿ ಭೂಮಿ ಬೀಳು ಬಿದ್ದಿದೆ. ಹೊಲಕ್ಕೆ ನೀರು ಮತ್ತು ಬೆಳೆಗೆ ನ್ಯಾಯೋಚಿತ ಬೆಲೆ ಸಿಕ್ಕರೆ ಕೃಷಿ ಮಾಡಲು ಹಿಂದೆ ಬೀಳುವುದಿಲ್ಲ' ಎಂದು ರೈತರು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿ, 'ಯಾವ ಯಾವ ಕಾರಣಕ್ಕಾಗಿ ರೈತರು ಭೂಮಿಯನ್ನು ಬೀಳು ಬಿಟ್ಟಿದ್ದಾರೆ ಎಂಬ ಬಗ್ಗೆ ಐದು ವಲಯಗಳ ರೈತರಿಂದ ಮಾಹಿತಿ ಪಡೆದಿದ್ದೇವೆ. ಕೂಲಿ ಕಾರ್ಮಿಕರ ಕೊರತೆ, ಮಣ್ಣಿನ ಫಲವತ್ತತೆ ನಷ್ಟ, ಮಳೆ ವ್ಯತ್ಯಯದ ಕಾರಣಗಳನ್ನು ರೈತರು ನೀಡಿದ್ದಾರೆ' ಎಂದು ತಿಳಿಸಿದರು.

ಶಿರಾ ತಾಲ್ಲೂಕಿನ ರೈತ ಚಂದ್ರಶೇಖರ್ ಮಾತನಾಡಿ, 'ಶೇಂಗಾ ನಮ್ಮ ಪ್ರಮುಖ ಬೆಳೆ. ಇದಕ್ಕೆ ಮುಂಗಾರು ಮತ್ತು ಹಿಂಗಾರು ಮಳೆ ಎರಡೂ ಬೇಕು. ಇತ್ತೀಚೆಗೆ ಮುಂಗಾರು ಮಳೆ ಬಂದರೆ ಹಿಂಗಾರು ಕೈಕೊಡುತ್ತದೆ. ಹಿಂಗಾರು ಮಳೆ ಬಿದ್ದರೆ ಮುಂಗಾರು ಇರುವುದಿಲ್ಲ. ಇದರಿಂದ ಬೆಳೆ ನಷ್ಟವಾಗುತ್ತದೆ. 8 ಕೊಳವೆ ಬಾವಿಗಳನ್ನು ಕೊರೆಸಿದ್ದೇನೆ. ಎರಡರಲ್ಲಿ ಮಾತ್ರ ಒಂದು ಇಂಚು ನೀರು ಬರುತ್ತದೆ. ಮೊದಲು 350 ಅಡಿಗೆ ಸಿಗುತ್ತಿದ್ದ ನೀರು ಈಗ 1,200 ಅಡಿ ಆಳಕ್ಕೆ ಹೋದರೂ ಸಿಗುವುದಿಲ್ಲ. ನೀರಿನ ತತ್ವಾರದಿಂದ ರೈತರು ಭೂಮಿ ಬೀಳು ಬಿಟ್ಟಿದ್ದಾರೆ' ಎಂದು ಹೇಳಿದರು.

ರೈತ ಸಂಘದ ಸುನಂದಾ ಜಯರಾಂ ಮಾತನಾಡಿ, 'ರೈತರ ಪರಿಸ್ಥಿತಿಯನ್ನು ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ. ನೀರಿಲ್ಲದೆ, ಬೆಳೆ ಬೆಳೆಯಲು ಆಗದೆ ರೈತರು ಭೂಮಿಯನ್ನು ಬರಡು ಬಿಟ್ಟಿದ್ದಾರೆ. ಗೇಣಿ ಕಾನೂನು ಬದ್ಧಗೊಳಿಸಿ ಮತ್ತೊಬ್ಬ ರೈತನಿಗೆ ನೀಡಿದರೆ ಬರಡು ಭೂಮಿಯಲ್ಲಿ ಅವರು ಏನು ಉಳುಮೆ ಮಾಡುತ್ತಾರೆ? ಅವರು ಉಳುಮೆ ಮಾಡಲು ಅನುಕೂಲ ಮಾಡಿಕೊಟ್ಟರೆ, ನಮಗೆ ಅದನ್ನು ಮಾಡಿ ಕೊಡಿ' ಎಂದು ಆಗ್ರಹಿಸಿದರು.

ರೈತ ವಿಶ್ವನಾಥ್ ಅವರು, 'ಉಪಯೋಗಿಸಿಕೊಳ್ಳದ ಭೂಮಿಯನ್ನು ಬಳಕೆ ಮಾಡಬೇಕು ಎನ್ನುವ ವಿಚಾರ ಒಳ್ಳೆಯದೆ ಇದೆ. ಆದರೆ, ಅಷ್ಟು ಮಟ್ಟಿನ ಭೂಮಿ ಯಾಕೆ ಬೀಳು ಬಿದ್ದಿದೆ ಎಂಬ ಪ್ರಶ್ನೆ ಹಿಂದಿರುವ ಉತ್ತರಗಳಿಗೆ ಪರಿಹಾರ ಸೂಚಿಸಿದರೆ ಆ ಚಿಂತೆ ದೂರವಾಗುತ್ತದೆ' ಎಂದು ತಿಳಿಸಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರು, 'ನಗರದ ಸುತ್ತಮುತ್ತ ಬೀಳು ಬಿದ್ದಿರುವ ಭೂಮಿ ರಿಯಲ್ ಎಸ್ಟೇಟ್ ಉದ್ಯಮಿಗಳ ಕೈಯಲ್ಲಿದೆ. ಇನ್ನು ಸರ್ಕಾರವೇ ಸೌರಶಕ್ತಿ ಉತ್ಪಾದನೆಗಾಗಿ ಪ್ರತಿ ತಾಲ್ಲೂಕಿನಲ್ಲೂ 100 ಎಕರೆ ಹಾಗೂ ಮುಂಬೈ–ಬೆಂಗಳೂರು ಕೈಗಾರಿಕಾ ಕಾರಿಡಾರ್‌ಗಾಗಿ ಭೂಮಿ ವಶಪಡಿಸಿಕೊಂಡಿದೆ. ಒಂದು ಕಡೆ ಭೂಮಿ ಕಿತ್ತುಕೊಳ್ಳುತ್ತಿರುವ ಸರ್ಕಾರ ಮತ್ತೊಂದು ಕಡೆ ಭೂಮಿಯನ್ನು ನೀಡುವ ಬಗ್ಗೆ ಮಾತನಾಡುತ್ತಿದೆ' ಎಂದು ಅಭಿಪ್ರಾಯಪಟ್ಟರು.



ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿದರು. ಅಭಿವೃದ್ಧಿ ಆಯುಕ್ತ ಟಿ.ಎಂ.ವಿಜಯಭಾಸ್ಕರ್, ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಮಾಜಿ ಅಧ್ಯಕ್ಷ ಟಿ.ಹಕ್, ಮಾಜಿ ಸದಸ್ಯ ಡಿ.ಎಸ್. ರಘು, ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಇದ್ದರು –ಪ್ರಜಾವಾಣಿ ಚಿತ್ರ

## ಮಠದಿಂದ ನೀರು ಹರಿಯುತ್ತಿದೆಯೇ?

ಪಾವಗಡ: 'ಉಡುಪಿ ಪೇಜಾವರ ಮಠ ಹಾಗೂ ಧರ್ಮಸ್ಥಳದಿಂದ ಎತ್ತಿನ ಹೊಳೆಯ ನೀರು ಹರಿಯುತ್ತಿದೆಯೇ' ಎಂದು ತುಮಕೂರು ಜಿಲ್ಲಾ ಹನ್ನೆರಡನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಕೆ.ಬಿ.ಸಿದ್ದಯ್ಯ ಪ್ರಶ್ನಿಸಿದರು.

ಪಟ್ಟಣದಲ್ಲಿ ಗುರುವಾರ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಮಠದಿಂದ ನೀರು ಬರುತ್ತಿದೆಯೇನೋ ಎಂಬಂತೆ ಉಡುಪಿ ಪೇಜಾವರ ಮಠದ ವಿಶ್ವೇಶ ತೀರ್ಥರು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಎತ್ತಿನಹೊಳೆ ಯೋಜನೆಯನ್ನು ವಿರೋಧಿಸುತ್ತಿದ್ದಾರೆ' ಎಂದರು.

'ಹಿಂದುಳಿದ, ಬರ ಪೀಡಿತ ಪ್ರದೇಶಗಳ ಬಾಯಾರಿಕೆ ನೀಗಿಸುವ ಸಲುವಾಗಿ ಈ ಯೋಜನೆ ರೂಪುಗೊಂಡಿದೆ. ಇವರಿಬ್ಬರು ಯೋಜನೆಗೆ ಅಡ್ಡಿಪಡಿಸುತ್ತಿರುವುದು ಸರಿಯಲ್ಲ' ಎಂದರು.

'ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುತ್ತಿರುವ ನೀರನ್ನು ಬಳಸಿಕೊಂಡು ನಾಡು ಮರುಭೂಮಿಯಾಗುವುದನ್ನು ತಪ್ಪಿಸಬೇಕಾಗಿದೆ' ಎಂದರು.

ಕನ್ನಡಪ್ರಭ
ಸಂಪಾದಕೀಯ

22/2/2017

# ಗುತ್ತಿಗೆ ಕೃಷಿ ಇಂದಿನ ಅನಿವಾರ್ಯ

ದೇಶದಲ್ಲಿ ಗುತ್ತಿಗೆ ಕೃಷಿಗೆ ಕಾನೂನುಬದ್ಧ ಅವಕಾಶ ನೀಡುವ ಬಗ್ಗೆ ಕಾಯ್ದೆ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಆದರೆ, ಕೃಷಿ ಭೂಮಿ ಹಾಗೂ ಅದಕ್ಕೆ ಸಂಬಂಧಿಸಿದ ನೀತಿ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಸಂವಿಧಾನವು ರಾಜ್ಯ ಸರ್ಕಾರಕ್ಕೆ ನೀಡಿದೆ. ಹೀಗಾಗಿ ಗುತ್ತಿಗೆ ಕೃಷಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕಾಯ್ದೆ ರೂಪಿಸಿದರೂ ಅದು ಭೂಸ್ವಾಧೀನ ಕಾಯ್ದೆ ರೀತಿಯಲ್ಲಿ ರಾಜ್ಯ ಸರ್ಕಾರಗಳಿಗೆ ಕಡ್ಡಾಯವಲ್ಲದ ಇನ್ನೊಂದು ಕಾಯ್ದೆಯಾಗುತ್ತದೆ. ಆ ಕಾಯ್ದೆಯನ್ನು ರಾಜ್ಯ ಸರ್ಕಾರಗಳು ಒಪ್ಪಿಕೊಂಡರೆ ಮಾತ್ರ ಅವು ರಾಜ್ಯಗಳಲ್ಲೂ ಜಾರಿಗೆ ಬರುತ್ತವೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಕೃಷಿ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯಗಳಿಂದ ಅಭಿಪ್ರಾಯ ಕೇಳಿದೆ. ಕರ್ನಾಟಕವೂ ಸೇರಿದಂತೆ ನಾನಾ ರಾಜ್ಯಗಳು ಈ ಬಗ್ಗೆ ಅಭಿಪ್ರಾಯ ನೀಡಲು ತತ್ಸಂಬಂಧಿ ನಾನಾ ವರ್ಗಗಳಿಂದ ಸಲಹೆ ಸೂಚನೆಗಳನ್ನು ಕೇಳುತ್ತಿವೆ. ರಾಜ್ಯ ಸರ್ಕಾರ ಸದ್ಯದ ಸ್ಥಿತಿಯಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಪ್ರಮುಖ ವಿಚಾರವೆಂದರೆ ಗುತ್ತಿಗೆ ಕೃಷಿಯೆಂಬುದು ಇಂದಿನ ಬದಲಾದ ಕೃಷಿ ಆರ್ಥಿಕತೆಯಲ್ಲಿ ಒಂದು ಅನಿವಾರ್ಯ ವ್ಯವಸ್ಥೆ. ಏಕೆಂದರೆ, ಒಂದೆಡೆ ಪಿತ್ರಾರ್ಜಿತ ಆಸ್ತಿಗಳು ಮಕ್ಕಳಿಗೆ ಹಂಚಿಕೆಯಾಗುತ್ತ ಹೋಗಿ ಕೃಷಿ ಹಿಡುವಳಿಗಳು ಸಣ್ಣದಾಗಿವೆ. ಅದರಿಂದಾಗಿ ಎಲ್ಲ ಕೃಷಿಕರಿಗೂ ಕೃಷಿ ಲಾಭದಾಯಕವಾಗಿ ಉಳಿದಿಲ್ಲ, ಹಾಗಾಗಿ ಅವರು ಜೀವನೋಪಾಯಕ್ಕೆ ಬೇರೆ ಕ್ಷೇತ್ರಗಳನ್ನು ಅವಲಂಬಿಸುತ್ತಿದ್ದಾರೆ. ಇನ್ನೊಂದೆಡೆ, ಕೃಷಿ ಕ್ಷೇತ್ರವೇ ಸಂಕಷ್ಟದಲ್ಲಿರುವುದರಿಂದ ರೈತರು ಬೇರೆ ಕ್ಷೇತ್ರಗಳತ್ತ ಮುಖ ಮಾಡುತ್ತಿದ್ದಾರೆ. ಮತ್ತೊಂದೆಡೆ, ನಾನಾ ಕಾರಣಗಳಿಂದ ನಗರೀಕರಣ ಹೆಚ್ಚುತ್ತಿರುವುದರಿಂದ ಊರಿನಲ್ಲಿರುವ ಸಣ್ಣಪುಟ್ಟ ಜಮೀನನ್ನು ಹಾಗೇ ಬಿಟ್ಟು ನಗರಗಳತ್ತ ವಲಸೆ ಹೋಗುವವರು ಹೆಚ್ಚುತ್ತಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸುಮಾರು 20 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಕೃಷಿಯೋಗ್ಯ ಭೂಮಿ ಖಾಲಿ ಬಿದ್ದಿದೆ. ಕೃಷಿ ಭೂಮಿಗೆ ಒಳ್ಳೆಯ ಬೆಲೆ ಬರುತ್ತಿರುವುದರಿಂದ ರೈತರು ಕ್ರಮೇಣ ಈ ಅನುತ್ಪಾದಕ ಜಾಗಗಳನ್ನು ರಿಯಲ್ ಎಸ್ಟೇಟ್ ಮುಂತಾದ ಉದ್ಯಮಿಗಳಿಗೆ ಮಾರುವ ಅಪಾಯವಿದೆ. ಹಾಗಾಗಿ ಸಣ್ಣಪುಟ್ಟ ಹಿಡುವಳಿದಾರರು ಬಿಡಿಬಿಡಿಯಾಗಿ ಅಥವಾ ಒಂದಷ್ಟು ಜನ ಒಗ್ಗೂಡಿ ತಮ್ಮ ಜಮೀನುಗಳನ್ನು ಗುತ್ತಿಗೆ ಕೃಷಿಗೆ ನೀಡುವ ಪದ್ಧತಿ ಬಂದರೆ ಕೃಷಿ ಜಮೀನೂ ಉಳಿಯುತ್ತದೆ, ಅದರಲ್ಲಿ ಆಹಾರೋತ್ಪಾದನೆಯೂ ಆಗುತ್ತದೆ ಮತ್ತು ಸಣ್ಣ ಹಿಡುವಳಿದಾರರಿಗೆ ಆ ಜಮೀನಿನಿಂದ ಆದಾಯವೂ ಬರುತ್ತದೆ.

> ಗುತ್ತಿಗೆ ಕೃಷಿಗೆ ಅನುಮತಿ ನೀಡುವಾಗ ಕೃಷಿ ಕ್ಷೇತ್ರದ ಜುಟ್ಟು ಕಾರ್ಪೊರೇಟ್ ಕಂಪನಿಗಳ ಕೈಗೆ ಸಿಲುಕದಂತೆ ನೋಡಿಕೊಳ್ಳುವುದು ಬಹಳ ಮುಖ್ಯ

ಸದ್ಯ ಕೃಷಿ ಭೂಮಿಯನ್ನು ಯಾವುದೇ ರೂಪದಲ್ಲೂ ಬೇರೆಯವರ ಬಳಕೆಗೆ ನೀಡುವುದು ಕಾನೂನು ಪ್ರಕಾರ ನಿಷಿದ್ಧ. ಕೃಷಿ ಭೂಮಿ ನಾಶವಾಗಬಾರದು ಎಂಬ ಸದುದ್ದೇಶದಿಂದ ಈ ನಿಯಮ ಇದೆಯಾದರೂ ಇದರಿಂದ ಕೃಷಿಕರಿಗೆ ಹಾಗೂ ಕೃಷಿಗೆ ಆಗುತ್ತಿರುವ ನಷ್ಟವೇ ಹೆಚ್ಚು. ಇಷ್ಟಾಗಿಯೂ ಕರ್ನಾಟಕದ ನಾನಾ ಭಾಗಗಳಲ್ಲಿ, ಅಷ್ಟೇಕೆ, ದೇಶಾದ್ಯಂತ, ಕೃಷಿಕರು ತಮ್ಮ ತುಂಡು ಜಮೀನುಗಳನ್ನು ಬೇರೆ ಬೇರೆ ಬೆಳೆ ಬೆಳೆಯಲು ಗುತ್ತಿಗೆಗೆ ನೀಡುವುದು ನಡೆಯುತ್ತಿದೆ. ಇದಕ್ಕೆ ಕಾನೂನಿನ ಬೆಂಬಲ ಇಲ್ಲದಿರುವುದರಿಂದ ಎಷ್ಟೋ ಸಲ ರೈತರು ಮೋಸ ಹೋಗುವುದು ಅಥವಾ ಜಮೀನನ್ನೇ ಕಳೆದುಕೊಳ್ಳುವುದೂ ಇದೆ. ಇದನ್ನೆಲ್ಲ ತಡೆಯಬೇಕು ಅಂದರೆ ಕೃಷಿಕರಿಗೆ ಮತ್ತು ಕೃಷಿಗೆ ಪೂರಕವಾಗುವ ರೀತಿ ಗುತ್ತಿಗೆ ಕೃಷಿಗೆ ಅವಕಾಶ ನೀಡುವುದು ಸ್ವಾಗತಾರ್ಹ. ಆದರೆ, ಈ ಮಾರ್ಗದಲ್ಲಿ ಕಾರ್ಪೊರೇಟ್ ಕುಳಗಳು ದೇಶದ ಕೃಷಿ ಕ್ಷೇತ್ರದ ಮೇಲೆ ನಿಯಂತ್ರಣ ಸಾಧಿಸುವುದಕ್ಕೆ ಮಾತ್ರ ಬಿಡಬಾರದು.

---

ಲೋಕಲ್ ನಗರ 11

ಸಣ್ಣ ರೈತರಿಗಿದು ವರ ಎಂಬುದು ಸರಕಾರದ ವಾದ | ಗುತ್ತಿಗೆ ನೀಡಿದರೆ ಬರಲಿದೆ ನಿಮ್ಮ ಮಾಲೀಕತ್ವಕ್ಕೆ ಕುತ್ತು

# ಕೃಷಿ ಭೂಮಿ ಗುತ್ತಿಗೆ ಹಿಂದೆ ರಿಯಲ್ ಎಸ್ಟೇಟ್?

ವೆಂಕಟೇಶ್ ಆರ್.ದಾಸ್ ಬೆಂಗಳೂರು



ಭೂಮಿ ಗುತ್ತಿಗೆ ಪಡೆದು ಕೃಷಿ ಚಟುವಟಿಕೆ ನಡೆಸುವ ಸಂಬಂಧ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವ ಸರಕಾರದ ಮುಂದಿದ್ದು, ಈ ತೀರ್ಮಾನದ ಹಿಂದೆ ಭೂ ಮಾಫಿಯಾದ ಕೈವಾಡವಿದೆ ಎಂಬ ಆಕ್ರೋಶ ರೈತ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಕರ್ನಾಟಕ ಕೃಷಿ ಬೆಲೆ ಆಯೋಗದ ವತಿಯಿಂದ ನಡೆಸಿದ ಸಮೀಕ್ಷೆ ಪ್ರಕಾರ ರಾಜ್ಯದ ಸುಮಾರು 20 ಲಕ್ಷ ಹೆಕ್ಟೇರ್ ಭೂಮಿ ನಿರುಪಯುಕ್ತವಾಗಿದೆ. ಈ ಪ್ರದೇಶದಲ್ಲಿ ವಿವಿಧ ಕಾರಣದಿಂದ ಯಾವುದೇ ಕೃಷಿ ಚಟುವಟಿಕೆ ನಡೆಯುತ್ತಿಲ್ಲ. ಹೀಗಾಗಿ, ಭೂಮಿಯನ್ನು ಆಸಕ್ತ ರೈತರು ಪಡೆದು ಕೃಷಿ ಚಟುವಟಿಕೆ ನಡೆಸಲು ಕಾನೂನಿನ ಮಾನ್ಯತೆ ನೀಡುವ ಆಲೋಚನೆ ಸರಕಾರದ ಮುಂದಿದೆ. ಆದರೆ, ಗುತ್ತಿಗೆ ನೆಪದಲ್ಲಿ ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ತಂದು ರೈತರ ಭೂಮಿಯನ್ನು ರಿಯಲ್ ಎಸ್ಟೇಟ್ ಮಾಫಿಯಾ ಕೈಗಿಡಲು ಸರಕಾರ ಮುಂದಾಗಿದೆ ಎನ್ನಲಾಗುತ್ತಿದೆ.

ಕಡಿಮೆ ಫಲವತ್ತತೆ, ಕಾರ್ಮಿಕರ ಕೊರತೆ, ಬಂಜರು ಭೂಮಿ, ನೀರಾವರಿ ಸೌಲಭ್ಯ ಕೊರತೆಯ ಕಾರಣದಿಂದ ಹಲವು ರೈತರು ತಮ್ಮ ಜಮೀನಿನಲ್ಲಿ ಯಾವುದೇ ಕೃಷಿ ಚಟುವಟಿಕೆ ನಡೆಸುತ್ತಿಲ್ಲ. ಒಂದು ವೇಳೆ ಗುತ್ತಿಗೆ ನೀಡಿದರೆ, ಭೂ ಸುಧಾರಣೆ ಕಾಯ್ದೆ ಪ್ರಕಾರ ಆಸ್ತಿ ಹಕ್ಕು ಕಳೆದುಕೊಳ್ಳುವ ಭಯದಲ್ಲಿ ಆ ಜಾಗ ಬರಡಾಗಿಯೇ ಉಳಿದಿದೆ. ಹೀಗಾಗಿ, ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ತಂದು ಭೂ ಗುತ್ತಿಗೆ ಪ್ರಕ್ರಿಯೆ ಸುಲಭವಾಗಿಸಲು ಕಾನೂನು ಅನುಮತಿ ಕಲ್ಪಿಸಲು ಸರಕಾರ ಮುಂದಾಗಿದೆ.

'ಲ್ಯಾಂಡ್ ಬ್ಯಾಂಕ್' ತೆರೆಯಲು ಸಿದ್ಧತೆ: ಭೂ ಗುತ್ತಿಗೆ ಸಂಬಂಧ ಜಿಲ್ಲಾಧಿಕಾರಿ ನೇತೃತ್ವದಲ್ಲಿ 'ಲ್ಯಾಂಡ್ ಬ್ಯಾಂಕ್' ತೆರೆಯಲು ಸರಕಾರ ತೀರ್ಮಾನಿಸಿದೆ. ಇಲ್ಲಿ ಕೃಷಿ ಚಟುವಟಿಕೆ ಮಾಡದ ತಮ್ಮ ಭೂಮಿಯನ್ನು ರೈತರು ಕಾನೂನು ಪ್ರಕಾರ ಠೇವಣಿ ಮಾಡಬಹುದು. ಅವಶ್ಯಕ ಗುತ್ತಿಗೆದಾರರಿಗೆ ಆ ಭೂಮಿಯನ್ನು ಸೂಕ್ತ ದಾಖಲೆ ಮತ್ತು ಕಾನೂನಿನ ಪರಿಧಿಯಲ್ಲಿ ಜಿಲ್ಲಾಧಿಕಾರಿ ಗುತ್ತಿಗೆಗೆ ನೀಡಬಹುದು. ಇದಕ್ಕೆ ಇಂತಿಷ್ಟು ಬಾಡಿಗೆ ನಿಗದಿ ಮಾಡಿ ಮಾಲೀಕರಿಗೆ ತಲುಪಿಸಬಹುದು. ಈ ಸಂಬಂಧ ಪ್ರಸ್ತಾವನೆ ಚಾಲ್ತಿಯಲ್ಲಿದ್ದು, ಪ್ರದೇಶ, ಬೆಳೆ ಮತ್ತು ನೀರಾವರಿ ಅನುಕೂಲಕ್ಕೆ ತಕ್ಕಂತೆ ಬಾಡಿಗೆ ದರ ನಿಗದಿ ಮಾಡಲಾಗುತ್ತದೆ.

**ಸಣ್ಣ ಹಿಡುವಳಿದಾರರಿಗೆ ಅನುಕೂಲ:** ಕೇಂದ್ರದ ನೀತಿ ಆಯೋಗ ಭೂ ಕಾಯ್ದೆಗೆ ತಿದ್ದುಪಡಿ ತರಲು ಶಿಫಾರಸು ಮಾಡಿದೆ. ಸಣ್ಣ ರೈತರಿಗೆ ತಂತ್ರಜ್ಞಾನ ಆಧಾರಿತ ಕೃಷಿ ಕಷ್ಟವಾಗುವ ಕಾರಣ ಗುಂಪು ಕೃಷಿ ಪದ್ಧತಿಗೆ ಅನುಕೂಲ ಮಾಡಿಕೊಡುವ ಉದ್ದೇಶವಿದೆ. ಇದರಿಂದ ಸಣ್ಣ ಮತ್ತು ಬಡ ರೈತರಿಗೆ ಹೆಚ್ಚಿನ ಅನುಕೂಲ ಎಂದು ಸಮೀಕ್ಷೆ ತಿಳಿಸಿದೆ. ಇದು ಕೃಷಿ ನಿರತ ಮತ್ತು ಕೃಷಿಯಿಂದ ದೂರ ಉಳಿದ ರೈತರಿಗೆ ಅನುಕೂಲವಾಗಲಿದೆ. ಅಲ್ಲದೇ, ಕೃಷಿಯೇತರ ಚಟುವಟಿಕೆಗೆ ಭೂಮಿ ನೀಡಬಾರದು ಎಂಬ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಸರಕಾರ ತೀರ್ಮಾನಿಸಿದೆ.

**ಕೃಷಿ ತಜ್ಞರ ಅಭಿಪ್ರಾಯವೇನು?:** ಭೂ ಸುಧಾರಣೆ ಕಾಯ್ದೆಯ ತಿದ್ದುಪಡಿ ಸಂಬಂಧ ವಿರೋಧ ವ್ಯಕ್ತವಾಗುತ್ತಿದೆ. ಇದು ಸರಕಾರ ರೈತರ ಕಣ್ಣಿಗೆ ಮಣ್ಣೆರಚಲು ಮಾಡುತ್ತಿರುವ ತಂತ್ರ. ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರೈತರಿಂದ ಭೂಮಿ ಕಸಿದುಕೊಂಡು ಖಾಸಗಿ ಕಂಪನಿ ಮತ್ತಿತರ ರಿಯಲ್ ಎಸ್ಟೇಟ್ ಮಾಲೀಕರಿಗೆ ನೀಡುವ ಉದ್ದೇಶ ಹೊಂದಲಾಗಿದೆ. ಇದು ದೇಶದ ಕೃಷಿ ಕ್ಷೇತ್ರವನ್ನು ಮತ್ತಷ್ಟು ಹೀನಾಯ ಸ್ಥಿತಿಗೆ ತರುವ ಪ್ರಯತ್ನ ಎಂದು ಕೃಷಿ ತಜ್ಞರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಕೇಂದ್ರ ಸರಕಾರದ ನೀತಿ ಆಯೋಗ ಈ ಕುರಿತು ಸಲಹೆ ನೀಡಿದೆ. ಆದರೆ, ಸರಕಾರ ಈ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ, ಸಾಧ್ಯತೆಗಳ ಬಗ್ಗೆ ರೈತ ಮುಖಂಡರು ಮತ್ತು ಕೃಷಿ ತಜ್ಞರ ಸಲಹೆ ಪಡೆದು ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು.
>
> -ಕೃಷ್ಣ ಬೈರೇಗೌಡ ಕೃಷಿ ಸಚಿವ

> ಭೂಮಿ ಪಡೆದು ಬೇರೆಯವರಿಗೆ ಬಾಡಿಗೆ ಕೊಡುವ ಬದಲು ಅಗತ್ಯ ಸೌಕರ್ಯ ಒದಗಿಸಿದರೆ, ಕೃಷಿಯಿಂದ ವಿಮುಖವಾಗುವ ತೀರ್ಮಾನಕ್ಕೆ ರೈತರು ಬರುವುದಿಲ್ಲ. ಆದರೆ, ಇದರಲ್ಲಿ ಸರಕಾರ ರಿಯಲ್ ಎಸ್ಟೇಟ್‌ಗೆ ಅನುಕೂಲ ಮಾಡಿಕೊಡುವ ಲೆಕ್ಕಾಚಾರ ಕಾಣುತ್ತಿದೆ.
>
> - ಡಾ. ದೇವೇಂದ್ರ ಶರ್ಮಾ
> ಕೃಷಿ ಮತ್ತು ಆಹಾರ ನೀತಿ ವಿಮರ್ಶಕ

---

08 | ಬುಧವಾರ, 22 ಫೆಬ್ರವರಿ 2017, ಬೆಂಗಳೂರು V.K.

ಸಂಪಾದಕೀಯ
EDITORIAL

# ಕೃಷಿಗೆ ಭೂಮಿ ಗುತ್ತಿಗೆ ಶ್ಲಾಘನೀಯ

ಕೈಗಾರಿಕೆ ಮತ್ತು ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಭಾರತ ಎಷ್ಟೇ ಅಭಿವೃದ್ಧಿ ಸಾಧಿಸಿದ್ದರೂ ನಮ್ಮ ದೇಶದ ಆರ್ಥಿಕತೆಗೆ ಕೃಷಿಯೇ ಬೆನ್ನೆಲುಬು. ಒಟ್ಟಾರೆ ಜಿಡಿಪಿಯಲ್ಲಿ ಕೃಷಿ ವಲಯದ ಪಾಲು ಶೇ.13.7ರಷ್ಟಿದೆ. ಇದೇ ವೇಳೆ, ದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದು ಕೃಷಿಯ ಅನಿವಾರ್ಯತೆಯನ್ನು ಸಾಬೀತುಪಡಿಸುತ್ತದೆ. ಹೀಗಿದ್ದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆಂಬುದೂ ಕಟು ಸತ್ಯ. ಕೃಷಿಯು ಈ ಮೊದಲಿನಂತೆ ಲಾಭದಾಯಕವಾಗಿಲ್ಲ ಎಂಬುದೂ ಒಂದು



ಕಾರಣವಾದರೆ, ಸರಕಾರದ ನೀತಿಗಳು ಅಷ್ಟೇ ಕಾರಣವಾಗಿವೆ. ಮತ್ತೊಂದು ಕೋನದಿಂದ ನೋಡುವುದಾದರೆ; ಕೃಷಿ ಮಾಡುವ ಆಸಕ್ತಿ, ಪ್ರೀತಿ ಇದ್ದರೂ ಅಂಥವರಿಗೆ ಸೂಕ್ತ ಭೂಮಿ ಇಲ್ಲ. ಪರಿಸ್ಥಿತಿ ಹೀಗಿರುವಾಗ, ನೀರಾವರಿ ಸೌಲಭ್ಯ ಇಲ್ಲದೆ ಪಾಳು ಬಿದ್ದಿರುವ ಒಣ ಭೂಮಿಯನ್ನು ಕೃಷಿ ಆಸಕ್ತರಿಗೆ ಗುತ್ತಿಗೆ ನೀಡುವ ಯೋಜನೆಯು ನಿಜಕ್ಕೂ ಅತ್ಯುತ್ತಮ ಮಾರ್ಗ. ಇಂಥದೊಂದು ಪ್ರಸ್ತಾವನೆಯನ್ನು ಕೇಂದ್ರದ ನೀತಿ ಆಯೋಗ ರಾಜ್ಯ ಸರಕಾರದ ಮುಂದಿಟ್ಟಿದೆ. ಈ ಪ್ರಸ್ತಾವನೆ ಇನ್ನೂ ಪ್ರಾರಂಭದ ಹಂತದಲ್ಲಿದ್ದು, ಸಾಕಷ್ಟು ಸಮಾಲೋಚನೆಗಳ ಬಳಿಕ ಅದಕ್ಕೊಂದು ರೂಪ ದೊರೆಯಬಹುದು.

ಕೇಂದ್ರದ ನೀತಿ ಆಯೋಗದ ಈ ಪ್ರಸ್ತಾಪವನ್ನು ಹೇಗೇ ವಿಶ್ಲೇಷಿಸಿದರೂ ನಷ್ಟಕ್ಕಿಂತ ಲಾಭಗಳೇ ಹೆಚ್ಚು. ಎಲ್ಲ ಸಾಧಕ-ಬಾಧಕಗಳನ್ನು ಗಣನೆಗೆ ತೆಗೆದುಕೊಂಡು, ಕಾನೂನು ರೂಪದಲ್ಲಿ ಭೂಮಿಯನ್ನು ಗುತ್ತಿಗೆ ನೀಡುವ ಈ ಯೋಜನೆ ಜಾರಿಯಾದರೆ ಖಂಡಿತವಾಗಿಯೂ ಕೃಷಿ ಆಸಕ್ತ ಭೂರಹಿತರಿಗೆ ಇದು ವರದಾನವಾಗಲಿದೆ ಎಂಬುದರಲ್ಲಿ ಅನುಮಾನವಿಲ್ಲ, ಅಲ್ಲದೆ, ಕೃಷಿ ಉತ್ಪಾದನೆಯೂ ಹೆಚ್ಚಳವಾಗಲಿದೆ. ''ರಾಜ್ಯದಲ್ಲಿ ಸುಮಾರು 15 ಲಕ್ಷ ಹೆಕ್ಟೇರ್‌ನಷ್ಟು ಇಂಥ ಜಮೀನು ಖಾಲಿ ಇದ್ದು ಅಲ್ಲಿ ಯಾವುದೇ ಕೃಷಿ ಚಟುವಟಿಕೆಗಳು ನಡೆಯುತ್ತಿಲ್ಲ. ಇಂಥ ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಮಾಡುವುದು ಕೇಂದ್ರ ಸರಕಾರದ ಉದ್ದೇಶವಾಗಿದೆ. ರೈತರು ತಮ್ಮ ಜಮೀನನ್ನು ಗುತ್ತಿಗೆ ನೀಡುವುದರಿಂದ ಅವರ ಮಾಲಿಕತ್ವದ ಹಕ್ಕಿಗೆ ಭಂಗವಿಲ್ಲ,'' ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದ್ದಾರೆ. ಆದರೆ, ಹೀಗೆ ಗುತ್ತಿಗೆ ಪಡೆದ ಭೂಮಿಯನ್ನು ಸರಕಾರ ಕೈಗಾರಿಕೆಗಳಿಗೆ ಅಥವಾ ಇನ್ನಾವುದೋ ಉದ್ದೇಶಕ್ಕೆ ಬಳಸಿಕೊಳ್ಳುವುದಿಲ್ಲ ಎಂಬ ಬಗ್ಗೆ ಖಾತರಿ ನೀಡಬೇಕಾಗುತ್ತದೆ. ಆ ಬಗ್ಗೆ ಇನ್ನೂ ಸ್ಪಷ್ಟವಾದ ರೂಪರೇಷೆಗಳು ಇದ್ದಂತಿಲ್ಲವಾದರೂ, ಒಣ ಭೂಮಿಯನ್ನು ಕೈಗಾರಿಕೆಗಳಿಗೆ ನೀಡುವ ಪ್ರಸ್ತಾಪ ಸರಕಾರದ ಮುಂದಿಲ್ಲ ಎಂದೂ ಅವರು ಹೇಳಿದ್ದಾರೆ. ಭೂಮಿ ಗುತ್ತಿಗೆ ನೀಡುವ ಈ ಪ್ರಕ್ರಿಯೆಗೆ ಕಾನೂನು ಬಲ ಬೇಕಾಗುತ್ತದೆ. ಸದ್ಯದ ಕಾಯ್ದೆಯ ಪ್ರಕಾರ ಅಂಥ ಅವಕಾಶಗಳಿಲ್ಲ. ಅದಕ್ಕಾಗಿ ಕಾನೂನು ತಿದ್ದುಪಡಿಯೂ ಅಗತ್ಯ. ಆದರೆ, ಇದೆಲ್ಲವೂ ಏಕಮುಖವಾಗಿ ನಡೆಯಬಾರದು. ರೈತರು, ಕೃಷಿ ತಜ್ಞರು, ಸಂಬಂಧಿಸಿದ ಸಂಸ್ಥೆಗಳ ಜತೆ ನಿರಂತರ ಚರ್ಚೆ, ಸಮಾಲೋಚನೆ, ಸಂವಾದ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ, ಈ ಯೋಜನೆ ಕೂಡ ವೈಫಲ್ಯ ಕಾಣುವುದರಲ್ಲಿ ಅನುಮಾನವಿಲ್ಲ. ಭೂಮಿ ಗುತ್ತಿಗೆ ನೀಡುವವರು ಮತ್ತು ಅದನ್ನು ಬಳಸುವವರ ಮಧ್ಯೆ ಅನೇಕ ತಾಂತ್ರಿಕ ಸಮಸ್ಯೆಗಳು ಎದುರಾಗುವ ಎಲ್ಲ ಸಾಧ್ಯತೆಗಳಿವೆ. ಅವುಗಳ ಬಗ್ಗೆ ಮುಂದಾಲೋಚನೆ ಮಾಡಿ ಒಮ್ಮತದ ತೀರ್ಮಾನ ಕೈಗೊಳ್ಳಬೇಕು. ಒಂದೊಮ್ಮೆ ಈ ಯೋಜನೆ ಜಾರಿಯಾದರೆ ಭೂರಹಿತ ಕೃಷಿಕರಿಗೆ ಇದರಿಂದ ಸಾಕಷ್ಟು ಅನುಕೂಲವಾಗಲಿದ್ದು, ಅವರ ಜೀವನಮಟ್ಟವೂ ಸುಧಾರಿಸಲಿದೆ. ಹಾಗಾಗಿ, ಈ ನಿಟ್ಟಿನಲ್ಲಿ ಸರಕಾರಗಳು ದೀರ್ಘಾವಧಿಯ ಕಾರ್ಯತಂತ್ರಗಳನ್ನು ರೂಪಿಸಿಕೊಂಡು ಮುಂದಡಿ ಇಡಬೇಕು.

ಸಂಗತ ಶನಿವಾರ • ಮಾರ್ಚ್ 11, 2017 ಪ್ರಜಾವಾಣಿ

# ಮತ್ತೆ ಮರಳಲಿದೆಯೇ ಗೇಣಿ ಪದ್ಧತಿ?

**ಈ ಮಾದರಿ ಕಾನೂನು ಜಮೀನುದಾರ–ಗೇಣಿದಾರ ವರ್ಗಗಳನ್ನು ಪುನರ್‌ರಚಿಸಿ ಸಮಾಜವನ್ನು ಹಿಂದಕ್ಕೆ ಕೊಂಡೊಯ್ಯುವುದೋ ಅಥವಾ ಭೂಸುಧಾರಣೆಯ ಆಶಯವನ್ನು ಮುಂದಿನ ಹಂತಕ್ಕೆ ಒಯ್ಯುವುದೋ?**

• ಬಾಪು ಹೆದ್ದೂರಶೆಟ್ಟಿ

**1971**ರಲ್ಲಿ ಕರ್ನಾಟಕದಲ್ಲಿ ಭೂ ಸುಧಾರಣೆಯ ಎರಡನೆಯ ಹಂತ ಜಾರಿಗೆ ಬಂದು ಜಮೀನುದಾರ-ಗೇಣಿದಾರ ಎಂಬ ಸಾಮಂತವಾದಿ ಭೂಸಂಬಂಧಗಳನ್ನು ಹಾಗೂ ಆ ವರ್ಗಗಳನ್ನು ರದ್ದುಪಡಿಸಿದ 45 ವರ್ಷಗಳ ನಂತರ ಆ ವರ್ಗಗಳನ್ನು ಪುನಃ ಸೃಷ್ಟಿಸಲು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಪ್ರಯತ್ನಿಸುತ್ತಿದೆ. ಕೃಷಿ ಎನ್ನುವುದು ನಮ್ಮ ಸಂವಿಧಾನದಲ್ಲಿ ರಾಜ್ಯ ಸರ್ಕಾರಗಳ ಅಧಿಕಾರವ್ಯಾಪ್ತಿಗೆ ಸೇರಿದ ವಿಷಯವಾದುದರಿಂದ ಕೃಷಿ ಭೂಮಿಯನ್ನು ಮತ್ತೆ ಗೇಣಿಗೆ ನೀಡುವುದಕ್ಕೆ ಅವಕಾಶ ಮಾಡಿಕೊಡುವ ಮಾದರಿ ಕಾನೂನೊಂದನ್ನು 'ನೀತಿ ಆಯೋಗ' ರಚಿಸಿ ಅಂತಹ ಕಾನೂನನ್ನು ಎಲ್ಲಾ ರಾಜ್ಯಗಳೂ ರಚಿಸಬೇಕೆಂದು ಹೇಳುತ್ತಿದೆ.

ಸಾವಿರಾರು ಎಕರೆ ಭೂಮಿ ಹೊಂದಿದ್ದ ಜಮೀನುದಾರರು ಸ್ವತಃ ಕೃಷಿ ಮಾಡುವುದು ಸಾಧ್ಯವಿರಲಿಲ್ಲವಾದುದರಿಂದ ಅವರೇ ಗೇಣಿದಾರ ವರ್ಗವನ್ನು ಸೃಷ್ಟಿಸಿದರು. ಮನಸ್ಸಿಗೆ ಬಂದಂತೆ ಗೇಣಿದಾರರನ್ನು ಒಕ್ಕಲೆಬ್ಬಿಸುವ ಪರಿಪಾಠ ಪ್ರಾರಂಭಿಸಿದರು. ಅವರ ಈ ಅಧಿಕಾರಕ್ಕೆ ಕಡಿವಾಣ ಹಾಕಿ ಗೇಣಿದಾರರಿಗೆ ರಕ್ಷಣೆ ನೀಡುವ ಉದ್ದೇಶದಿಂದ ಸ್ವಾತಂತ್ರ್ಯ ಬಂದ ನಂತರ ಕರ್ನಾಟಕವೂ ಸೇರಿದಂತೆ ಬಹುಪಾಲು ರಾಜ್ಯಗಳಲ್ಲಿ ಗೇಣಿದಾರರಿಗೆ ರಕ್ಷಣೆ ನೀಡುವ, ಜಮೀನುದಾರಿ ಪದ್ಧತಿಯನ್ನೇ ರದ್ದುಪಡಿಸುವ ಕಾನೂನುಗಳನ್ನು ರಚಿಸಲಾಯಿತು. ಭೂಸುಧಾರಣೆಯ ಈ ಮೊದಲ ಹಂತದ ನಂತರ 2ನೇ ಹಂತದಲ್ಲಿ ಪ್ರಾರಂಭವಾದ ಉಳುವವನಿಗೆ ಭೂಮಿಯ ಒಡೆತನವನ್ನು ಕೊಡಬೇಕೆಂಬ ಹೋರಾಟದ ಪರಿಣಾಮವಾಗಿ ಗೇಣಿದಾರರಿಗೆ ಅವರ ಸ್ವಾಧೀನದಲ್ಲಿರುವ ಭೂಮಿಯ ಒಡೆತನವನ್ನು ನೀಡುವ ಕಾನೂನುಗಳು ಜಾರಿಗೆ ಬಂದವು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಭೂಮಿಯ ಒಡೆತನವನ್ನು ಹೊಂದಿದ್ದರೂ ಸ್ವಾಧೀನವನ್ನು ಹೊಂದಿರದ ಜಮೀನುದಾರ, ಸ್ವಾಧೀನ ಹೊಂದಿದ್ದರೂ ಒಡೆತನ ಹೊಂದಿರದ ಗೇಣಿದಾರ, ಒಡೆತನ ಹಾಗೂ ಸ್ವಾಧೀನ ಎರಡನ್ನೂ ಹೊಂದಿದ್ದ ರೈತ ಹಾಗೂ ಒಡೆತನ ಹಾಗೂ ಸ್ವಾಧೀನಗಳೆರಡನ್ನೂ ಹೊಂದಿರದ ಕೃಷಿ ಕೂಲಿ ಎಂಬಂಥ 4 ವರ್ಗಗಳು ಅಸ್ತಿತ್ವದಲ್ಲಿದ್ದವು. ಭೂಸುಧಾರಣೆಯ ಈ ಎರಡು ಹಂತಗಳು ಜಮೀನುದಾರ ಹಾಗೂ ಗೇಣಿದಾರ ಎಂಬ ವರ್ಗಗಳನ್ನು ರದ್ದುಪಡಿಸಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ರೈತ ಹಾಗೂ ಕೃಷಿಕೂಲಿ ಎಂಬ ಎರಡೇ ವರ್ಗಗಳು ಉಳಿದುಕೊಂಡವು.

ಮುಂದಿನ ಹಂತದ ಭೂಸುಧಾರಣೆಗಳು ರೈತ ಹಾಗೂ ಕೃಷಿಕೂಲಿ ಎಂಬ ಎರಡು ವರ್ಗಗಳನ್ನು ಸಹಕಾರಿ ಕೃಷಿಯ ಮೂಲಕ ಮೇಳವಿಸಿ ಭೂಮಿಯನ್ನು ನಂಬಿರುವ ಒಂದೇ ವರ್ಗವನ್ನು ರಚಿಸುವುದಾಗಬೇಕಿತ್ತು. ಇದು ವರ್ಗಗಳ ಸಮಾನತೆಯತ್ತ ದೊಡ್ಡ ದಾಪುಗಾಲಾಗಬಹುದಿತ್ತು. ಆದರೆ ಇಂದು ಕೇಂದ್ರ ಸರ್ಕಾರ, ರೈತ-ಕೃಷಿಕೂಲಿ ವರ್ಗಗಳನ್ನು ಒಂದೇ ವರ್ಗವನ್ನಾಗಿ ಮಾರ್ಪಡಿಸುವುದು ಹಾಗಿರಲಿ, ಜಮೀನುದಾರ-ಗೇಣಿದಾರ ವರ್ಗಗಳನ್ನು ಮತ್ತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಗೇಣಿಗೆ ಭೂಮಿ ಕೊಡುವುದು ಕಾನೂನು ಬಾಹಿರವಾಗಿದ್ದರೂ, ಕರ್ನಾಟಕದಲ್ಲಿಯೇ ಶೇ6ರಷ್ಟು ಭೂಮಿಯನ್ನು ಗೇಣಿ ನೀಡಲಾಗಿದೆ ಎಂದು ಹೇಳಲಾಗುತ್ತಿದೆ. ಇಂತಹ ಅಕ್ರಮ ಗೇಣಿಯನ್ನು ಸಕ್ರಮಗೊಳಿಸುವುದೇ ಈ ಹೊಸ ಕಾನೂನಿನ ಉದ್ದೇಶ ಎಂದೂ ಹೇಳಲಾಗುತ್ತಿದೆ.

ಒಂದು ವಸ್ತುವಿನ ಸ್ವಾಧೀನ ಹೊಂದಿದವನೇ ಆ ವಸ್ತುವಿನ ಒಡೆತನವನ್ನೂ ಹೊಂದಿರಬೇಕು ಎನ್ನುವುದು ನ್ಯಾಯಶಾಸ್ತ್ರದ ಒಂದು ಪ್ರಮುಖ ತತ್ವ. ಒಂದು ವಸ್ತುವಿನ ಒಡೆತನವನ್ನು ಹೊಂದಿರುವವನು ನಾನಾ ಕಾರಣಗಳಿಂದ ಅದರ ಸ್ವಾಧೀನವನ್ನೂ ಹೊಂದಲು ಬಯಸದೇ ಇರುವಾಗ ಅಥವಾ ಅದು ಸಾಧ್ಯವಾಗದೇ ಇರುವಾಗ ಅದನ್ನು ಬೇರೆಯವರಿಗೆ ಬಿಟ್ಟುಕೊಡುತ್ತಾನೆ.

ಇದೇ ತರ್ಕವನ್ನು ಬಳಸಿ ಉಳುವವನಿಗೇ ಭೂಮಿಯ ಒಡೆತನವನ್ನೂ ಕೊಡಬೇಕೆನ್ನುವ ತತ್ವ ಅನುಷ್ಠಾನಕ್ಕೆ ಬಂದದ್ದು. ತಾನೇ ಭೂಮಿಯನ್ನು ಉಳಲು ಆಗದವನು ಅದನ್ನು ಉಳಲು ಸಿದ್ಧರಿರುವ ಬೇರೆಯವರಿಗೆ ಗೇಣಿ ಕೊಡುತ್ತಾನೆ. ಗೇಣಿದಾರ ಕಷ್ಟಪಟ್ಟು ಸಂಪಾದಿಸಿದ ಫಸಲಿನಲ್ಲಿ ಭೂಮಿಯ ಒಡೆತನ ಹೊಂದಿದ್ದೇನೆ ಎಂಬ ಒಂದೇ ಕಾರಣದಿಂದ ಏನೂ ಕಷ್ಟಪಡದ ಭೂಮಾಲೀಕ ಆ ಫಸಲಿನ ಒಂದು ಪಾಲನ್ನು ಪಡೆಯುತ್ತಾನೆ. ಸ್ವತಃ ದುಡಿಯದೇ ಇನ್ನೊಬ್ಬರ ದುಡಿಮೆಯ ಫಲ ಪಡೆಯುವುದು ಅನೈತಿಕವಷ್ಟೇ ಅಲ್ಲ ಆರ್ಥಿಕ ಶೋಷಣೆಯೂ ಹೌದು. ಇದನ್ನು ತಪ್ಪಿಸಬೇಕಾದರೆ ಒಡೆತನ ಹಾಗೂ ಸ್ವಾಧೀನಗಳೆರಡನ್ನೂ ಒಬ್ಬ ವ್ಯಕ್ತಿಯಲ್ಲಿಯೇ ಸ್ಥಾಪಿಸಬೇಕೆನ್ನುತ್ತಾರೆ ಸಮಾಜವಾದಿಗಳು. ಇದೇ ಇದುವರೆಗಿನ ಭೂಸುಧಾರಣೆಯ ಉದ್ದೇಶ ಹಾಗೂ ತತ್ವವೂ ಆಗಿತ್ತು.

ಆದರೆ ಇಂದು ಕೇಂದ್ರ ಸರ್ಕಾರ ಈ ತತ್ವವನ್ನು ತಲೆಕೆಳಗೆ ಮಾಡುತ್ತಿದೆ. ಭೂಮಿಯನ್ನು ಗೇಣಿಗೆ ಕೊಡುವುದನ್ನು ಕಾನೂನುಬದ್ಧಗೊಳಿಸಲು 'ನೀತಿ ಆಯೋಗ'ವು 2015ರ ಸೆ. 7ರಂದು ಡಾ.ಟಿ.ಹಕ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಒಂದು ಸಮಿತಿ ಕಳೆದ ವರ್ಷದ ಮಾರ್ಚ್‌ನಲ್ಲಿ ಅಂದರೆ ಬರೀ ಏಳು ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸಿದೆ.

ಈ ಶಿಫಾರಸುಗಳಿಗೆ ಕಾರಣಗಳನ್ನು ನೀಡುತ್ತ ಸಮಿತಿ ಹೀಗೆ ಹೇಳಿದೆ: 'ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರಚಿಸಲಾದ ಭೂಸುಧಾರಣಾ ಕಾನೂನುಗಳು ಇಂದು ಅಪ್ರಸ್ತುತವಾಗಿವೆ. ಗೇಣಿಪದ್ಧತಿ ಇಂದು ಆರ್ಥಿಕ ಆವಶ್ಯಕತೆಯಾಗಿದೆಯೇ ಹೊರತು ಸಾಮಂತವಾದದ ಚಿಹ್ನೆಯಾಗಿರುವುದಿಲ್ಲ. ಈ ಭೂಸುಧಾರಣಾ ಕಾನೂನುಗಳು ಕೃಷಿ ಉತ್ಪಾದನೆಯನ್ನೂ, ಸಮಾನತೆಯ ಸಾಧನೆಯನ್ನೂ, ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯೇತರ ಅಭಿವೃದ್ಧಿಯನ್ನೂ ಕುಂಠಿತಗೊಳಿಸಿವೆ. ಈ ಕಾನೂನುಗಳಿಂದಾಗಿ ಗೇಣಿ ಇಂದು ಅನೌಪಚಾರಿಕವೂ, ಅಸುರಕ್ಷಿತವೂ, ಅದಕ್ಷವೂ ಆಗಿದೆ. ಈ ಕಾನೂನುಗಳು ಅಭಿವೃದ್ಧಿ ವಿರೋಧಿಯೂ ಬಡವರ ವಿರೋಧಿಯೂ ಆಗಿವೆ. ತಮ್ಮ ಭೂಮಿಯ ಒಡೆತನ ಕಳೆದುಕೊಳ್ಳುವ ಭಯದಿಂದ ಭೂಮಾಲೀಕರು ತಮ್ಮ ಭೂಮಿಯನ್ನು ಬೀಳು ಬಿಡುತ್ತಾರೆಯೇ ಹೊರತು ಗೇಣಿಗೆ ಕೊಡುವುದಿಲ್ಲ. ಹೀಗಾಗಿ ಇಡೀ ದೇಶದಲ್ಲಿ ಸುಮಾರು 2.1 ಕೋಟಿ ಹೆಕ್ಟೇರ್ ಭೂಮಿ ಬೀಳು ಬಿದ್ದಿದೆ. ಆದುದರಿಂದ ಭೂಮಿಯನ್ನು ಗೇಣಿಗೆ ಕೊಡುವುದನ್ನು ಕಾನೂನು ಬದ್ಧಗೊಳಿಸಿ ಭೂಮಾಲೀಕರಿಗೆ ಭೂಮಿಯ ಒಡೆತನದ ಹಕ್ಕಿಗೆ ರಕ್ಷಣೆ ನೀಡಿದರೆ ಅವರು ಹೆಚ್ಚು ಭೂಮಿಯನ್ನು ಗೇಣಿಗೆ ನೀಡುವ ಮೂಲಕ ಹೆಚ್ಚು ಭೂಮಿ ವ್ಯವಸಾಯಕ್ಕೊಳಪಡುತ್ತದೆ. ಚೀನಾ ಹಾಗೂ ವಿಯೆಟ್ನಾಂ ಮೊದಲಾದ ರಾಷ್ಟ್ರಗಳೂ ಗೇಣಿಪದ್ಧತಿಯನ್ನು ಇತ್ತೀಚೆಗೆ ಕಾನೂನು ಬದ್ಧಗೊಳಿಸಿವೆ. ಗ್ರಾಮೀಣ ಜನರು ಇಂದು ರಾಜಕೀಯವಾಗಿ ಬಲಶಾಲಿಯಾಗಿರುವುದರಿಂದ ಗೇಣಿ ಪದ್ಧತಿಯು ಶೋಷಣೆಗೆ ಅವಕಾಶ ಮಾಡಿಕೊಡುತ್ತದೆ ಎಂದು ಭಾವಿಸುವುದು ಸರಿಯಲ್ಲ. ಗೇಣಿ ಪದ್ಧತಿಯಿಂದ ಭೂಮಿ ಹಲವೇ ಜನರ ಕೈಯಲ್ಲಿ ಕೇಂದ್ರೀಕೃತಗೊಳ್ಳುತ್ತದೆ ಎನ್ನುವುದನ್ನು ತಪ್ಪಿಸಲು ಬೇಕಿದ್ದರೆ ಭೂಹಿಡುವಳಿಗಳ ಮೇಲೆ ರಾಜ್ಯ ಸರ್ಕಾರಗಳು ವಿಧಿಸಿರುವ ಮಿತಿಯ ಒಳಗಡೆ ಮಾತ್ರ ಗೇಣಿಗೆ ಅವಕಾಶ ಮಾಡಿಕೊಡಬಹುದು'.

ತಮ್ಮ ಭೂಮಿಯನ್ನು ಬೀಳು ಬಿಟ್ಟು ನಗರಗಳಲ್ಲಿ ವಾಸವಾಗಿರುವವರಿಗೆ ಭೂಮಿಯನ್ನು ಗೇಣಿಗೆ ಕೊಡಲು ಈ ಮಾದರಿ ಕಾನೂನು ಅವಕಾಶ ಮಾಡಿಕೊಡುತ್ತದೆ. ಇದು ಮತ್ತೆ ಅನುಪಸ್ಥಿತ ಜಮೀನುದಾರ ವರ್ಗವನ್ನು ಹುಟ್ಟುಹಾಕುತ್ತದೆ. ಹಾಗೆಯೇ ಒಬ್ಬ ವ್ಯಕ್ತಿ ಗೇಣಿಗೆ ಪಡೆಯಬಹುದಾದ ಭೂಮಿಗೆ ಮಿತಿ ಇಲ್ಲದಿರುವುದರಿಂದ ಇದು ಮತ್ತೆ ದೊಡ್ಡ ರೈತರ ವರ್ಗವನ್ನು ಹುಟ್ಟುಹಾಕುತ್ತದೆ. ಇವೆರಡೂ ಅವಕಾಶಗಳು ಕೃಷಿಯಲ್ಲಿ ಸಮೂಹಪ್ರಾಧಾನ್ಯದ ಬದಲು ವ್ಯಕ್ತಿಪ್ರಾಧಾನ್ಯವನ್ನೇ ಮೆರೆಯುತ್ತವೆ. ಇದರಿಂದಾಗಿ ರೈತ ಹಾಗೂ ಕೃಷಿಕೂಲಿ ವರ್ಗಗಳನ್ನು ಸೇರಿಸಿ ಒಂದೇ ವರ್ಗವನ್ನಾಗಿ ಮಾಡಬಯಸುವ ಭೂಸುಧಾರಣೆಯ 3ನೇ ಹಂತ ಹಿಮ್ಮೆಟ್ಟುತ್ತದೆಯಷ್ಟೇ ಅಲ್ಲ, ಗ್ರಾಮೀಣ ಸಮಾಜ ಇತಿಹಾಸದಲ್ಲಿ ಒಂದು ಹೆಜ್ಜೆ ಹಿಂದೆ ಹೋದಂತಾಗುತ್ತದೆ.

ಕೇಂದ್ರ ಸರ್ಕಾರ ಸೂಚಿಸುತ್ತಿರುವ ಕಾನೂನು ಬರೀ 'ಮಾದರಿ ಕಾನೂನು' ಆದುದರಿಂದ ಪ್ರತಿ ರಾಜ್ಯಕ್ಕೂ ತನಗೆ ಅನುಕೂಲವಾಗುವ ರೀತಿ ಈ ಕಾನೂನನ್ನು ಬದಲಾಯಿಸಿ ಜಾರಿಗೆ ತರುವ ಅಧಿಕಾರವಿರುತ್ತದೆ. ಇದನ್ನು ಬಳಸಿಕೊಂಡು, ಕರ್ನಾಟಕದಲ್ಲಿ ಗ್ರಾಮೀಣ ಸಮಾಜದ ಈ ಹಿಮ್ಮೆಟ್ಟುವಿಕೆ ತಪ್ಪಿಸಿ ಅದನ್ನು ಸಮಾಜವಾದಿ ದಿಕ್ಕಿನಲ್ಲಿ ಮುಂದೆ ಕೊಂಡೊಯ್ಯಲು ಪ್ರಯತ್ನಿಸಬಹುದಾಗಿದೆ. ಒಬ್ಬ ವ್ಯಕ್ತಿ ಭೂಮಿಯನ್ನು ಗೇಣಿಗೆ ಪಡೆಯುವುದನ್ನು ತಪ್ಪಿಸಿ ರೈತ ಹಾಗೂ ಕೃಷಿಕೂಲಿಗಳ ಗುಂಪುಗಳು ಮಾತ್ರ ಭೂಮಿಯನ್ನು ಗೇಣಿಗೆ ಪಡೆಯುವಂತಾಗಬೇಕು. ಭೂಮಿಯನ್ನು ಗೇಣಿಗೆ ಕೊಡುವ ಭೂಮಾಲೀಕನ ಒಡೆತನದ ಹಕ್ಕನ್ನು ರಕ್ಷಿಸುವಂತೆಯೇ ಈ ಕಾನೂನಿನಲ್ಲಿ ಗೇಣಿದಾರರ ಸ್ವಾಧೀನದ ಹಕ್ಕಿಗೂ ರಕ್ಷಣೆ ದೊರಕುವಹಾಗೆ ಮಾಡಬೇಕು. ಒಬ್ಬ ವ್ಯಕ್ತಿ ಗೇಣಿಗೆ ಪಡೆಯಬಹುದಾದ ಭೂಮಿಗೆ ಮಿತಿ ನಿಗದಿಪಡಿಸಿ ಗುಂಪು ಪಡೆಯಬಹುದಾದ ಭೂಮಿಗೆ ಮಿತಿ ವಿಧಿಸಬಾರದು. ಈ ಎಲ್ಲ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಮಾದರಿ ಕಾನೂನು ಹೇಳುವಂತೆ ಸರ್ಕಾರಿ ಅಧಿಕಾರಿಗಳಿಗೆ ವಹಿಸದೆ ಪಂಚಾಯಿತಿಗಳಿಗೆ ವಹಿಸಿಕೊಡಬೇಕು.

ಒಟ್ಟಿನಲ್ಲಿ ಈ ಹೊಸ ಕಾನೂನು ಜಮೀನುದಾರ-ಗೇಣಿದಾರ ವರ್ಗಗಳನ್ನು ಪುನರ್‌ರಚಿಸಿ ಸಮಾಜವನ್ನು ಹಿಂದಕ್ಕೆ ಕೊಂಡೊಯ್ಯುವುದೋ ಅಥವಾ ಕೊನೆಪಕ್ಷ ಕರ್ನಾಟಕದ ಮಟ್ಟದಲ್ಲಿ ಗುಂಪು ಕೃಷಿಯನ್ನು ಪ್ರೋತ್ಸಾಹಿಸುವ ಮೂಲಕ ಸಮಾಜವನ್ನು ಭೂಸುಧಾರಣೆಯ ಮುಂದಿನ ಹಂತಕ್ಕೆ ಕೊಂಡೊಯ್ಯುವುದೋ ಎನ್ನುವುದನ್ನು ಕಾದು ನೋಡಬೇಕು.

ಮಂಗಳವಾರ • ಮಾರ್ಚ್ 14, 2017 ಪ್ರಜಾವಾಣಿ

ಗೆಲ್ಲುವ ಸಾಧ್ಯತೆ ತೀರಾ ಕಡಿಮೆ ಇರುವ ಜೂಜಾಟಕ್ಕೆ ಮುಂದಾಗುತ್ತಿದೆ ರಾಜ್ಯ ಸರ್ಕಾರ

# ತಿರುಗುಬಾಣವಾದೀತು ಜಮೀನು ಗುತ್ತಿಗೆ ಪದ್ಧತಿ



ವಿಶ್ಲೇಷಣೆ

ನರೇಂದ್ರ ಪಾಣಿ

**ಗುತ್ತಿಗೆ ಪದ್ಧತಿ ಅನೌಪಚಾರಿಕ ಆಗಿರುವುದರಿಂದ ರಾಜ್ಯದಲ್ಲಿ ಈ ಕೃಷಿ ಸಂಬಂಧದ ಸ್ವರೂಪ ಮತ್ತು ಪ್ರಮಾಣದ ಬಗ್ಗೆ ವಿಶ್ವಾಸಾರ್ಹವಾದ ದತ್ತಾಂಶ ಲಭ್ಯ ಇಲ್ಲ. ತನ್ನಲ್ಲಿರುವ ಜಮೀನಿನಲ್ಲಿ ಬೇಸಾಯ ಮಾಡಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಮಾತ್ರ ಹಿಡುವಳಿದಾರ ಅದನ್ನು ಗುತ್ತಿಗೆಗೆ ನೀಡುತ್ತಾನೆ ಎಂಬುದನ್ನು ನಮಗೆ ಲಭ್ಯ ಇರುವ ಪುರಾವೆ ಸ್ಪಷ್ಟಪಡಿಸುತ್ತದೆ. ಹೆಚ್ಚಿನ ಪ್ರಕರಣಗಳಲ್ಲಿ ಹಿಡುವಳಿದಾರ ಬಡವನಾಗಿದ್ದು ಬೇಸಾಯಕ್ಕೆ ಬೇಕಾದ ಸಂಪನ್ಮೂಲವನ್ನು ಹೊಂದಿಸಲು ಸಾಧ್ಯವಾಗದಿರುವುದೇ ಜಮೀನನ್ನು ಗುತ್ತಿಗೆಗೆ ನೀಡಲು ಕಾರಣ.**

**ನೀತಿ ಆಯೋಗ** ಮುಂದಿಟ್ಟಿರುವ ಪ್ರಸ್ತಾವನೆಯಿಂದ ಪ್ರೇರಣೆಗೊಂಡು ಕೃಷಿ ಭೂಮಿಯ ಗುತ್ತಿಗೆಯನ್ನು ಕಾನೂನುಬದ್ಧಗೊಳಿಸಲು ಕರ್ನಾಟಕ ಸರ್ಕಾರ ಸಜ್ಜಾಗುತ್ತಿದೆ. ಬೀಳು ಬಿದ್ದಿರುವ ಭೂಮಿಯ ಪ್ರಮಾಣವನ್ನು ಕಡಿಮೆಗೊಳಿಸಿ ಕೃಷಿ ಉತ್ಪನ್ನವನ್ನು ಹೆಚ್ಚಿಸುವುದು ಭೂ ಸುಧಾರಣೆಯನ್ನು ತಿರುವು ಮುರುವಾಗಿಸುವುದಕ್ಕೆ ಇರುವ ಸಮರ್ಥನೆಯಾಗಿದೆ. ಸುಮಾರು ನಾಲ್ಕು ದಶಕಗಳಿಂದ ರಾಜ್ಯದ ಕೃಷಿ ಸಂಬಂಧಗಳನ್ನು ಅಧ್ಯಯನ ಮಾಡುತ್ತಿರುವವರಿಗೆ, ಚುನಾವಣಾ ವರ್ಷದಲ್ಲಿ ಇದೊಂದು ದೊಡ್ಡ ಜೂಜಾಟದಂತೆ ಕಾಣಿಸುತ್ತದೆ; ರಾಜ್ಯ ಸರ್ಕಾರ ಗೆಲ್ಲುವ ಸಾಧ್ಯತೆ ಬಹಳ ಕಡಿಮೆ ಇರುವ ಜೂಜಾಟ.

1970ರ ದಶಕದಲ್ಲಿ ಭೂ ಸುಧಾರಣೆಯಿಂದ ಜಮೀನು ಕಳೆದುಕೊಂಡ ಜನರ ಗಾಯಗಳು ಮತ್ತೆ ತೆರೆದುಕೊಳ್ಳುವುದು ಈ ನಿರ್ಧಾರದ ತಕ್ಷಣದ ಪರಿಣಾಮವಾಗಲಿದೆ. ಭೂ ಸುಧಾರಣೆಯಿಂದ ಪ್ರತಿಕೂಲ ಪರಿಣಾಮಕ್ಕೆ ಒಳಗಾದವರ ಜೀವನ ಸ್ಥಿತಿ ಗಣನೀಯವಾಗಿ ಬದಲಾಗಿದೆ. ದಕ್ಷಿಣ ಕನ್ನಡ ಮತ್ತು ಶಿವಮೊಗ್ಗದಂತಹ ಜಿಲ್ಲೆಗಳಲ್ಲಿ ಜಮೀನು ಕಳೆದುಕೊಂಡವರು ದೊಡ್ಡ ಜಮೀನ್ದಾರರಾದರೆ ಬಡ ಗೇಣಿದಾರರಿಗೆ ಅದರ ಪ್ರಯೋಜನ ಸಿಕ್ಕಿತು. ಅತ್ಯಗತ್ಯವಾಗಿದ್ದ ಪ್ರಗತಿಪರ ಸಾಮಾಜಿಕ ನಡೆ ಎಂದು ಭೂ ಸುಧಾರಣೆಯನ್ನು ಬಲವಾಗಿ ಸಮರ್ಥಿಸಿಕೊಳ್ಳಬಹುದು. ತಮ್ಮ ಪೂರ್ವಜರು ಜಮೀನು ಕಳೆದುಕೊಂಡ ಕಾರಣಕ್ಕೆ ತಾವು ಕಷ್ಟಪಡಬೇಕಾಯಿತು ಎಂದು ಭಾವಿಸಿರುವ ನಂತರದ ತಲೆಮಾರಿನವರ ಆಕ್ರೋಶವನ್ನು 'ತಪ್ಪಿಸಲಾಗದ ಸಾಮಾಜಿಕ ಬೆಲೆ' ಎಂದು ತಳ್ಳಿ ಹಾಕಬಹುದು.

ದುರದೃಷ್ಟವೆಂದರೆ, ಕರ್ನಾಟಕದ ಇತರ ಭಾಗಗಳಲ್ಲಿ ಪರಿಸ್ಥಿತಿ ಈ ರೀತಿ ಇರಲಿಲ್ಲ. ದಕ್ಷಿಣ ಕರ್ನಾಟಕದ ಹಳ್ಳಿಯೊಂದರಲ್ಲಿ ಭೂ ಸುಧಾರಣೆಯಿಂದಾಗಿ ತನ್ನ ಎರಡು ಎಕರೆ ಜಮೀನು ಕಳೆದುಕೊಂಡ ದಲಿತನೊಬ್ಬನನ್ನು ಭೇಟಿಯಾದ ನಂತರ 1980ರಲ್ಲಿ ಭೂ ಸುಧಾರಣೆಗೆ ಸಂಬಂಧಿಸಿ ಕೆಲಸ ಮಾಡಲು ನಿರ್ಧರಿಸಿದ್ದು ನನಗೆ ಇನ್ನೂ ನೆನಪಿದೆ. ಬೇಸಾಯ ಮಾಡಲು ತನ್ನಲ್ಲಿ ಹಣ ಇಲ್ಲದ ಕಾರಣಕ್ಕೆ ಜಮೀನನ್ನು ಬೇಸಾಯ ಮಾಡುವುದಕ್ಕಾಗಿ ಹಳ್ಳಿಯ ದೊಡ್ಡ ರೈತನೊಬ್ಬನಿಗೆ ನೀಡಿದ್ದಾಗಿ ಆ ದಲಿತ ವ್ಯಕ್ತಿ ನನಗೆ ಹೇಳಿದ್ದ. ಭೂ ಸುಧಾರಣೆ ಸಂದರ್ಭದಲ್ಲಿ ಆ ದೊಡ್ಡ ರೈತ ತಾನು ಗೇಣಿದಾರ ಎಂದು ಅರ್ಜಿ ಹಾಕಿ ಆ ಜಮೀನನ್ನು ಪಡೆದುಕೊಂಡಿದ್ದ.

ಇದು ಇಂತಹ ಏಕೈಕ ಪ್ರಕರಣ ಏನಲ್ಲ. ಸಣ್ಣ ಹಿಡುವಳಿದಾರರಿಗೆ ಭೂ ಸುಧಾರಣೆ ಕಾನೂನಿನಿಂದ ವಿನಾಯಿತಿ ನೀಡಿದರೆ ಅದು ಕಾನೂನಿನ ಲೋಪವಾಗಬಹುದು ಎಂಬ ಕಾರಣಕ್ಕೆ ದೇವರಾಜ ಅರಸು ನೇತೃತ್ವದ ಸರ್ಕಾರ ವಿನಾಯಿತಿ ನೀಡಲಿಲ್ಲ. ಹೀಗಾಗಿ ಗಣನೀಯ ಪ್ರಮಾಣದಲ್ಲಿ ಸಣ್ಣ ಹಿಡುವಳಿದಾರರು ಭೂ ಸುಧಾರಣೆಯಿಂದಾಗಿ ತಮ್ಮ ಜಮೀನು ಕಳೆದುಕೊಂಡರು.

ಜಮೀನನ್ನು ಗುತ್ತಿಗೆಗೆ ನೀಡಿದ್ದರು ಎಂಬ ಒಂದೇ ಕಾರಣಕ್ಕೆ ತಮ್ಮ ಜೀವನಕ್ಕೆ ಆಧಾರವಾಗಿದ್ದ ಜಮೀನನ್ನು ಕಳೆದುಕೊಂಡ ಸಣ್ಣ ರೈತರ ನಂತರದ ತಲೆಮಾರಿನವರಿಗೆ, ಜಮೀನು ಪಡೆದುಕೊಂಡವರು ಈಗ ಮತ್ತೆ ಅದನ್ನು ಗುತ್ತಿಗೆಗೆ ನೀಡಬಹುದು ಎಂದು ಹೇಳುವ ಸ್ಥಿತಿ ಹೊಸ ಕಾನೂನಿನಿಂದಾಗಿ ನಿರ್ಮಾಣವಾಗುತ್ತದೆ. ಭೂ ಸುಧಾರಣೆ ನಡೆದು ನಾಲ್ಕು ದಶಕಗಳಾದವು; ಹಾಗಾಗಿ ಅದರ ಪರಿಣಾಮಗಳು ಮರೆತುಹೋಗಿವೆ ಎಂದು ಸರ್ಕಾರ ಭಾವಿಸಿರಬಹುದು. 1970 ಮತ್ತು 1980ರ ದಶಕಗಳಲ್ಲಿ ತಮ್ಮ ಪೂರ್ವಜರು ಜಮೀನು ಕಳೆದುಕೊಂಡ ಕಾರಣಕ್ಕೆ



ತಮ್ಮ ಜೀವನವೇ ಬದಲಾಗಿ ಹೋದ ಜನರಿಗೆ ಸುಧಾರಣೆಯನ್ನು ಮರೆಯುವುದು ಅಷ್ಟು ಸುಲಭವಲ್ಲ.

ಇವೆಲ್ಲವೂ ಭಾವನಾತ್ಮಕ ಬಡಬಡಿಕೆ ಎಂದು ನಿರ್ಲಕ್ಷಿಸಲು ಹಟಮಾರಿ ನೀತಿ ನಿರೂಪಕರಿಗೆ ಸಾಧ್ಯವಾಗಬಹುದೇನೋ. ನೀತಿ ಯಾವಾಗಲೂ ಖಚಿತ ಚಿಂತನೆಯಿಂದ ಕೂಡಿರಬೇಕು. ಗುತ್ತಿಗೆ ಪದ್ಧತಿಯನ್ನು ಮತ್ತೆ ಆರಂಭಿಸುವುದು ಹೆಚ್ಚು ಸಮಾನತೆ ಮತ್ತು ದಕ್ಷವಾದ ಗ್ರಾಮೀಣ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ ಎಂದಾದರೆ ಅದಕ್ಕೆ ವಿರುದ್ಧವಾದ ಭಾವನೆಯನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸಲೇಬೇಕು. ಇಂದಿನ ಗ್ರಾಮೀಣ ಕರ್ನಾಟಕದಲ್ಲಿ ನಾವು ಕಾಣುತ್ತಿರುವ ಕೃಷಿ ಸಂಬಂಧಗಳ ಸಂದರ್ಭದಲ್ಲಿ ಪ್ರಸ್ತಾವಿತ ಗುತ್ತಿಗೆ ಕಾನೂನನ್ನು ಇರಿಸಿ ನೋಡಿದರೆ ಅದು ಸಮಾನತೆ ಮತ್ತು ದಕ್ಷತೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ.

ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಅನೌಪಚಾರಿಕ ರೀತಿಯಲ್ಲಿ ಗುತ್ತಿಗೆ ಪದ್ಧತಿ ಅಸ್ತಿತ್ವದಲ್ಲಿದೆ ಎಂಬುದರ ಮೇಲೆ ಸಮಾನತೆಯ ವಾದ ಆಧಾರಿತವಾಗಿದೆ. ಗುತ್ತಿಗೆದಾರ ಬಡವನಾಗಿದ್ದು ಗ್ರಾಮೀಣ ವ್ಯವಸ್ಥೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಆತನಿಗೆ ಸಾಧ್ಯವಾಗುತ್ತಿಲ್ಲ ಎಂಬುದು ಈ ನೆಲೆಯ ಮುಂದುವರಿದ ಭಾಗವಾಗಿದೆ. ಕೃಷಿ ನಾಶದ ಸಂದರ್ಭದಲ್ಲಿ ಸರ್ಕಾರ ನೀಡುವ ಯಾವುದೇ ಸೌಲಭ್ಯ ಜಮೀನು ಮಾಲೀಕನಿಗೆ ದೊರಕುತ್ತದೆಯೇ ಹೊರತು ಗುತ್ತಿಗೆದಾರನಿಗೆ ಅದು ತಲುಪುವುದಿಲ್ಲ. ಗುತ್ತಿಗೆದಾರ ಶ್ರೀಮಂತನಾಗಿದ್ದು ಜಮೀನು ಮಾಲೀಕ ಸಣ್ಣ ಹಿಡುವಳಿಯನ್ನಷ್ಟೇ ಹೊಂದಿದ್ದು ಬಡವನಾಗಿದ್ದರೆ ಈ ವಾದ ಮುರಿದು ಬೀಳುತ್ತದೆ. ಇಂತಹ ಸನ್ನಿವೇಶದಲ್ಲಿ, ಇಳುವರಿಯಿಂದ ದೊರೆಯುವ ಲಾಭದ ಹಂಚಿಕೆಯು ಜಮೀನು ಮಾಲೀಕನಿಗೆ ಹೆಚ್ಚೇನೂ ದೊರೆಯದು. ಆಗ ಬಡ ಜಮೀನು ಮಾಲೀಕನಿಗೆ ಸರ್ಕಾರ ನೀಡುವ ಜೀವನೋಪಾಯ ಬೆಂಬಲದ ಅಗತ್ಯ ಇದೆ.

ಗುತ್ತಿಗೆ ಪದ್ಧತಿ ಅನೌಪಚಾರಿಕ ಆಗಿರುವುದರಿಂದ ರಾಜ್ಯದಲ್ಲಿ ಈ ಕೃಷಿ ಸಂಬಂಧದ ಸ್ವರೂಪ ಮತ್ತು ಪ್ರಮಾಣದ ಬಗ್ಗೆ ವಿಶ್ವಾಸಾರ್ಹವಾದ ದತ್ತಾಂಶ ಲಭ್ಯ ಇಲ್ಲ. ತನ್ನಲ್ಲಿರುವ ಜಮೀನಿನಲ್ಲಿ ಬೇಸಾಯ ಮಾಡಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಮಾತ್ರ ಹಿಡುವಳಿದಾರ ಅದನ್ನು ಗುತ್ತಿಗೆಗೆ ನೀಡುತ್ತಾನೆ ಎಂಬುದನ್ನು ನಮಗೆ ಲಭ್ಯ ಇರುವ ಪುರಾವೆ ಸ್ಪಷ್ಟಪಡಿಸುತ್ತದೆ. ಹೆಚ್ಚಿನ ಪ್ರಕರಣಗಳಲ್ಲಿ ಹಿಡುವಳಿದಾರ ಬಡವನಾಗಿದ್ದು ಬೇಸಾಯಕ್ಕೆ ಬೇಕಾದ ಸಂಪನ್ಮೂಲವನ್ನು ಹೊಂದಿಸಲು ಸಾಧ್ಯವಾಗದಿರುವುದೇ ಜಮೀನನ್ನು ಗುತ್ತಿಗೆಗೆ ನೀಡಲು ಕಾರಣ. ಇಂತಹ ಪ್ರಕರಣಗಳಲ್ಲಿ ಜಮೀನು ಗುತ್ತಿಗೆಗೆ ಪಡೆದುಕೊಳ್ಳುವವರು ತಮ್ಮ ಜಮೀನಿನ ಜತೆಗೆ ಇನ್ನಷ್ಟು ಜಮೀನಿನಲ್ಲಿ ಬೇಸಾಯ ಮಾಡಲು ಬೇಕಾದಷ್ಟು ಸಂಪನ್ಮೂಲ ಹೊಂದಿರುವಷ್ಟು ಶ್ರೀಮಂತರಾಗಿರುತ್ತಾರೆ.


ಈಗ ಅಸ್ತಿತ್ವದಲ್ಲಿರುವ ಪ್ರಬಲ ವರ್ಗದ ಅನೌಪಚಾರಿಕ ಗುತ್ತಿಗೆ ಪದ್ಧತಿ ಭೂಸುಧಾರಣೆಯ ಅನುಭವಗಳಿಂದ ಗಾಢವಾಗಿ ಪ್ರಭಾವಿತವಾಗಿದೆ ಎಂಬುದು ಆಶ್ಚರ್ಯಕರ ಅಂಶವೇನೂ ಅಲ್ಲ. ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಸೌಂದರ್ಯ ಅಯ್ಯರ್ ಅವರು ಕಳೆದ ಕೆಲವು ವರ್ಷಗಳಿಂದ ಮೂರು ಹಳ್ಳಿಗಳನ್ನು ಸಾಕಷ್ಟು ವಿವರವಾಗಿ ಅಧ್ಯಯನ ಮಾಡುತ್ತಿದ್ದಾರೆ- ಹೈದರಾಬಾದ್ ಕರ್ನಾಟಕ, ಹಳೆ ಮೈಸೂರು ಪ್ರದೇಶ ಮತ್ತು ಕರಾವಳಿ ಕರ್ನಾಟಕದ ತಲಾ ಒಂದೊಂದು ಹಳ್ಳಿಯನ್ನು ಆಯ್ಕೆ ಮಾಡಿಕೊಂಡು ಅವರು ಅಧ್ಯಯನ ನಡೆಸುತ್ತಿದ್ದಾರೆ. ಭೂ ಸುಧಾರಣೆ ಅತ್ಯಂತ ಪರಿಣಾಮಕಾರಿಯಾಗಿದ್ದು ಭೂಮಿ ಶ್ರೀಮಂತ ಜಮೀನ್ದಾರನಿಂದ ಬಡ ರೈತನ ಕೈಗೆ ಹೋದ ಕರಾವಳಿ ಕರ್ನಾಟಕದಲ್ಲಿ ಅನೌಪಚಾರಿಕ ಗುತ್ತಿಗೆ ಪದ್ಧತಿ ಇಲ್ಲ. ಹಳೆ ಮೈಸೂರು ಪ್ರದೇಶದಲ್ಲಿ ಸ್ವಂತ ಜಮೀನು ಹೊಂದಿಲ್ಲದ ಗುತ್ತಿಗೆದಾರರು ಇಲ್ಲ. ಜಮೀನು ಹೊಂದಿರುವ ರೈತರು ತಾವು ಬೇಸಾಯ ಮಾಡುವ ಹೊಲದ ವಿಸ್ತೀರ್ಣವನ್ನು ಹೆಚ್ಚಿಸುವುದಕ್ಕಾಗಿ ಜಮೀನು ಗುತ್ತಿಗೆಗೆ ಪಡೆಯುವ ರೀತಿಯಲ್ಲಿ ಇಲ್ಲಿನ ಅನೌಪಚಾರಿಕ ಗುತ್ತಿಗೆ ಪದ್ಧತಿ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ಭೂಸುಧಾರಣೆಗೆ ಹಿಂದಿನ ದಿನಗಳಲ್ಲಿ ಪ್ರಬಲ ವರ್ಗಗಳು ಜಮೀನು ಗುತ್ತಿಗೆಗೆ ಪಡೆಯುವ ಪದ್ಧತಿ ಅಸ್ತಿತ್ವದಲ್ಲಿತ್ತು. ಈಗಿನ ಅನೌಪಚಾರಿಕ ವ್ಯವಸ್ಥೆಯೂ ಅದೇ ಸ್ವರೂಪ ಪಡೆದುಕೊಂಡಿದೆ. ಹೀಗಾಗಿ, ಬಡ ಸಣ್ಣ ಹಿಡುವಳಿದಾರನ ಬದಲಿಗೆ ಶ್ರೀಮಂತ ಗುತ್ತಿಗೆದಾರನಿಗೆ ಶಕ್ತಿ ತುಂಬುವ ರೀತಿಯಲ್ಲಿ ಗುತ್ತಿಗೆ ಪದ್ಧತಿಯನ್ನು ಕಾನೂನುಬದ್ಧಗೊಳಿಸಿದರೆ ಅಸಮಾನತೆ ಕಡಿಮೆಯಾಗುವ ಬದಲಿಗೆ ಹೆಚ್ಚಲಿದೆ.

ದಕ್ಷತೆ ಹೆಚ್ಚುತ್ತದೆ ಎಂಬ ವಾದವೇನಾದರೂ ಇದ್ದರೆ ಅದು ಇನ್ನಷ್ಟು ದುರ್ಬಲ. ಹಿಂದೆ ಭೂಮಾಲೀಕರಿಂದ ಗೇಣಿದಾರರಿಗೆ ಭೂಮಿ ವರ್ಗಾವಣೆ ಆದ ರಾಜ್ಯದಲ್ಲಿ ಜಮೀನಿನ ಮಾಲೀಕತ್ವ ಪಡೆದವರು ಜಮೀನನ್ನು ಮತ್ತೆ ಗುತ್ತಿಗೆ ನೀಡುವುದು ಅವಾಸ್ತವಿಕ ಅನಿಸುತ್ತದೆ. ಜಮೀನಿನ ಮಾಲೀಕತ್ವ ಬದಲಾಗದು ಎಂಬುದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಹೊಸ ಕಾನೂನಿನಲ್ಲಿ ಸಾಕಷ್ಟು ನಿಯಮಗಳನ್ನು ರೂಪಿಸಲಾಗುವುದು ಎಂದು ಸರ್ಕಾರ ವಾದಿಸಬಹುದು. ಯಾವುದೇ ಲೋಪ ಇಲ್ಲದ ನಿಯಮಗಳನ್ನು ಜಾರಿಗೆ ತಂದರೂ ಮುಂದಿನ ಸರ್ಕಾರ ಅವುಗಳನ್ನು ಬದಲಾಯಿಸುವುದಿಲ್ಲ ಎಂಬ ಯಾವ ಖಾತರಿಯೂ ಇಲ್ಲ. ಹಿಂದುಳಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿಯ ನಾಯಕತ್ವದ ಕಾಂಗ್ರೆಸ್ ಸರ್ಕಾರ ದೇವರಾಜ ಅರಸು ನೇತೃತ್ವದ ಸರ್ಕಾರ ಜಾರಿಗೆ ತಂದ ಭೂಸುಧಾರಣೆ ಕಾನೂನಿನ ಮುಖ್ಯ ಲಕ್ಷಣಗಳನ್ನೇ ತಿರುವು ಮುರುವಾಗಿಸುವುದು ಸಾಧ್ಯವಾದರೆ ಮುಂದಿನ ಸರ್ಕಾರ ಗುತ್ತಿಗೆದಾರನಿಗೇ ಭೂಮಿಯ ಹಕ್ಕು ಎಂಬ ನಿಯಮ ಜಾರಿಗೆ ತರಲಿಕ್ಕಿಲ್ಲ ಎಂದು ಹೇಳಲಾಗದು. ಗುತ್ತಿಗೆ ನೀಡಿಕೆಯನ್ನು ಅಧಿಕೃತವಾಗಿ ನೋಂದಾಯಿಸಿಕೊಳ್ಳಬೇಕು ಎಂಬ ನಿಯಮ ಜಾರಿಗೆ ಬರುವುದರೊಂದಿಗೆ ಈಗ ಅನೌಪಚಾರಿಕವಾಗಿ ಜಮೀನು ಗುತ್ತಿಗೆ ನೀಡುತ್ತಿರುವವರು ಅದನ್ನು ನಿಲ್ಲಿಸಿಬಿಡಬಹುದು. ಇದು ಬೀಳು ಬಿದ್ದ ಜಮೀನಿನ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬಹುದು. ಕರ್ನಾಟಕದಲ್ಲಿ ಬೀಳು ಬಿದ್ದ ಜಮೀನು ಒಂದು ಮಟ್ಟಿಗೆ ಈಗಾಗಲೇ ಸಮಸ್ಯೆಯಾಗಿ ಕಾಡುತ್ತಿದೆ. ಅದರ ಪ್ರಮಾಣ ಇನ್ನಷ್ಟು ಹೆಚ್ಚಾದರೆ ಈಗಾಗಲೇ ಸಂಕಷ್ಟದಲ್ಲಿರುವ ಬೇಸಾಯ ಕ್ಷೇತ್ರವನ್ನು ಅದು ಇನ್ನಷ್ಟು ಸಂಕಟಕ್ಕೆ ದೂಡಬಹುದು.

ಒಂದು ಕಾಲದ ಚಿಂತನೆಯನ್ನು ಆವರಿಸಿಕೊಂಡಿದ್ದ ಭೂ ಸುಧಾರಣೆಯನ್ನು ತಿರುವು ಮುರುವಾಗಿಸುವುದು ರಾಜ್ಯ ಎದುರಿಸುತ್ತಿರುವ ಕೃಷಿ ಬಿಕ್ಕಟ್ಟಿನಿಂದ ಹೊರಗೆ ಬರುವ ದಾರಿ ಅಲ್ಲ. ಬದಲಿಗೆ ನಮ್ಮ ಕಾಲಕ್ಕೆ ಹೆಚ್ಚು ಹೊಂದಿಕೆ ಆಗುವಂತಹ ಪರ್ಯಾಯ ವಿಧಾನಗಳನ್ನು ಕಂಡುಕೊಳ್ಳಬೇಕು.

ಲೇಖಕ: ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (ನಿಯಾಸ್), ಬೆಂಗಳೂರು

# ಕರ್ನಾಟಕ ಕೃಷಿ ಬೆಲೆ ಆಯೋಗದ ಕಾರ್ಯಜಾಲ



ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

(Karnataka Agriculture Price Commission)

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು 2013-14ನೇ ಸಾಲಿನ ಆಯವ್ಯಯ ಭಾಷಣದ ಪ್ರಸ್ತಾಪದನ್ವಯ, ಸರ್ಕಾರದ ಆದೇಶ ಸಂಖ್ಯೆ: ಕೃಎ61ಕೃಎಇ2013, ಬೆಂಗಳೂರು, ದಿ:31/01/2014 ರಂತೆ 10 ಷರತ್ತು ಮತ್ತು ನಿಬಂಧನೆ, 10 ಕರ್ತವ್ಯ ಹಾಗೂ ರಚನೆಗಳಂತೆ ಓರ್ವ ಅಧ್ಯಕ್ಷರು ಮತ್ತು ಐವರು ಸದಸ್ಯರಿರುವ ಕರ್ನಾಟಕ ಕೃಷಿ ಬೆಲೆ ಆಯೋಗ'ವನ್ನು ರಚಿಸಲಾಯಿತು.

**ದೃಷ್ಟಿಕೋನ:**

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಟ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧನೆ, ಆಹಾರ ಭದ್ರತಾ ಅಗತ್ಯಗಳ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ತೆಯನ್ನು ಕಲ್ಪಿಸುವುದು ಇತ್ಯಾದಿ ಕರ್ನಾಟಕ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

**ಧ್ಯೇಯೊದ್ದೇಶಗಳು:**

ಕೃಷಿ ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅಧಿಕ ಉತ್ಪಾದನೆ ಸಮಯದಲ್ಲಿ 'ಮಾರುಕಟ್ಟೆ ಮಧ್ಯಪ್ರವೇಶ', ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಸಾಮೂಹಿಕ ಚೌಕಾಸಿ ಸಾಮರ್ಥ್ಯ (Collective Bargaining Power) ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ.


**ಕೃಷಿ ಆಯುಕ್ತರ ಕಾರ್ಯಾಲಯ ಆವರಣ**

**ಶೇಷಾದ್ರಿ ರಸ್ತೆ, ಬೆಂಗಳೂರು – 560 001**

**ಫೋನ್: 080-22115496**

**ಇ-ಮೇಲ್: agripricecommission@gmail.com**

**ಜಾಲತಾಣ: www.kapricom.org**



Design by dataworx: www.dataworx.co.in